# ಶ್ರೀರಾಮನಾಮ ಮಹಿಮಾ

**ಎಸ್. ಪಿ. ಶ್ರೀನಿವಾಸ ಭಟ್ಟಜಿ**

ರಾಮಾಯಣದಲ್ಲಿ (ಶಿವನಿರ್ಮಿತ) ಒಂದು ನೂರು ಕೋಟಿ ಶ್ಲೋಕಗಳಿವೆ. ಇದನ್ನು ಯಾಚಿಸಿದವರು ಮೂರು ವರ್ಗದವರು. ಶಿವನು ಮೂವರಿಗೂ ಸರಿಯಾಗಿ ವಿಭಾಗಿಸಿ ಒಬ್ಬೊಬ್ಬವರ್ಗದವರಿಗೂ ಮೂವತ್ತಮೂರು ಕೋಟಿ, ಮೂವತ್ತಮೂರುಲಕ್ಷದ ಮೂವತ್ತ ಮೂರು ಸಾವಿರದ ಮುನ್ನೂರ ಮೂವತ್ತ ಮೂರು ಶ್ಲೋಕಗಳು (33,33,33,333) ಒಟ್ಟು ತೊಂಭತ್ತೊಂಭತ್ತು ಕೋಟಿ, ತೊಂಭತ್ತೊಂಭತ್ತು ಲಕ್ಷದ, ತೊಂಭತ್ತೊಂಭತ್ತು ಸಾವಿರದ ಒಂಭೈನೂರ ತೊಂಭತ್ತೊಂಭತ್ತು ಶ್ಲೋಕಗಳನ್ನು ಮೂವರಿಗೂ ಸರಿಯಾಗಿ ಹಂಚಿದನು.

ಈ ಗ್ರಂಥದಲ್ಲಿ ಬಾಕಿ ಇರುವುದು ಒಂದೇ ಒಂದು ಶ್ಲೋಕ. ಅದನ್ನು ಮೂವರೂ ಬೇಕೆಂದು ಹಠಹಿಡಿದರು. ದೇವತೆಗಳು ಹೇಳುತ್ತಾರೆ ನಮಗೆ ಕೊಡಿ, ಋಷಿಗಳು ಹೇಳುತ್ತಾರೆ ನಮಗೆ ಕೊಡಿ, ರಾಕ್ಷಸರೂ ಹೇಳುತ್ತಾರೆ ನಮಗೆ ಕೊಡಿ. ಕೇವಲ ಒಂದು ಶ್ಲೋಕಕ್ಕಾಗಿ ಮೂವರೂ ಜಗಳ ಶುರು ಮಾಡಿದರು. ಶಿವನಿಗೆ ಇದು ಇಷ್ಟವಾಗಲಿಲ್ಲ.

ಶಿವನಿಗೆ ಆಶ್ಚರ್ಯವಾಯಿತು. ನನ್ನ ಧಾಮಕ್ಕೆ ಬಂದ ಮೇಲೆ ಪಶು - ಪಕ್ಷಿಗಳೂ ಕೂಡಾ ಜಗಳಾಡುವುದಿಲ್ಲ. ನೀವು ಮಾತ್ರ ಹೀಗೆ ಯಾಕೆ ಜಗಳಾಡುತ್ತೀರಿ? ಶಿವನೇ ಸ್ವಲ್ಪ ಸಮಾಧಾನಕ್ಕೆ ಬಂದರೂ ಈ ಮೂವರು ಹಠವನ್ನು ಬಿಡಲಿಲ್ಲ. ಕೇವಲ ಒಂದು ಶ್ಲೋಕಕ್ಕಾಗಿ ಮೂರು ವರ್ಗದವರೂ ಅವರ ಯಾಚನೆ ಮುಂದುವರೆಸಿದರು. ಆಗ ಶಿವನು ಹೇಳುತ್ತಾನೆ. ದುರಾಗ್ರಹ ಮಾಡಬೇಡ. ಈ ಶ್ಲೋಕದಲ್ಲಿರುವ ಅಕ್ಷರಗಳನ್ನು ಮೂವರಿಗೂ ಸಮಾನವಾಗಿ ಭಾಗಿಸಿಕೊಡುತ್ತೇನೆ. ಈ ಶ್ಲೋಕವು ಅನುಷ್ಟುಪ್ ಛಂದಸ್ಸಿನಲ್ಲಿದೆ, ಈ ಛಂದಸ್ಸಿನಲ್ಲಿ ಅಕ್ಷರ ಸಂಖ್ಯೆಗಳು ಮೂವತ್ತೆರಡು; ಅಕ್ಷರಗಳನ್ನು ಈಶ್ವರನು ಒಬ್ಬೊಬ್ಬವರ್ಗದವರಿಗೂ ಹತ್ತು ಅಕ್ಷರಗಳು ಬರುವಂತೆ ಭಾಗಿಸಿಕೊಟ್ಟನು. ಇಲ್ಲಿ ಇನ್ನು ಎರಡು ಅಕ್ಷರಗಳು ಬಾಕಿ ಉಳಿದುವು. ಈ ಎರಡಕ್ಷರಗಳೂ ನಮಗೆ ಬೇಕೆಂದು ಮೂವರೂ ಪಟ್ಟು ಹಿಡಿದರು.

ಆಗ ಶಿವನು ಕೊನೆಯಲ್ಲಿ ಹೇಳುತ್ತಾನೆ. ನಾನು ಬರೆದ ನೂರು ಕೋಟಿ ಶ್ಲೋಕಗಳಲ್ಲಿ ಸರ್ವಸ್ವವನ್ನು ನಿಮಗೆ ಕೊಟ್ಟಾಯಿತು. ಬಾಕಿ ಉಳಿದ ಎರಡು ಅಕ್ಷರಗಳನ್ನು ಸಮಭಾಗ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಈ ಎರಡು ಅಕ್ಷರಗಳನ್ನು ನಾನು ಯಾರಿಗೂ ಕೊಡುವುದಿಲ್ಲ. ನಾನೇ ಈ ಎರಡಕ್ಷರಗಳನ್ನು ನನ್ನ ಕಂಠದಲ್ಲಿ ಇಟ್ಟುಕೊಳ್ಳುತ್ತೇನೆ. ಈ ಎರಡಕ್ಷರಗಳೇ 'ರಾ - ಮ' ನಾಮ. ಸಕಲ ವೇದಗಳ ಸಾರ. ಅತಿ ಸರಳವಾಗಿರುವ ನಾಮ. ತುಂಬಾ ಮಾಧುರ್ಯ ನಾಮ. ಈ ರಾಮನಾಮದಲ್ಲಿ ಅಮೃತಕ್ಕೂ ಮಿಗಿಲಾದ ಮಧುರವು ತುಂಬಿದೆ. ನಿರಂತರವಾಗಿ ಯಾರು ರಾಮನಾಮವನ್ನು ಪಾನ ಮಾಡುತ್ತಾರೋ ಅವರೇ ಬಲ್ಲರು ರಾಮ ನಾಮದ ರುಚಿ.

ಶಿವನು ಹೇಳುತ್ತಾನೆ - "ನಾನು ಕಂಠದಲ್ಲಿ ಇಟ್ಟುಕೊಂಡಿದ್ದ ಹಾಲಾಹಲವೆಂಬ ಕಾಲಕೂಟ ವಿಷವೂ ಕೂಡಾ ಕೇವಲ ರಾಮನಾಮ ಉಚ್ಚರಿಸುತ್ತಿರುವುದರಿಂದ ಅಮೃತವಾಗಿ ಪರಿಣಮಿಸಿತು".

ಯಾರೇ ಆಗಲಿ, ಸಂಸಾರಕ್ಕೆ ಬಂದ ಮೇಲೆ ಸ್ವಲ್ಪವಾದರೂ ವಿಷ ಕುಡಿಯಲೇಬೇಕಾಗುತ್ತದೆ. 'ಸಂಸಾರಿ'ಗೆ ಮದುವೆ ಆಗಿರಲೇಬೇಕೆಂಬ ನಿರ್ಬಂಧವಿಲ್ಲ. ವಿಧಿವಿಧ ವಸ್ತುಗಳನ್ನು ಶೇಖರಿಸುವುದು, ಹಣ ಸಂಪಾದನೆ, ಸ್ನೇಹಿತರ ಸಂಸರ್ಗ ಇವೆಲ್ಲಾ ಸಂಸಾರ ಎಂಬ ಶಬ್ದಕ್ಕೆ ಸೇರಿಕೊಂಡಿವೆ. ಇನ್ನು ಪತ್ನಿಯಾಗಲೀ, ಪುತ್ರನಾಗಲೀ, ಪುತ್ರಿಯಾಗಲೀ ತಾನು ಹೇಳಿದ ಮಾತನ್ನು ಲೆಕ್ಕಿಸದೆ ಎದುರು ಉತ್ತರ ಕೊಟ್ಟರೆ, ಅದು ಒಂದು ತರದ ವಿಷವಾಗಿಯೇ ಕಾಣುತ್ತದೆ. ಪ್ರತಿಕೂಲ ವಿಷಯಗಳೆಲ್ಲಾ ವಿಷದಂತೆ ಇರುತ್ತವೆ. ನಿಮ್ಮನ್ನು ಯಾರಾದರೂ ನಿಂದನೆ ಮಾಡಿದರೆ ಅದು ವಿಷದಂತೆ ಇರುತ್ತದೆ. ಸಂಸಾರದಲ್ಲಿ ನಿಂದೆ, ವ್ಯಾಧಿ, ಅಪಮಾನ, ದಾರಿದ್ರ್ಯ ಇವೆಲ್ಲಾ ವಿಷ ಕುಡಿದಂತೆ ಭಾಸವಾಗುತ್ತದೆ. ವಿಷಯ - ಇಂದ್ರಿಯಗಳ ಸಂಯೋಗದಿಂದ ಸುಖವೆಂದೂ ಸಂತೋಷವೆಂದೂ ತೋರುವಂಥ ಯಾವುದೇ ವಸ್ತುಗಳಾಗಲೀ ಇಲ್ಲ. ಅದು ಏನೇ ಆಗಿರಲಿ ಪರಿಣಾಮದಲ್ಲಿ ಅದು ವಿಷವಾಗಿಯೂ, ದುಃಖದಲ್ಲಿಯೇ ಅಂತ್ಯವಾಗುವುದು.

ಭಗವಂತ ಎರಡು ವಿಧವಾದ ಅಮೃತವನ್ನು ಕರುಣಿಸಿದ್ದಾನೆ ಜಗತ್ತಿಗೆ. ಒಂದು - ಮನುಷ್ಯನಿಗೆ ಅವಶ್ಯವಾಗಿರುವಂಥ ಮನೆ, ಸ್ತ್ರೀ - ಸಂತತಿ - ಸಂಪತ್ತು, ವಾಹನ ಸೌಕರ್ಯಗಳು ಇನ್ನು ವಿಶೇಷವಾದ ಭೋಗವಸ್ತುಗಳ ಸಂಗ್ರಹ ಇವೆಲ್ಲಾ ಮೇಲಿಂದ ಮೇಲೆ ಅಮೃತದಂತೆ ಭಾಸವಾಗುತ್ತವೆ. ಅಂದರೆ ಈ ವಸ್ತುಗಳಲ್ಲೆಲ್ಲಾ ವಿಷವೇ ತುಂಬಿರುತ್ತದೆ ಎಂದು ಅನುಭವ ವೇದ್ಯ. ಇವೆಲ್ಲಾ ತೋರಿಕೆಯ ಕೃತ್ರಿಮ ಅಮೃತ, ಕ್ಷಣಿಕವಾದದ್ದು. ಕೊನೆಗೆ ಎಲ್ಲವೂ ವಿಷವೇ, ಅಂದರೆ ಇಷ್ಟೆಲ್ಲಾ ವಸ್ತುಗಳ ಮೇಲೆ ಆಸೆ ಇಟ್ಟು ಸಂಗ್ರಹ ಮಾಡಿರುವಂಥ ವಸ್ತುಗಳು ನಮ್ಮ ಜತೆಯಲ್ಲಿ ಕೊನೆಗಾಲಕ್ಕೆ ಬರುವುದಿಲ್ಲ. ಕೊನೆಗಾಲಕ್ಕೆ ಆಸ್ತಿ, ವಸ್ತು, ಒಡವೆ ತುಂಬಾ ಇದ್ದರೆ ಅವುಗಳ ಭಾಗೀದಾರರು ಬಂದು ಸೇರಿಕೊಂಡು ಆಸ್ತಿಯನ್ನು ಪಾಲು ಮಾಡಿಕೊಳ್ಳುವುದರಲ್ಲಿ ತೊಡಗಿರುತ್ತಾರೆ. ಕೊನೆಗೆ ಬೆರಳಿನಲ್ಲಿರುವ ಉಂಗುರವನ್ನು ಕೂಡಾ ಕಿತ್ತುಕೊಂಡು ಬಿಡುತ್ತಾರೆ. ಅಂತಿಮ ಪ್ರಯಾಣದಲ್ಲಿ ಜತೆಗೆ ಯಾರು ಬರುವವರೂ ಇಲ್ಲ. ಸಹಾಯಕರೂ ಇಲ್ಲ.

ಇನ್ನೊಂದು ನಿಜವಾದ ಅಮೃತವೇ ಭಗವನ್ನಾಮಾಮೃತ. ಈ ಅಮೃತವನ್ನು ಪಾನ ಮಾಡುತ್ತಾ ಇದ್ದರೆ ಅಂದರೆ, ಭಗವನ್ನಾಮ ಜಪ, ಭಜನೆ, ಕೀರ್ತನೆ, ಹರಿಕಥೆ, ಸತ್ಸಂಗ, ಪುರಾಣಪುಣ್ಯ ಪ್ರವಚನಗಳು ಇವೆಲ್ಲಾ ಶಾಶ್ವತವಾದ ಅಮೃತ. ಈ ಅಮೃತ ಪಾನಮಾಡುವವರಿಗೆ ಸಂಸಾರದಲ್ಲಿ ಏನೇ ಪ್ರಳಯವಾಗಲೀ ಅವರಿಗೆ ಅದರ ಗೊಡವೆಯೇ

'ಶ್ರೀ ದತ್ತ ಮಂದಿರ', ರೋಯಲ್ ಪಾರ್ಕ್ ಕ್ಲಬ್ ರೆಸಾರ್ಟ್ ಹತ್ತಿರ, ನ್ಯೂ ಮಗ್‌ದಲ್ಲಾ,
ಡುಮಾಸ್ ರೋಡ್, ಸೂರತ್ - 395 007

ಶುಭಾಶಯಗಳು : ಫೋನ್ : **2520017**, ಮನೆ : **2580031**

**ನವೀಕರಿಸಲ್ಪಟ್ಟ ಆಧುನಿಕ ಸೌಕರ್ಯಗಳೊಂದಿಗೆ ಗ್ರಾಹಕರ ಸೇವೆಯಲ್ಲಿ**



**ಮೆ। ದುರ್ಗಾ ಜ್ಯುವೆಲ್ಲರ್ಸ್**

**ತೆಂಕಪೇಟೆ, ಉಡುಪಿ - 576 101.**

*ಉತ್ತಮ ಚಿನ್ನದಲ್ಲಿ ಯೋಗ್ಯ ಬೆಲೆಗೆ ಆಕರ್ಷಕ ಡಿಸೈನ್‌ಗಳಲ್ಲಿ ಆಭರಣಗಳು ಸದಾ ನಮ್ಮಲ್ಲಿ ಸಿಗುತ್ತವೆ. ಬೆಳ್ಳಿಯ ಉಡುಗೊರೆ ಸಾಮಾನುಗಳೂ ಸಿಗುತ್ತವೆ.*

ಇಲ್ಲ. ಇವರೆಲ್ಲಾ ಮಹಾತ್ಮರಂತೆ ಇರುತ್ತಾರೆ. ಯಾಕೆಂದರೆ ಇಂಥವರಿಗೆ ಸತ್ಯಾವಸ್ಥೆ ಏನೆಂದು ಗೊತ್ತಾಗಿರುತ್ತದೆ.

ಪ್ರಪಂಚದಲ್ಲಿ ಶಾಶ್ವತವಾಗಿ ಸುಖಕೊಡುವಂಥ ವಸ್ತು ಯಾವುದೂ ಇಲ್ಲ, ಭಗವಂತ ಒಬ್ಬನೇ ನಮಗೆ ಗತಿ ಎಂದು ದೃಢವಾಗಿ ನಂಬಿದ್ದಾರೆ. ಹಿರಿಯರ ಅನುಭವ ವೇದ್ಯವಾದಂಥ ಅಮೃತ ವಾಕ್ಯಗಳನ್ನು ನಮಗೆ, ನಮ್ಮ ಒಳಿತಿಗೆ ಭಗವಂತ ಹೇಳಿದ ವಾಕ್ಯವನ್ನೇ ಹಿರಿಯರು ಬೋಧಿಸುತ್ತಿದ್ದಾರೆ. 'ಸರ್ವೇಷು ಕಾಲೇಷು ಮಾಮನುಸ್ಮರ' ಎಂಬಂತೆ ಸರ್ವದಾಭಗವನ್ನಾಮಸ್ಮರಣೆ ಮಾಡುವುದರಿಂದ ನಮಗೆ ಯಾವ ವಿಧವಾದ ಅನನುಕೂಲತೆ ಇರುವುದಿಲ್ಲ. ದೇಹಕ್ಕೆ ದಂಡನೆ ಇಲ್ಲ, ಕೈಯಿಂದ ಒಂದು ಕಾಸೂ ಖರ್ಚಿಲ್ಲ. ಇತರರಿಗೆ ಯಾವ ವಿಧವಾದ ಕಿರುಕುಳವೂ ಇರುವುದಿಲ್ಲ. ಇಷ್ಟೊಂದು ಸುಲಭಸಾಧ್ಯವಾದಂಥ ಸಾಧನ ಮಾರ್ಗವು ಬೇರೊಂದಿಲ್ಲ. ಜೀವನದಲ್ಲಿ ಸುಖ - ಸಂತೋಷಗಳು ಕ್ಷಣಿಕವಾದ್ದರಿಂದ, ಜೀವನವೂ ಕ್ಷಣಿಕವಾದ್ದರಿಂದ ಭಗವಂತನು ಅಡಗಿಕೊಂಡಿದ್ದರೂ ಅವನ ನಾಮವನ್ನು ಮಾತ್ರ ಅಡಗಿಸಲಾಗಲಿಲ್ಲ. ಪುರಂದರ ದಾಸರು 'ನೀನ್ಯಾಕೋ ನಿನ್ನ ಹಂಗ್ಯಾಕೋ । ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂದಿದ್ದಾರೆ. ಜೀವನದಲ್ಲಿ ಏನೇ ಕಷ್ಟಕಾರ್ಪಣ್ಯಗಳನ್ನು ಎದುರಿಸಬೇಕಾದ ಸಂದರ್ಭದಲ್ಲಿ, ದುಃಖಮಗ್ನನಾಗಿರುವ ಸಮಯದಲ್ಲಿ ಭಗವಂತನ ನಾಮಸ್ಮರಣೆಯನ್ನು ಇನ್ನು ಹೆಚ್ಚಿಸಬೇಕೇ ವಿನಾ ಕಡಿಮೆಮಾಡಬಾರದು. ಇದನ್ನೇ ಗೀತಾಚಾರ್ಯನು ಹೇಳುತ್ತಾನೆ.

**ಅನನ್ಯಾಶ್ಚಿಂತ ಯಂತೋಮಾಂ ಯೇ ಜನಾ ಪರ್ಯುಪಾಸತ್ತೇ ।**

**ತೇಷಾಂ ನಿತ್ಯಾಭಿಯುಕ್ತನಾಂ ಯೋಗಕ್ಷೇಮಂವಹಾಮ್ಯಹಮ್ ॥**

(ಮುಂದುವರಿಯುವುದು)

**ಶುಭಾಶಯಗಳು** **ಮೊಬೈಲ್ : 9845320502**

ಶುಚಿ ಮತ್ತು ರುಚಿಗಳಿಗೆ ಗರಿಷ್ಠ ಆದ್ಯತೆ ನೀಡಿರುವ ಏಕೈಕ ಕ್ಯಾಂಟೀನ್

# ಆಚಾರ್ಯ ದರ್ಶಿನಿ ಕ್ಯಾಂಟೀನ್

**ಭೂವರಾಹ ಕಾಂಪ್ಲೆಕ್ಸ್, ಗ್ರೌಂಡ್ ಫ್ಲೋರ್, ಸೋದೆ ಮಠ ಲೇನ್, ಉಡುಪಿ – 1**

**ಶುಭಾಶಯಗಳು :** **ದೂರವಾಣಿ : 2523156**

***ಉತ್ತಮ ಕನ್ನಡಿಗಳು, ಫೋಟೋ ಫ್ರೇಂ ಹಾಗೂ ಫೋಟೋ ಮೆಟೀರಿಯಲ್‌ಗಳು ಮತ್ತು ಪೂಜಾ ಸಾಮಗ್ರಿಗಳು ಹಾಗೂ ಉಡುಗೊರೆ ಸಾಮಗ್ರಿಗಳಿಗೆ ಸಂದರ್ಶಿಸಿರಿ.***

# ರವಿ ಫ್ರೇಮಿಂಗ್ ವರ್ಕ್ಸ್

**ರಥಬೀದಿ, ಉಡುಪಿ – 576 101**

ಪ್ರಕರಣ ಗ್ರಂಥಗಳು - ಸಾರ ಸಂಗ್ರಹ

# ತತ್ತ್ವೋದ್ಯೋತ

ಪ್ರೊ। ಎಸ್. ವೆಂಕಟೇಶ ಮೂರ್ತಿ

**ಸರ್ವತ್ರಾಖಿಲಸಚ್ಛಕ್ತಿಃ ಸ್ವತಂತ್ರೋಽಶೇಷದರ್ಶನಃ ।**
**ನಿತ್ಯಾಽತಾದೃಶಚಿಚ್ಚೇತ್ಯಯಂತೇಷ್ಟೋ ನೋ ರಮಾಪತಿಃ ॥**

'ವಾದ' ಗ್ರಂಥದ ಎಲ್ಲ ಲಕ್ಷಣಗಳನ್ನು ಹೊಂದಿರುವ ತತ್ತ್ವೋದ್ಯೋತ ಎಂಬ ಈ ಪ್ರಕರಣವು ಶ್ರೀಮದಾಚಾರ್ಯರ ದಶಪ್ರಕರಣಗಳಲ್ಲಿ ತಮ್ಮ ವಾದ ಮಂಡನೆಗೆ ಸಂಬಂಧಿಸಿದ ಬಹಳ ಪ್ರಮುಖವಾದ ಗ್ರಂಥ. ಪುಂಡರೀಕವನ ಎಂಬ ವಾದಿ ಶ್ರೀಮದಾಚಾರ್ಯರೊಂದಿಗೆ ವಾದಕ್ಕೆ ಬಂದಾಗ ಆಚಾರ್ಯರ ವರ್ಚಸ್ಸಿನಿಂದ ಮೂಕನಾದ. ಅವನ ಮುಂದೆ ಆಚಾರ್ಯರು ಮಂಡಿಸಿದ ದ್ವೈತವಾದದ ಸಂಗ್ರಹರೂಪವೇ ಈ ವಾದ ಗ್ರಂಥ.

## ಗ್ರಂಥದ ಉದ್ದೇಶ

ಅವಿದ್ಯೆ ಎಂಬ ಗಾಢಾಂಧಕಾರದಿಂದ ತುಂಬಿರುವ ಸಂಸಾರವೆಂಬ ಅರಣ್ಯದಲ್ಲಿ ಮಿಣುಕು ಹುಳದ ಬೆಳಕಿನಂತಿರುವ ಅಲ್ಪ ಹಾಗೂ ಅಸ್ಥಿರವಾದ ಸಾಂಸಾರಿಕ ಸುಖದಿಂದ ಸಜ್ಜನರು ಬಹಳ ಅತೃಪ್ತರಾಗಿರುವರು. ಇಂಥ ಸಾತ್ವಿಕರಾದ ಮುಮುಕ್ಷು ಅಧಿಕಾರಿಗಳಿಗೆ ಸ್ವರೂಪಾನಂದಕ್ಕೆ ಕಾರಣವಾಗುವ ತತ್ವಜ್ಞಾನರೂಪವಾದ ಬೆಳಕನ್ನು ನೀಡುವುದರಲ್ಲಿ ಶ್ರೀಮದಾಚಾರ್ಯರು ಜ್ಞಾನಸೂರ್ಯರಂತಿದ್ದಾರೆ. ತತ್ತ್ವೋಪದ್ಯೋತವೆಂಬ ಗ್ರಂಥವನ್ನು ರಚಿಸುವುದರ ಮೂಲಕ ಶ್ರೀಮದಾಚಾರ್ಯರು ಪರಮ ಪುರುಷನಾದ ರಮಾಪತಿಯ ಸಕಲ ನಿಯಾಮಕತ್ವ, ಸರ್ವಕರ್ತೃತ್ವ, ಸರ್ವಜ್ಞತ್ವ ಮೊದಲಾದ ಗುಣಗಳ ಜ್ಞಾನವನ್ನು ಸಜ್ಜನರಿಗೆ ಕರುಣಿಸಿದ್ದಾರೆ. 'ತತ್ವಸ್ಯ ಉದ್ಯೋತಃ ಅಸ್ಮಾತ್ ಭವತೀತಿ ತತ್ತ್ವೋದ್ಯೋತಃ' ಅಥವಾ 'ತತ್ವಂ ಉದ್ಯೋತತೇಽನೇನೇತಿ ತತ್ತ್ವೋದ್ಯೋತಂ' ಎಂಬ ವ್ಯುತ್ಪತ್ತಿಯಿಂದ ಈ ಗ್ರಂಥದ ಹೆಸರು ಅನ್ವರ್ಥವಾಗಿದೆ.

ಗ್ರಂಥದ ಆದಿಯಲ್ಲಿ ತಮ್ಮ ಇಷ್ಟದೇವತೆಯಾದ ರಮಾಪತಿಯಾದ ಶ್ರೀಮನ್ನಾರಾಯಣನನ್ನು ಸ್ತುತಿಸಿರುವ ಆಚಾರ್ಯರು ಹರಿಯ ಸರ್ವೋತ್ತಮತ್ವವನ್ನು ಸ್ಪಷ್ಟಪಡಿಸುವ ಅನಂತ ಕಲ್ಯಾಣಗುಣಗಳನ್ನು ಸ್ಮರಿಸುತ್ತ ಗ್ರಂಥದ ಉದ್ದೇಶವನ್ನು ತಿಳಿಸುತ್ತಾರೆ. ಈ ಚೇತನ - ಅಚೇತನಾತ್ಮಕವಾದ ಜಗತ್ತು ಯಾವತ್ತೂ ಅಪೂರ್ಣವಾದ ಜ್ಞಾನ - ಶಕ್ತ್ಯಾದಿಗಳನ್ನು ಹೊಂದಿರುವುದು. ಇಂಥಹ ಅಪರಿಪೂರ್ಣವಾದ ಅಸ್ವತಂತ್ರವಾದ ಜಗತ್ತನ್ನು ನಿಯಂತ್ರಿಸುವುದರಲ್ಲಿ ಲಕ್ಷ್ಮೀಪತಿಯು ನಿತ್ಯವೂ ಅಪ್ರತಿಹತವಾದ ಶಕ್ತಿಯುಳ್ಳವನೂ, ಸರ್ವತಂತ್ರ ಸ್ವತಂತ್ರನೂ ಮತ್ತು ಸರ್ವಜ್ಞನೂ ಆಗಿದ್ದಾನೆ. ಕೇವಲ ಸಂಸಾರವಸ್ಥೆಯಲ್ಲಲ್ಲದೇ ಮುಕ್ತಾವಸ್ಥೆಯಲ್ಲಿಯೂ ಸಹ ಸಕಲ ಚೇತನರು ಪರಮಾತ್ಮನ ನಿಯಮನಕ್ಕೆ ಒಳಪಟ್ಟಿರುತ್ತಾರೆ

ಪವನಜ ಪ್ರಕಾಶನ, 1625, 5ನೇ ಬಿ ಕ್ರಾಸ್, 2ನೇ ಬ್ಲಾಕ್, ಬಿ. ಎಸ್. ಕೆ. Iಸ್ಟೇಜ್, ಬೆಂಗಳೂರು – 560 050



ಎಂಬ ಪ್ರಮೇಯವನ್ನು ಇಲ್ಲಿ ತಿಳಿಸುತ್ತಾರೆ.

## ಮುಕ್ತರಲ್ಲಿಯೂ ಭೇದವಿದೆ ಎಂಬುದರ ಸಮರ್ಥನೆ

ಮುಕ್ತರು ಪರಮಾತ್ಮನಿಂದ ನಿಯಮ್ಯ ಎಂಬುದನ್ನು ಕೆಲವರು ಒಪ್ಪುವುದಿಲ್ಲ. ಪರಸ್ಪರ ಭೇದವಿದ್ದಾಗ ಮಾತ್ರ ನಿಯಮ್ಯ - ನಿಯಾಮಕ ಭಾವ ಕೂಡುತ್ತದೆ. ಮುಕ್ತರಲ್ಲಿ ಭೇದವೇ ಇಲ್ಲವಾದ್ದರಿಂದ ಅವರು ಪರಮಾತ್ಮನಿಂದ ನಿಯಮ್ಯ ಎಂಬುದು ಕೂಡುವುದಿಲ್ಲ. ಅಂತೆಯೇ ಸಂಸಾರಾವಸ್ಥೆಯಲ್ಲೂ ಚೇತನಾಚೇತನ ಪ್ರಪಂಚವು ಪರಮಾತ್ಮನಿಂದ ನಿಯಮ್ಯರಾಗದಿರಲಿ. ಹೀಗೆಂದು ಕೆಲವರು ವಾದವನ್ನು ಮಾಡುತ್ತ ಪರಮಾತ್ಮನು ಸಕಲ ಪ್ರಪಂಚವನ್ನು ನಿಯಮನ ಮಾಡುತ್ತಾನೆ ಎಂಬ ತತ್ತ್ವವಾದವನ್ನು ಅಲ್ಲಗಳೆಯುತ್ತಾರೆ. ಈ ವಾದವನ್ನು ಒಪ್ಪದ ಶ್ರೀಮದಾಚಾರ್ಯರು ವಿಮುಕ್ತರಲ್ಲೂ ಭೇದವಿದೆ, ಸಮಸ್ತ ಚೇತನಾಚೇತನಾತ್ಮಕವಾದ ಪ್ರಪಂಚವು ಸದಾಕಾಲವೂ ಪರಮಾತ್ಮನಿಂದ ಭಿನ್ನವೇ ಆಗಿದ್ದು ಅವನ ನಿಯಮನಕ್ಕೊಳಪಟ್ಟಿದೆ ಎಂಬ ಸತ್ಸಿದ್ಧಾಂತವನ್ನು ತತ್ತ್ವೋದ್ಯೋತ ಎಂಬ ಈ ಪ್ರಕರಣ ಗ್ರಂಥದ ಮೂಲಕ ಪ್ರತಿಪಾದಿಸಿದ್ದಾರೆ.

ಭಿನ್ನನೋ ಅಭಿನ್ನನೋ ಎಂಬ ಸಂಶಯಕ್ಕೆ ಕಾರಣನಾಗಿರುವ ಮುಕ್ತನೇ ಇಲ್ಲಿ ಚರ್ಚೆಗೆ ವಿಷಯ. ಮುಕ್ತನು ಭೇದವುಳ್ಳವನೇ ಆಗಿದ್ದಾನೆ ಎಂಬುದು ಸಿದ್ಧಾಂತ. ಮುಕ್ತನಾದುದರಿಂದಲೇ ಅವನು ಭಿನ್ನನು ಎಂಬುದು ಹೇತು. ಏಕೆಂದರೆ ಯಾವುದು ಮುಕ್ತವೋ ಅದು ಭೇದವುಳ್ಳದ್ದು ಎಂಬುದು ಈ ಜಗತ್ತಿನಲ್ಲಿ ಅನುಭವದಿಂದ ಸಿದ್ಧವಾದ ವಿಷಯ. ಹೇಗೆ ಜೈಲಿನಿಂದ ಬಿಡುಗಡೆ ಹೊಂದಿದವನು ಭೇದವುಳ್ಳವನೋ ಹಾಗೆಯೇ ಮುಕ್ತನು ಸಂಸಾರದಿಂದ ಬಿಡುಗಡೆ ಹೊಂದಿರುವುದರಿಂದ ಭೇದವುಳ್ಳವನು ಎಂಬ ಅನುಮಾನದಿಂದ ಮುಕ್ತರಲ್ಲೂ ಭೇದವು ಸಿದ್ಧವಾಗುವುದು. ಆದ್ದರಿಂದ ಪರಮಾತ್ಮನು ಮುಕ್ತಾಮುಕ್ತನಿಯಾಮಕನು ಎಂಬುದು ಕೂಡುತ್ತದೆ.

## ಅನಿರ್ವಚನೀಯತ್ವ ನಿರಾಸೆ

ಭೇದದಲ್ಲಿ ಅನಿರ್ವಚನೀಯ ಮತ್ತು ಪಾರಮಾರ್ಥಿಕ ಎಂಬ ಪ್ರಭೇದವಿರುವುದಿಲ್ಲ. ಇಲ್ಲಿ ಕೋಡು ಇದೆ ಎಂದ ಕೂಡಲೇ ಅದು ಮೊಲದ ಕೋಡೋ ಹಸುವಿನ ಕೋಡೋ ಎಂಬ ಪ್ರಶ್ನೆ ಬರುವುದಿಲ್ಲ. ಏಕೆಂದರೆ ಮೊಲದ ಕೋಡು ಸರ್ವತ್ರದಲ್ಲಿ ಅಪ್ರಸಿದ್ಧವಾಗಿದೆ.


*With Best Compliments from :*
**U. DINAKAR BHAT**
Presentation & Fancy Articles of :
***SANDAL WOOD & ROSE WOOD***
***IN NEW DESIGNS***
Car Street, UDUPI - 576101
**Phone : Shop : 2520809, Resi : 2524426**

ಅದರಂತೆಯೇ ಅನಿರ್ವಚನೀಯವೆಂಬುದು ಸರ್ವತ್ರ ಅಪ್ರಸಿದ್ಧವಾದುದು. ಅಲ್ಲದೆ ಅನಿರ್ವಚನೀಯ ವಿಷಯದಲ್ಲಿ ಯಾವುದೇ ಪ್ರಮಾಣವೂ ಇಲ್ಲ. ಮಿಥ್ಯಾ ಶಬ್ದವು ಅನಿರ್ವಚನೀಯವನ್ನು ಹೇಳುತ್ತದೆ ಎಂಬುದು ಯಾವುದೇ ಕೋಶ, ವ್ಯಾಕರಣ ಮುಂತಾದವುಗಳಲ್ಲಿ ಕಂಡುಬರುವುದಿಲ್ಲ. ಅನಿರ್ವಚನೀಯ ಎಂಬುದು ಅಪ್ರಸಿದ್ಧವಾದ್ದರಿಂದ ಅದನ್ನು ಅನುಮಾನದಿಂದಲೂ ಸಾಧಿಸಲಾಗುವುದಿಲ್ಲ. ಏಕೆಂದರೆ ಅನುಮಾನದಿಂದ ಸಾಧಿಸಲ್ಪಡುವ ವಸ್ತುವು ಎಲ್ಲಾದರೂ ಪ್ರಸಿದ್ಧವಾಗಿರಬೇಕು.

ಪ್ರತ್ಯಕ್ಷ ಮತ್ತು ಅನುಮಾನಗಳು ಅನಿರ್ವಚನೀಯ ವಿಷಯದಲ್ಲಿ ಪ್ರಮಾಣವಾಗದಿದ್ದರೂ ಆಗಮವು ಪ್ರಮಾಣವಾಗಬಲ್ಲುದು ಎಂಬುದಾಗಿ ಪ್ರತಿವಾದಿಗಳು ಹೇಳುತ್ತಾರೆ. ಇದೂ ಸರಿಯಲ್ಲ. ಏಕೆಂದರೆ ವೇದದ ಯಾವ ಶಾಖೆಯಲ್ಲೂ ಅನಿರ್ವಚನೀಯ ಅಥವಾ ಸದಸದ್ವಿಲಕ್ಷಣ ಪದಾರ್ಥವು ಉಕ್ತವಾಗಿಲ್ಲ.

**ಸತ್ ಮತ್ತು ಅಸತ್ ಶಬ್ದಗಳಿಗೆ ವಿವರಣೆ**

'ನಾಸದಾಸೀನ್ನೋಸದಾಸೀತ್' ಎಂಬ ಶ್ರುತಿಯೂ ಸದಸದ್ವಿಲಕ್ಷಣವನ್ನು ಸಮರ್ಥಿಸುವುದಿಲ್ಲ. ಇಲ್ಲಿ ಸತ್ ಎಂದರೆ ಮೂರ್ತ ಪದಾರ್ಥ, ಅಸತ್ ಎಂದರೆ ಅಮೂರ್ತ ಪದಾರ್ಥ ಎಂದು ಅರ್ಥ ಮಾಡಬೇಕು. ಪೃಥಿವಿ, ಅಪ್ ಮತ್ತು ತೇಜಸ್ಸುಗಳು ಮೂರ್ತ ಪದಾರ್ಥವೆನಿಸಿವೆ. ಇವಕ್ಕಿಂತ ಬೇರೆಯಾದವು ಅಮೂರ್ತ ಪದಾರ್ಥಗಳು. ಮೂರ್ತ ಮತ್ತು ಅಮೂರ್ತಗಳಿಗಿಂತ ವಿಲಕ್ಷಣವಾದ ಬ್ರಹ್ಮನು ಸತ್ ಆಗಿರುವುದಿಲ್ಲ ಮತ್ತು ಅಸತ್ ಕೂಡ ಆಗಿರುವುದಿಲ್ಲ. ಹೀಗೆಂದು ಪೈಂಗೀ ಶ್ರುತಿಯು ಹೇಳುತ್ತದೆ. ಪರಬ್ರಹ್ಮ, ಚೇತನ ಮತ್ತು ಅಚೇತನ ಪದಾರ್ಥಗಳು ಅದ್ಭುತವಾದುದರಿಂದಲೇ ಅನಿರ್ವಾಚ್ಯ, ಅಚಿಂತ್ಯ, ಅತರ್ಕ್ಯ, ಅಜ್ಞೇಯ ಮೊದಲಾಗಿ ಶ್ರುತಿಗಳಲ್ಲಿ ಹೇಳಲ್ಪಟ್ಟಿವೆ.

ಬ್ರಹ್ಮನೊಬ್ಬನೆ ಋತ (ಸತ್ಯ), ಉಳಿದೆಲ್ಲವೂ ಅನೃತ (ಅಸತ್ಯ) ಎಂಬುದಾಗಿ ಶ್ರುತಿಯಲ್ಲಿ ಪ್ರತಿಪಾದಿತವಾಗಿರುವುದರಿಂದ, ಬ್ರಹ್ಮನೊಬ್ಬನೇ ಸತ್ಯ ಇತರವೆಲ್ಲ ಮಿಥ್ಯ ಎಂದು ಹೇಳುವುದು ಸರಿಯಲ್ಲ. ಬ್ರಹ್ಮನು ಅನಾದಿ ಕಾಲದಿಂದಲೂ ಅವಿಕಾರನಾಗಿ (ಒಂದೇ ರೀತಿ) ತಿಳಿಯಲ್ಪಟ್ಟಿರುವುದರಿಂದ ಅವನು ಋತ ಎಂದು ಶ್ರುತಿಯ ತಾತ್ಪರ್ಯ. ಪ್ರಕೃತಿ ಮತ್ತು ಪ್ರಾಕೃತವಾದದ್ದು ವಿಕಾರವನ್ನು ಹೊಂದುವುದರಿಂದ ಒಂದೇ ರೀತಿ ಸದಾ ಕಾಲವೂ


**ಶುಭಾಶಯಗಳು :**

ಉಡುಪಿಯಲ್ಲಿ ಪ್ರಸಿದ್ಧ ಜವುಳಿ ಅಂಗಡಿ

Kalsankar Silk Palace

**ಕಲ್ಸಂಕಾರ್ ಸಿಲ್ಕ್ ಪ್ಯಾಲೇಸ್**

ಬಡಗುಪೇಟೆ, ಉಡುಪಿ – 576 101

ಪ್ರೊ. ಗೋಕುಲ್‌ದಾಸ್ ಪೈ

ದೂರವಾಣಿ : 2520960

ಮನೆ : 2520134




ತಿಳಿಯಲ್ಪಡುವುದಿಲ್ಲ. ಆದ್ದರಿಂದ ಅದು ಅನೃತ. ಬ್ರಹ್ಮನು ಪರಮ ಮಂಗಳಕರನಾದ್ದರಿಂದ ಮತ್ತು ಸಜ್ಜನರ ಜ್ಞಾನವಿಷಯನಾದ್ದರಿಂದ ಸತ್, ಜಗತ್ತು ಅಮಂಗಳಕರ ಮತ್ತು ಅಸಜ್ಜನರ ಜ್ಞಾನವಿಷಯವಾದ್ದರಿಂದ ಅಸತ್. ಯಾವಾಗಲೂ ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸಿದವರು ಸಜ್ಜನರು. ಯಾವಾಗಲೂ ಸಂಸಾರದಲ್ಲಿ ಮಗ್ನರಾಗಿರುವರು ಅಸಜ್ಜನರು. ಇತ್ಯಾದಿ ಶ್ರುತಿಗಳಲ್ಲಿ ವ್ಯಾಖ್ಯಾನ ಮಾಡಲ್ಪಟ್ಟಿದೆ.

**ಬ್ರಹ್ಮನಂತೆ ವಿಶ್ವವೂ ಸತ್ಯ**

ಬ್ರಹ್ಮನಂತೆ ವಿಶ್ವವೂ ಸತ್ಯವಾಗಿದೆ ಎಂಬುದಾಗಿ ಶ್ರುತಿಗಳು ಹೇಳುತ್ತವೆ. ಉದಾಹರಣೆಗೆ ಈ ಶ್ರುತಿಯನ್ನೇ ನೋಡಿ :

**ವಿಶ್ವಂ ಸತ್ಯಂ ವಶೇ ವಿಷ್ಣೋರ್ನಿತ್ಯಮೇವ ಪ್ರವಾಹತಃ ।**
**ನ ಕ್ವಾಪ್ಯನೀದೃಶಂ ವಿಶ್ವಂ ತತ್ತತ್ಕಾಲಾನುಸಾರತಃ ॥**

ವಿಶ್ವವು ಸತ್ಯವಾಗಿದ್ದು ಸದಾ ವಿಷ್ಣುವಿನ ವಶದಲ್ಲಿಯೇ ಇದ್ದು ಪ್ರವಾಹತಃ ನಿತ್ಯವಾಗಿದೆ. ಕಾಲ ಕಾಲಕ್ಕೆ ತಕ್ಕಂತೆ ಬದಲಾವಣೆಗಳಿಗೆ ಒಳಪಟ್ಟರೂ, ಯಾವ ಕಾಲದಲ್ಲಿಯೂ ಅದು ಈ ರೀತಿಯಾಗಿ ಇಲ್ಲದಿರುವುದಿಲ್ಲ. ಹೀಗೆ ಶ್ರುತಿಗಳಲ್ಲಿ ಪ್ರತಿಪಾದಿತವಾಗಿದೆ.

"ಜಗತ್ತು ಅಸತ್ಯ ಮತ್ತು ಯಾರ ನಿಯಮನಕ್ಕೂ ಒಳಪಡುವುದಿಲ್ಲ. ಇತ್ಯಾದಿಯಾಗಿ ನುಡಿಯುವವರನ್ನು ಮೂಢರು ಎಂದು ಕರೆಯಬೇಕು. ಜಗತ್ತಿಗೆ ಕ್ಷೋಭೆಯನ್ನುಂಟು ಮಾಡುವ ಅವರು ತಾವಾಗಿಯೇ ವಿನಾಶ ಹೊಂದುತ್ತಾರೆ" ಎಂಬುದಾಗಿ ಭಗವದ್ಗೀತೆಯು ಅಂಥವರನ್ನು ತೀವ್ರವಾಗಿ ಎಚ್ಚರಿಸುತ್ತದೆ.

'ವಿಶ್ವಂ ಸತ್ಯಂ ಮಘವಾನಾ' 'ಪ್ರ ಘಾನ್ವಸ್ಯ ಮಹತೋ ಮಹಾನಿ ಸತ್ಯಾ ಸತ್ಯಸ್ಯ ಕರಣಾನಿ ವೋಚಮ್' 'ಸತ್ಯಃ ಸೋ ಅಸ್ಯ ಮಹಿಮಾ' 'ಕವಿರ್ಮನೀಷೀ ಪರಿಭೂಃ ಸ್ವಯಂ ಭೂಃ ಯಥಾತಥ್ಯತೋಽರ್ಥಾನ್ ವ್ಯದಧಾತ್ ಶಾಶ್ವತೀಭ್ಯಃ ಸಮಾಭ್ಯಃ' ಇತ್ಯಾದಿ ಶ್ರುತಿಗಳಲ್ಲಿ, ಜಗತ್ತಿನ ಸೃಷ್ಟ್ಯಾದಿಗಳು ಸತ್ಯವೆಂಬುದಾಗಿ ಪ್ರತಿಪಾದಿಸಲಾಗಿದೆ. ಈ ಸೃಷ್ಟ್ಯಾದಿಗಳು ಸತ್ಯವಾಗಬೇಕಾದರೆ, ಸೃಷ್ಟಿಗೆ ವಿಷಯವಾದ ಸಮಸ್ತ ಜಗತ್ತೂ ಸತ್ಯವಾಗಬೇಕು ಮತ್ತು ಅದಕ್ಕೆ ಕಾರಣನೂ ನಿಯಾಮಕನೂ ಆದ ಬ್ರಹ್ಮನು ಸತ್ಯನಾಗಿರಬೇಕು. ಅಂಥಹ ಪರಬ್ರಹ್ಮನೇ ಸರ್ವೋತ್ತಮ ಎಂಬುದು ಈ ಶ್ರುತಿಗಳ ತಾತ್ಪರ್ಯವಾಗಿದೆ. ಹೀಗೆ ಆಗಮವೂ ಕೂಡ ಅನಿರ್ವಚನೀಯ


**ಶುಭಾಶಯಗಳು :**

ಶುದ್ಧ ಚಿನ್ನದ ಆಧುನಿಕ ಆಭರಣಗಳಿಗೆ

**ಶಾಮ ಆ್ಯಂಡ್ ಬ್ರದರ್**

ಜ್ಯುವೆಲ್ಲರ್ಸ್

ರಥಬೀದಿ, ಉಡುಪಿ – 576 101.

Ph.: 2534263(S), 2523772 (R)



ವಿಷಯದಲ್ಲಿ ಪ್ರಮಾಣವಾಗುವುದಿಲ್ಲ ಎಂದು ಸಿದ್ಧವಾಗುತ್ತದೆ.

ಅರ್ಥಾಪತ್ತಿ ಎಂಬ ಪ್ರಮಾಣದಿಂದ ಜಗತ್ತು ಅನಿರ್ವಚನೀಯ ಎಂದು ಸಾಧಿಸುತ್ತೇವೆ ಎಂದು ಕೆಲವರು ಹೇಳುತ್ತಾರೆ. ಹೇಗೆಂದರೆ, ಪ್ರಪಂಚವು ಪ್ರತ್ಯಕ್ಷ ಗೋಚರವಾದ್ದರಿಂದ ಅತ್ಯಂತಾಸತ್ ಎಂದು ಹೇಳಲಾಗದು. ಬ್ರಹ್ಮಜ್ಞಾನ ಬಂದನಂತರ ಅದು ನಿವೃತ್ತವಾಗುವುದರಿಂದ ಸತ್ ಎಂಬ ಜ್ಞಾನಕ್ಕೆ ಬಾಧೆ ಬರುತ್ತದೆ. ಆದ್ದರಿಂದ ಅಸತ್. ಹೀಗೆ ಅರ್ಥಾಪತ್ತಿಯಿಂದ ಜಗತ್ತು ಅನಿರ್ವಚನೀಯ ಎಂದು ತಿಳಿಯುತ್ತದೆ. ಇದು ಐಕ್ಯವಾದಿಗಳ ಅಭಿಪ್ರಾಯ.

ಅರ್ಥಾಪತ್ತಿಯು ಭೇಧವಾದಿಗಳ ಪ್ರಕಾರ ಪ್ರತ್ಯೇಕ ಪ್ರಮಾಣವಲ್ಲ. ಅದು ಅನುಮಾನದಲ್ಲೇ ಸೇರುತ್ತದೆ. ಅನುಮಾನದಿಂದ ಅನಿರ್ವಚನೀಯ ಸಾಧಿಸಿದರೆ ಬರುವ ದೋಷಗಳನ್ನು ಈ ಹಿಂದೆಯೇ ಹೇಳಲಾಗಿದೆ. ಜೊತೆಗೆ ಇನ್ನೂ ಕೆಲವು ದೋಷಗಳು ಬರುತ್ತವೆ. ನರವಿಷಾಣ ಅಥವಾ ಶಶವಿಷಾಣ ಎಂಬುದು ಅಸತ್ಯವಾಗಿದ್ದರೂ ಜ್ಞಾನ ಬರುವುದು ಕಂಡಿದೆ. ಆದ್ದರಿಂದ ಅಸತ್ ಆದುದು ಪ್ರತೀತವಾಗುವುದಿಲ್ಲ ಎಂಬ ವ್ಯಾಪ್ತಿಯನ್ನು ಅಂಗೀಕರಿಸಲಾಗದು. ಮೊದಲು ವಿಪರೀತವಾಗಿ ತಿಳಿಯಲ್ಪಟ್ಟಿದ್ದು ಆಮೇಲೆ ಸರಿಯಾಗಿ ತಿಳಿಯುವುದೇ ಬಾಧ್ಯತ್ವದ ಲಕ್ಷಣವಾಗಿದೆ. 'ಅಸತ್ಯವಾದುದು ಬಾಧ್ಯವಾಗುತ್ತದೆ, ಸತ್ಯವಾದ ವಸ್ತುವು ಬಾಧ್ಯವಾಗುವುದಿಲ್ಲ' ಎಂಬುದಾಗಿ ನಿಯಮವೂ ಇಲ್ಲ. ಆದ್ದರಿಂದ ಅರ್ಥಾಪತ್ತಿಯು ಅನಿರ್ವಚನೀಯವನ್ನು ಸಾಧಿಸಲು ಪ್ರಮಾಣವೆನ್ನುವುದು ಸರಿಯಲ್ಲ. (ಮುಂದುವರಿಯುವುದು)


**ನೂತನಾಂಗ್ಲ ವರ್ಷದ ಶುಭಾಶಯಗಳೊಂದಿಗೆ** **ದೂರವಾಣಿ : 2521725**

**ಶಹಬಾದ್ ಸ್ಟೋನ್ಸ್ ಟ್ರೇಡಿಂಗ್ ಕಂಪೆನಿ**

**ಸ್ಥಾಪನೆ : 1975**

**ರಥಬೀದಿ, ಉಡುಪಿ**

ಕಡಪ, ತಾಂಡೂರ್‌ಬ್ಲೂ, ಮಾರ್ಬಲ್, ಗ್ರಾನೈಟ್‌ಕಲ್ಲುಗಳ ಹಾಗೂ ಸಿರೆಮಿಕ್ಸ್ ಟೈಲ್ಸ್‌ಗಳ ಅಧಿಕೃತ ಮಾರಾಟಗಾರರು. ಗ್ರಾನೈಟ್ ಕಲ್ಲುಗಳಲ್ಲಿ ಹೆಸರನ್ನು ಕೆತ್ತಿಕೊಡಲಾಗುವುದು.

**ಅಕ್ಷಯ ಸ್ಟೋನ್ ಕಟ್ಟಿಂಗ್ ಕಂಪೆನಿ,**
**ಕೊರಂಗ್ರಪಾಡಿ. ದೂರವಾಣಿ : 2524207**

**ಪ್ರೊ: ಯು. ಪದ್ಮರಾಜ ಆಚಾರ್ಯ**

**॥ श्रि कृष्णाय नमः ॥**

**U. VITTAL RAO**
*Proprietor*
**SARVAJNA MEDICALS**
Car Street, UDUPI-1

**SMT. VANI V. RAO**
B. A., LL.B.
Advocate, Udupi
Mobile : 9845449044

Phone : 2524070 (R), 2534770 (S)



# ನಮಗಿಬ್ಬರು; ನಾವಿಬ್ಬರೇಽ

**ಎ. ಬಿ. ಕುಂಜಾರ್, ಬೆಂಗಳೂರು**

**ಕು**ಟುಂಬದ ಪ್ರಾಕ್ತನ ವ್ಯವಸ್ಥೆ ಒಂದಿತ್ತು. ಇತ್ತೀಚಿನವರೆಗೂ ಅದರ ಸೊಗಸಿತ್ತು. ಮಂದಿ ತುಂಬಿ ಮನೆ ತುಳುಕುತ್ತಿದ್ದ ಚೆಲುವು ಬೀರಿತ್ತು. ಕ್ರಿಯಾಶೀಲತೆ ಅದರ ಅಂತಃಸತ್ವವಾಗಿತ್ತು. ಕೂತುಂಬುವ ಪ್ರವೃತ್ತಿಗೆ ಅದರೊಳಗೆ ಅವಕಾಶ ಇಲ್ಲವಾಗಿತ್ತು. ಅವಿಭಕ್ತತೆಯ ಭದ್ರಬುನಾದಿ ಅದಕ್ಕಿತ್ತು.

ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯ ವೈಶಿಷ್ಟ್ಯಗಳನೇಕ - ಮೂರ್‍ನಾಲ್ಕು ಪೀಳಿಗೆಗಳ ಸಮಾವೇಶ. ಸಾಂಘಿಕ ಜೀವನದ ಸಂತೋಷ. ಗಟ್ಟಿತನ ತೋರಿ ನೋವು ನಲಿವುಗಳನ್ನು ಎಲ್ಲರೊಟ್ಟಾಗಿ ಅನುಭವಿಸುವ ಅವಕಾಶ. ಎಲ್ಲರೊಬ್ಬನಿಗಾಗಿ ಒಬ್ಬನೆಲ್ಲರಿಗಾಗಿ ಎಂಬ ಮಂತ್ರ ವಿಶೇಷ. ಇಂಥ ಇನ್ನನೇಕ ಸಶೇಷ.

ಕುಟುಂಬ ವ್ಯವಸ್ಥೆಯ ಇಂದಿನ ಅವಸ್ಥೆ ಬಲು ಕರುಣಾಜನಕ. ಅದರ ಗಾಥೆಯ ಗೀತೆಯಂತೂ ಅತಿ ದುಃಖಜನಕ. ಮುಕ್ತತೆಯ ತೀವ್ರಾಸಕ್ತಿ ಅದಕ್ಕಿಂದು ಮಾರಕ. ಈಗೀಗ ಅದು ಹೆತ್ತವರಿಗಷ್ಟೇ ಸೀಮಿತವಾಗುತ್ತಿರುವ ಅಂತ್ಯಕಾಲದ ಅತಿ ಚಿಕ್ಕ ಘಟಕ.

ಕುಟುಂಬಗಳಲ್ಲಿ ಇಂದು ಕಾರ್ಪಣ್ಯಗಳ ಮಹಾಪೂರ ಬಂದಿದೆ. ನೀರವತೆಯ ರುದ್ರ ಲಾಸ್ಯ. ಬಿಕೋ ಎನ್ನುವ ಆವಾಸ್ಯ. ಬಾಳ ಮುಸ್ಸಂಜೆಗೆ ಮುನ್ನವೇ ದಟ್ಟವಾಗುತ್ತಿರುವ ನೈರಾಶ್ಯ. ಸಕಲ ಸೌಭಾಗ್ಯವಿದ್ದೂ ಒಂದೂ ಇಲ್ಲದಂಥ ಗಾರ್ಹಸ್ಥ್ಯ. ದಂಪತಿಗಳಿಗಷ್ಟೇ ಸೀಮಿತವಾದ ಸಾಂಗತ್ಯ. ದಿನದಿನವೂ ಅಡರುತ್ತಿರುವ ವಾರ್ಧಕ್ಯ. ಮೇಲುಕುಹಾಕಲಷ್ಟೇ ಉಳಿದಿರುವ ಬದುಕಿನ ಸಾರ್ಥಕ್ಯ. ನಿವೃತ್ಯುತ್ತರದಲ್ಲಿ ಪ್ರವೃತ್ತಿಪರತೆಗೆ ಇನಿತೂ ಇಲ್ಲದ ಪ್ರಾಶಸ್ತ್ಯ. ಇನ್ನೂ ಏನೇನೋ.

ಕುಟುಂಬದ ಅಂದಿನ ವಿಸ್ತಾರವಾದ ಹರವು, ಮೂರ್‍ನಾಲ್ಕು ಪೀಳಿಗೆಗಳ ಇರವು, ಸಂತತಿ ಸಂಪತ್ತಿನ ನಂದಗೋಕುಲದ ಚೆಲುವು, ಸದಾ ಲಭ್ಯವಾಗುತ್ತಿದ್ದ ಪಾರಸ್ಪರಿಕ ನೆರವು. ಸದಸ್ಯರಿಂದ ಸಿಗುತ್ತಿದ್ದ ಬರಕಾಣದ ಒಲವು, ಪ್ರೀತಿ ವಿಶ್ವಾಸಗಳ ಸೆಳವು - ಎಲ್ಲವೂ ಇತಿಹಾಸದ ಪುಟ ಸೇರಿ ಭವ್ಯ ಪರಂಪರೆಯ ಸಾಲಿಗೆ ಸೇರಲಿಚ್ಛಿಸುವವುಗಳೇ.

ಒಂದು ಬೇಕು; ಎರಡು ಸಾಕು. ಈ ನುಡಿ ಮಹತ್ವ ಎಲ್ಲರಿಗಿಂದು ಗೊತ್ತು. ಹೀಗಾಗಿ ಚಿಕ್ಕ ಹಾಗೂ ಚೊಕ್ಕ ಸಂಸಾರಕ್ಕೇ ಬಲ್ಲವರ ಒತ್ತು. ಗಂಡಿರಲಿ, ಹೆಣ್ಣಿರಲಿ, ಮಕ್ಕಳಿಬ್ಬರೇ ಮನೆಗೆ ಸಾಕು. ಅವರ ಬಲುಮೆಯ ಮೇಲ್ಮೈಯೊಂದೇ ನಮಗೆ ಬೇಕು. ಹೀಗೆ ತಿಳಿಯುವ ಮಂದಿಯೇ ಬಹಳ ಇಂದು.

ಆರತಿ ಕೀರುತಿಗಾಗಿ ಹಗಲಿರುಳೂ ಒದ್ದಾಟದ ಗಾಣಕ್ಕೆ ಹೆಗಲು ಕೊಡಬೇಕು. ಬರಲಿರುವ ಸಂತಸಕ್ಕಾಗಿ ಇಂದಿರುವ ಸುಖ - ತ್ಯಾಗ ಮಾಡಲಿಕ್ಕೇ ಬೇಕು. ಮಕ್ಕಳಿಗೆ ಉಜ್ವಲ ಭವಿಷ್ಯ ತಂದುಕೊಡುವುದಕ್ಕಾಗಿ ಎಗ್ಗಿಲ್ಲದ ಕಾಯಕನ ನಡೆಸಲೇಬೇಕು. ಇದಕ್ಕಿಂತ ಮಿಗಿಲಾದ ಆನಂದವೇನು ಬೇಕು?

ಅಂತ್ಯಕಾಲದ ನಿಶ್ಚಿಂತೆಗಾಗಿ, ನೆಮ್ಮದಿ ನಮ್ಮದಾಗುವುದಕ್ಕಾಗಿ, ಸೌಭಾಗ್ಯ ಕಂಡುಂಡು ಸುಖದಿಂದ ಇರುವುದಕ್ಕಾಗಿ, ತಾರುಣ್ಯದ ಕೊರಡು ತೇದು ಸುಗಂಧವನ್ನು ಪಡೆಯಬೇಕು. ಎಲ್ಲರಿಗೂ ಅದನ್ನು ಹಂಚಿ ಆನಂದ ಕಾಣಬೇಕು. ಹೆತ್ತವರ ಸ್ವರ್ಗ ಸುಖಕ್ಕೆ ಇದೊಂದೇ ಸಾಕು.

ಆದರೆ, ಹೆತ್ತವರ ಈ ಆಶೆ ಆಧುನಿಕ ಅರ್ಥವ್ಯವಸ್ಥೆಯ ಪ್ರಖರತೆಯಿಂದಾಗಿ ಕಮರಿ ಹೋಗುತ್ತಿದೆ. ಆಧುನಿಕ ಅರ್ಥವ್ಯವಸ್ಥೆ ಬಲು ಅನರ್ಥಕಾರಿ. ಅದು ವಿಭಕ್ತತೆಯನ್ನು ಹುಟ್ಟುಹಾಕುವ ರೂವಾರಿ - ಮುಕ್ತತೆಯ ಮತ್ತೇರಿಸುವ ಅಮಲುಕಾರಿ. ಸುಖಪರತೆಯ ಹುಚ್ಚು ಹೆಚ್ಚಿಸುವ ಸಮ್ಮೋಹನಕಾರಿ. ಭಾವನಾತ್ಮಕತೆಯನ್ನು ಮಂಕಾಗಿಸುವ ಮಂಪರುಕಾರಿ. ಸಂಬಂಧ ನಿರ್ಮೋಹಕತೆಯನ್ನು ಹುಲುಸಾಗಿ ಬೆಳೆವ ಪೋಷಣಕಾರಿಯೂ ಹೌದು.

ಬಹಳಷ್ಟು ಕುಟುಂಬಗಳಲ್ಲಿ ಇಂದು ಒಬ್ಬರಿಬ್ಬರೋ ಮಕ್ಕಳಿರುವರು. ಪುಕ್ಕ ಬೆಳೆದು ರೆಕ್ಕೆ ಬಲಿತು ಅವರು ದೂರ ಹಾರಿ ಹೋಗಿರುವರು. ಕೈತುಂಬ ವರಮಾನ ತರುವ ಉದ್ಯೋಗದಲ್ಲಿ ಅವರಿರುವರು. ಮದುವೆಯಾಗಿ ಮಕ್ಕಳಾಗಿ ಚೊಕ್ಕವಾಗಿ ಬೇರೂರಿರುವರು. ಇವರನ್ನು ಹೆತ್ತುಹೊತ್ತು ಹೈರಾಣಾಗಿರುವ ಹೆತ್ತವರು ಇಬ್ಬರೇ ಮಹಾಲಯದಲ್ಲಿ ದಿನದೂಡುತ್ತಿರುವರು.

ತಾವು ಸಾಗಿ ಬಂದ ಕಠಿಣ ದಾರಿಯ, ಅನುಭವಿಸಿದ ಕಷ್ಟ - ನಷ್ಟಗಳ, ಈಡೇರಿಸಿಕೊಂಡ ಸಾಧನೆಯ, ಮಾಡಿದ ತ್ಯಾಗದ, ಗಳಿಸಿದ ಧನ್ಯತೆಯೇ ಇವರ ಪಾಲಿನ 'ಕುರುಕಲು'. ಇವರ ದಯನೀಯ ಗೊಟರುಂಟು ನೋಡಲು. ಅದರಿಂದ ಬರುವ ಗೊಗ್ಗೊರಲುಂಟು ಕೇಳಲು.

ಹೆತ್ತವರನ್ನು ಕರೆಸಿಕೊಂಡು ತಮ್ಮೊಂದಿಗೆ ಇರಿಸಿಕೊಳ್ಳಲಾಗದ ಪರಿಸ್ಥಿತಿ ಮಕ್ಕಳಲ್ಲಿ ಅನೇಕರಿಗೆ. ಮನೆ - ಮಾರು ಬಿಟ್ಟು ಹೋಗಿ ಮಕ್ಕಳೊಂದಿಗೆ ಇರಲಾಗದ ದುಃಸ್ಥಿತಿ ಹೆತ್ತವರಲ್ಲಿ

126/A, 1ನೇ ಮಹಡಿ, 1ನೇ ಕ್ರಾಸ್, ಕಾಳಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು – 560 050. ದೂ. 26601259

ಶುಭಾಶಯಗಳು : ದೂರವಾಣಿ : 2523975

ಹಿತ್ತಾಳಿಯ ಆಕರ್ಷಕ ಕರಕುಶಲದ ವಸ್ತುಗಳ ಮಳಿಗೆಗೆ ಸಂದರ್ಶಿಸಿರಿ.

**ಮೆ। ಐರೋಡಿ ರಮಾನಾಥ ಪೈ ಮತ್ತು ಕಂಪನಿ**

**(ಐರೋಡಿ ರಾಧಾಕೃಷ್ಣ ಪೈ ಮಳಿಗೆಗಳ ಸಮೂಹ ಅಂಗ)**

**ಸಿಟಿ ಕ್ಯಾಂಪ್ ಬಿಲ್ಡಿಂಗ್, ಲಿಟ್ಲ್ ಪೈ ಒಂದನೇ ಮಹಡಿ**

**ವಿದ್ಯಾಸಮುದ್ರ ಮಾರ್ಗ, ಉಡುಪಿ - 576 101**

ಹಲವರಿಗೆ. ಮುಕ್ತತೆಯ ಮೋಹದಲ್ಲಿ ಸಿಲುಕಿರುವ ಎಳೆಯರನೇಕ ಇರುವರು. ಅವಿಭಕ್ತತೆಯ ವ್ಯಾಮೋಹವನ್ನು ತೊರೆಯದಿರುವ ಹಿರಿಯರೂ ಸಾಕಷ್ಟಿರುವರು. ಐಷಾರಾಮೀ ಪರತೆ ಕಿರಿಯ ಪೀಳಿಗೆಯದ್ದಾದರೆ, ಜುಗ್ಗುತನ ಬಿಡದ ಪರಿಯು ಹಿರಿಯ ಪೀಳಿಗೆಯದ್ದಾಗಿರುತ್ತದೆ.

ಪೀಳಿಗೆ ಅಂತರದ ಇಂಥ ವೈರುಧ್ಯಗಳಿಂದಾಗಿ ಬೇರೆ ಬೇರೆಯಾಗಿರುವ ಮಕ್ಕಳು - ಹೆತ್ತವರ ಅವಾಂತರವೇ ಇಂದಿನ ಸ್ಥಿತ್ಯಂತರ.

ಇಂತಿದ್ದೂ, ವಿಭಕ್ತತೆಯಲ್ಲೂ ಅವಿಭಕ್ತತೆಯ ಮಾನಸ ಸಿಂಚನ ಅನೇಕರಿಗೆ ಲಭ್ಯ. ದೂರದಲ್ಲಿದ್ದೂ ಹೆತ್ತವರನ್ನು ಮನದಲ್ಲಿ ಹೊತ್ತುಕೊಂಡಿರುವ ಮಕ್ಕಳಿಂದಷ್ಟೇ ಇದು ಸಾಧ್ಯ. ದೂರ ಸಂಭಾಷಣೆಯ ಸುಖಾನುಭೂತಿ ಇಂಥ ಹೆತ್ತವರಿಗಿದೆ ಅಸಾಧ್ಯ. ಮಕ್ಕಳು ತಮ್ಮ ಅಪಾರ ಗಳಿಕೆಯಿಂದ ತೆರಿಗೆರೂಪವಾಗಿ ಕೊಡಮಾಡುವ ಬಾಗಿನವದೇ ಅನೇಕ ಹೆತ್ತವರ ಭಾಗ್ಯ.

ಭೌತಿಕ ವಿಭಕ್ತತೆಯಲ್ಲಿರುವ ಮಕ್ಕಳು - ಹೆತ್ತವರು ಮಾನಸ ಅವಿಭಕ್ತತೆಯನ್ನು ಮೆರೆಯುವುದುಂಟು. ಅಭ್ಯಾಗತರಂತೆ ಆಗೊಮ್ಮೆ ಈಗೊಮ್ಮೆ ಆಚೀಚೆ ಹೋಗಿ ಬರುವುದು ಉಂಟು. ಪರಸ್ಪರ ಆದರ, ಪ್ರೀತಿ, ಗೌರವ ತೋರುವುದುಂಟು. ಆದರೂ ಪಲ್ಲವಿ ಹಾಡಲು ಉಂಟೇ ಉಂಟು - **ಯಾರಿಗೆ ಯಾರುಂಟು ಎರವಿನ ಸಂಸಾರ...**

ಅವಿಭಕ್ತರಾಗಿದ್ದೂ ವಿಭಕ್ತತೆಯ ದುಃಖವಿದೆ ಹಲವರಿಗೆ. ಮಕ್ಕಳು ಮೊಮ್ಮಕ್ಕಳೊಂದಿಗೆ ಇದ್ದೂ ಮೌನಿಗಳಾಗಿ ಬಿದ್ದಿರಬೇಕಾದ ನಾಯಿಪಾಡು ಇವರಿಗೆ. ಕಾಳಗದಲ್ಲಿ ಸೋತ ಶ್ವಾನ ಆಗಸವ ನೋಡಿ ಊಳಿಟ್ಟಂತೆ ಗೋಗರೆವುದೊಂದೇ ಉಳಿದಿದೆ ಇವರ ಪಾಲಿಗೆ. ಆದರ ಮಾಡುವವರಿಲ್ಲ. ಪ್ರೀತಿ ತೋರುವವರಿಲ್ಲ. ಮನಸಾರೆ ಮುಷ್ಟಿ ಕೂಳು ಇಕ್ಕುವವರಿಲ್ಲ. ಜರೆತ - ಮೊರೆತವಲ್ಲದೆ ಬೇರೇನೂ ಇಲ್ಲವೇ ಇಲ್ಲ.

ಇತ್ಯುಕ್ತವಾದ ಹೆತ್ತವರ ಗೋಳು ಗೀತೆ, ಬರಿಯ ಆರಂಭ ಮಾತ್ರ. ಕಾಲ ಉರುಳಿದಂತೆ ತಾರಕದಲ್ಲಿ ಇದನ್ನು ಹಾಡಲಿದೆ ಭಾರಿ. ಭಾರತೀಯ ಸಮಾಜ ಎಚ್ಚತ್ತುಕೊಳ್ಳಲು ಇದು ಸಕಾಲವೇ ಸರಿ. ಮಕ್ಕಳನ್ನು ಹೆತ್ತು ಹೊತ್ತರೆ ಸಾಲದು ಅವರ ಮನದಂಗಳದಲ್ಲಿ ಕಾಲೋಚಿತವಾದ ಅವಿಭಕ್ತತೆಯ ಬಿತ್ತನೆ ಮಾಡಲೇಬೇಕು. ಭವಿಷ್ಯದ ಪೀಳಿಗೆಗಳನ್ನು ಅನಾಥ ಪ್ರಜ್ಞೆಯಿಂದ ರಕ್ಷಿಸಲೇಬೇಕು. ಭಾರತೀಯ ಕುಟುಂಬ ವ್ಯವಸ್ಥೆಯ ಕಂಪನ್ನು ಕಾಪಿಟ್ಟುಕೊಳ್ಳಬೇಕು.


ಶುಭಾಶಯಗಳು : ಫೋನ್ : **2520179**

ಅತ್ಯುತ್ತಮ, ತಾಜಾ ತರಕಾರಿ ಮತ್ತು ಹಣ್ಣು ಹಂಪಲುಗಳಿಗಾಗಿ

**ಯೋಗೀಶ್ ಕಾಮತ್**

**ವೆಜಿಟೇಬಲ್ ಮರ್ಚಂಟ್**

**ತೆಂಕಪೇಟೆ, ಉಡುಪಿ – 576 101**




# ಸಾಂಸ್ಕೃತಿಕ ರಸಪ್ರಶ್ನೆಗಳು


**ಡಾ| ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ**


1. ಯಮ - ನಚಿಕೇತರ ಸಂವಾದ ಬರುವ ಉಪನಿಷತ್ತು ಯಾವುದು ?
2. ಜವಾಹರಲಾಲ ನೆಹರೂ ಅವರ ಸಮಾಧಿ ಇರುವ ಸ್ಥಳ ಯಾವುದು?
3. ಪಂಪಾಕ್ಷೇತ್ರವೆಂದರೆ ಯಾವುದು?
4. ಭಾರತದ ಅತೀ ಉದ್ದವಾದ ನದಿ ಯಾವುದು ?
5. ಕೇಂದ್ರಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಇಬ್ಬರು ಕನ್ನಡಿಗರು ಯಾರು?
6. ತ್ರಿಮೂರ್ತಿಗಳನ್ನು ಮಕ್ಕಳನ್ನಾಗಿ ಮಾಡಿ ತನ್ನ ಮಡಿಲಲ್ಲಿ ಆಡಿಸಿದ ಋಷಿ ಪತ್ನಿಯೊಬ್ಬಳ ಹೆಸರೇನು?
7. 'ನಹಿ ಜ್ಞಾನೇನ ಸದೃಶಂ' ಎಂಬ ಪ್ರಸಿದ್ಧವಾಕ್ಯ ಯಾವ ಗ್ರಂಥದಲ್ಲಿದೆ?
8. 'ಭಾರತೀಯ ವಿದ್ಯಾಭವನ'ದ ರಾಜಾಜಿ ಪುರಸ್ಕಾರ ಪಡೆದ ಸಾಹಿತಿ ಯಾರು?
9. 'ಪಂಚಮವೇದ' ಎಂದು ಯಾವ ಗ್ರಂಥವನ್ನು ಕರೆಯುತ್ತಾರೆ ?
10. 'ಮೋಹನ ತರಂಗಿಣಿ'ಯ ಕೃತಿಕಾರ ಯಾರು ?
11. ಆಧುನಿಕ ಕಾಲದಲ್ಲಿ ಕಂಡು ಹಿಡಿಯಲಾದ ಮೊದಲ ಗ್ರಹ ಯಾವುದು ?
12. ಶಿವನ ಮೈಬೆವರಿನಿಂದ ಹುಟ್ಟಿದ ರಾಕ್ಷಸ ಯಾರು?
13. ಯಾವ ತಿಥಿಯಂದು ಭಾರತ ಸ್ವತಂತ್ರವಾಯಿತು ?
14. ಮೈಸೂರಿನ ಜಗನ್ಮೋಹನ ಅರಮನೆಯನ್ನು ಕಟ್ಟಿಸಿದ ದೊರೆಯಾರು?
15. ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದವರು ಯಾರು?
16. ರನ್ನನ ಪ್ರಸಿದ್ಧ ಕೃತಿ ಯಾವುದು?
17. ಶರನ್ನವರಾತ್ರಿ ಯಾವ ಮಾಸದಲ್ಲಿ ಬರುತ್ತದೆ ?
18. ವಿದ್ಯಾರಂಭಕ್ಕೆ ಪ್ರಶಸ್ತವಾದ ತಿಥಿಯಾವುದು ?
19. ಶಬರಿಮಲೆಕ್ಷೇತ್ರದ ಅಧಿದೇವತೆ ಯಾರು?
20. ನರಸಿಂಹಾವತಾರದಲ್ಲಿ ಮಹಾವಿಷ್ಣು ಅನುಗ್ರಹಿಸಿದ ಬಾಲಕ ಯಾರು?


**ಚೇತನ, ನೇರಂಬಳ್ಳಿ ರಸ್ತೆ, ಕೋಟೇಶ್ವರ – 576 222**



ಶುಭಾಶಯಗಳು : ದೂರವಾಣಿ : **2534481**

**ಹರಿದಾಸ್ ಸೇರಿಗಾರ್ ಮತ್ತು ಸಹೋದರರು**

**ಹಣ್ಣು ಕಾಯಿ ಅಂಗಡಿ**

ಅನಂತೇಶ್ವರ ದೇವಸ್ಥಾನದ ಎದುರು,
ರಥಬೀದಿ, ಉಡುಪಿ



# ಕನ್ನಡದ ಹುಟ್ಟು ಬೆಳವಣಿಗೆ

**ಕೋಟೇಶ್ವರ ಸೂರ್ಯನಾರಾಯಣ ರಾವ್**

**ಕ**ನ್ನಡನಾಡಿನ ಇತಿಹಾಸದ ಪುಟಗಳು ಕ್ರಿ. ಪೂ. ನಾಲ್ಕನೆಯ ಶತಮಾನದಿಂದ ತೆರೆದುಕೊಳ್ಳುತ್ತವೆ. ಮಹಾಬ್ರಾಹ್ಮಣ ಚಾಣಕ್ಯ ಮೌರ್ಯವಂಶದ ಚಂದ್ರಗುಪ್ತನನ್ನು ಮೌರ್ಯ ಸಮ್ರಾಟನನ್ನಾಗಿ ಪ್ರತಿಷ್ಠಾಪಿಸಿದುದು ಇತಿಹಾಸದಲ್ಲಿ ಪ್ರಧಾನ ದಾಖಲೆ ರೂಪದಲ್ಲಿ ದೊರಕುತ್ತದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ. ಮೌರ್ಯ ಚಂದ್ರಗುಪ್ತನ ಅಜ್ಜನಾದ ನಂದ ಗುಪ್ತನು ತನ್ನ ಜೈನಗುರು ಭದ್ರಬಾಹುವಿನೊಡನೆ ದಕ್ಷಿಣಕ್ಕೆ ವಲಸೆ ಬಂದು ಶ್ರವಣಬೆಳಗೊಳದಲ್ಲಿ ಸ್ಥಿತನಾದ ಕಾಲದಿಂದ ಅಧಿಕೃತವಾಗಿ ಕನ್ನಡನಾಡಿನ ಇತಿಹಾಸದ ಪುಟಗಳು ಬಿಚ್ಚಿಕೊಳ್ಳುತ್ತವೆ. ನಂದಗುಪ್ತನ ಕಾಲವೆಂದರೆ ಕ್ರಿ. ಪೂ. ನಾಲ್ಕು ನೂರು ವರ್ಷಗಳ ಹಿಂದಿನ ದಾಖಲೆಯಾಗಿದೆ. ಶ್ರವಣಬೆಳಗೊಳದ ಚಂದ್ರಗಿರಿ ಆಗ 'ಕಳ್ಬಪ್ಪು' ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿತ್ತು. ಆಗ 'ಪ್ರಾಕೃತ' ಭಾಷೆ ಗ್ರಂಥಗಳಲ್ಲಿ ಅಧಿಕೃತ ಭಾಷೆಯಾಗಿತ್ತು. ಕನ್ನಡಕ್ಕೆ ಸಂಬಂಧಿಸಿದಂತೆ ಆ ಕಾಲದ ಗ್ರೀಕ್ ನಾಟಕಗಳಲ್ಲಿ ಕನ್ನಡದ ಪದಗಳು ಬೆರೆತುಕೊಂಡಿರುವುದು ಕಂಡು ಬಂದಿತ್ತು. ಕ್ರಿ. ಪೂ. ಎರಡನೆಯ ಶತಮಾನದಲ್ಲಿ 'ಗಾಥಾ ಸಪ್ತಶತಿ' ಎಂಬ ಪ್ರಾಕೃತ ಗ್ರಂಥದಲ್ಲಿ ಹಲವಾರು ಕನ್ನಡ ಪದಗಳು ಸಂಯೋಜಿಸಲ್ಪಟ್ಟಿದ್ದುವು.

ಅಂದಿನ ಕಾಲದಲ್ಲಿ ಕನ್ನಡದ ಮೂಲನಿವಾಸಿಗಳಾದ (ದ್ರಾವಿಡರು) ತೋದರು, ಸೋಲಿಗರು, ಕೊರಗರು, ಕುಡಿಯರು, ಹಸಲರು, ಕಾಡು ಕುರುಬರು, ಯರವರು ಗುರುತಿಸಲ್ಪಟ್ಟಿದ್ದರು.

ಅಂದಿನ ಕಾಲದಲ್ಲಿ ವರ್ಣಾಶ್ರಮಧರ್ಮ ಪ್ರಬಲವಾಗಿದ್ದಂತೆ. ಧನ್ನಿಕ (ಧಾನ್ಯ ವ್ಯಾಪಾರಿ), ಕೋರ್ಲಿ (ನೇಕಾರ), ತಿಲಿಪಿಸಕ (ಗಾಣಿಗ), ಕಾಸಕಾರ (ಕಂಚುಗಾರ), ಸುವರ್ಣಕಾರ (ಅಕ್ಕಸಾಲೆ) ಮಣಿಕರ (ರತ್ನದ ಕೆಲಸಗಾರ) ಈ ಹೆಸರಿನಿಂದ ಗುರುತಿಸಲ್ಪಡುತ್ತಿದ್ದರು. ಆಡಳಿತ ವಿಭಾಗದಲ್ಲಿ ಗೌಡ (ಗಾವುಂಡ) ಗಣಕ (ಶ್ಯಾನುಭಾಗ) ಮಹಾಜನ (ಹಳ್ಳಿಯ ಮುಖಂಡ) ಹೆಸರಿನಿಂದ ಗುರುತಿಸಲ್ಪಡುತ್ತಿದ್ದರು. ಕರ್ನಾಟಕದಲ್ಲಿ ಅಂದಿನ ಕಾಲದಲ್ಲಿ ಬೇಸಾಯವೇ ಪ್ರಧಾನ ಉದ್ಯೋಗವಾಗಿತ್ತು.

ಕರ್ನಾಟಕ ರಾಜರ ಬಗೆಗೆ ವಿವರಿಸುವುದಾದರೆ - ಮೌರ್ಯ ಚಂದ್ರಗುಪ್ತನು ಕಟ್ಟಿಸಿದ ಬಸದಿ ಇಂದಿಗೂ ಶ್ರವಣ ಬೆಳಗೋಳದಲ್ಲಿ ಕಾಣಬಹುದಾಗಿದೆ. ಅಧಿಕೃತವಾಗಿ ಶಾಸನಗಳು, ಸಮ್ರಾಟ್ ಅಶೋಕನ ಕಾಲದವು ಕರ್ನಾಟಕ ಮೊಳಕಾಲ್ಮೂರು, ರಾಮೇಶ್ವರ, ಸಿದ್ದಾಪುರ ಮುಂತಾದ ಸ್ಥಳದಲ್ಲಿ ದೊರಕಿದೆ. ಆದರೆ ಇವುಗಳು ಪ್ರಾಕೃತ ಭಾಷೆಯಲ್ಲಿವೆ.

'ಮಹಾಲಕ್ಷ್ಮೀ ಕೃಪಾ', 25/1, ಡಿ. ವಿ. ಜಿ. ಅಡ್ಡ ರಸ್ತೆ, ಬಸವನಗುಡಿ, ಬೆಂಗಳೂರು – 560 004



ರಾಜರ ಇತಿಹಾಸವನ್ನು ಗಮನಿಸಿದರೆ - ಮೌರ್ಯ ವಂಶದ ಪ್ರಭಾವ ಕಡಿಮೆಯಾದಂತೆ ವೈಷ್ಣವ ಬ್ರಾಹ್ಮಣರಾದ ಶಾತವಾಹನರು, ಕರ್ನಾಟಕವನ್ನು ನಾಲ್ಕುನೂರ ಅರವತ್ತು ವರ್ಷಗಳು ನಿರಂತರವಾಗಿ ಆಳಿದ ದಾಖಲೆಯಿದೆ. ಅವರು ಸರ್ವಧರ್ಮ ಸಮನ್ವಯಿಗಳಾಗಿ ಯಜ್ಞಯಾಗಾದಿಗಳನ್ನು ನಿರಂತರ ಮಾಡುತ್ತಿದ್ದರು. ಇವರ ಶಾಸನ ಮಳವಳ್ಳಿಯಲ್ಲಿ ದಾನ ಶಾಸನ ರೂಪದಲ್ಲಿ ದೊರಕಿದೆ. ಶಾಲಿವಾಹನ ಶಕವು ಶಾತವಾಹನರ ದೊರೆಯೊಬ್ಬನಿಂದಾಗಿ.

ಕದಂಬ ವಂಶಜರು ಚರಿತ್ರೆ ಕ್ರಿ. ಪೂ. ಮೂರನೆಯ ಶತಮಾನದಿಂದ ಕ್ರಿ. ಶ. ಎರಡನೆಯ ಶತಮಾನದ ತನಕ ಶಾತವಾಹನರ ಸಾಮಂತರಾಗಿ ಇದ್ದರೂ - ಮಹಾರಾಜನಾಗಿ ಕದಂಬ ವಂಶದ ಬ್ರಾಹ್ಮಣ ಯುವಕ ಮಯೂರ ಶರ್ಮನಿಂದಾಗಿ (ಕ್ರಿ. ಶ. 280) ಕದಂಬ ವಂಶದ ರಾಜ್ಯಭಾರ ಅಧಿಕೃತವಾಗಿ ಆರಂಭವಾಯಿತು (ತಾಳಗುಂದ ಶಾಸನ)

ಕದಂಬ ಸುವರ್ಣ ನಾಣ್ಯ - 'ಪದ್ಮಟಂಕ' ಚಿನ್ನದ ನಾಣ್ಯವಾಗಿತ್ತು. ಕನ್ನಡ ಭಾಷೆಯ ಬಗೆಗೆ ಅಲ್ಲಲ್ಲಿ ಉಲ್ಲೇಖವಿದೆಯೆಂಬ ದಾಖಲೆ ಸಿಕ್ಕಿದರೂ ಅಧಿಕೃತ ಕನ್ನಡ ಭಾಷೆಯಲ್ಲಿ ಬರೆದ 'ಹಲ್ಮಿಡಿ' ಶಾಸನ ಐದನೆಯ ಶತಮಾನದ ದಾಖಲೆ - ಪ್ರಪ್ರಥಮ ಕನ್ನಡದಲ್ಲಿ ಬರೆದ ಶಾಸನವೆಂಬ ಹೆಗ್ಗಳಿಕೆಗೆ ಪಾತ್ರವಾದ ಈ ಶಾಸನವು ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮದಲ್ಲಿ ದೊರಕಿರುವುದಾಗಿದೆ. ಆ ಶಾಸನದ ಸ್ಥೂಲ ತಾತ್ಪರ್ಯದಂತೆ "ಮೃಗೇಶ ಮತ್ತು ನಾಗ ಎಂಬುವವರು ಯುದ್ಧದಲ್ಲಿ ಹೋರಾಡಿ ಜಯಶೀಲನಾದ ವಿಜ ಅರಸ ಎನ್ನುವವನಿಗೆ ಎರಡು ಗ್ರಾಮುಗಳನ್ನು ಶೌರ್ಯದ ಕೊಡುಗೆಯಾಗಿ ಕೊಟ್ಟರು" - ಎನ್ನುವುದಾಗಿದೆ. ಅಲ್ಲಿ ಬಳಕೆಯಾದ "ನಾಡುಳ್ - ಕೇಳ್ದೊನ್ ವಿಜ್ಜಾರ್" ಪದಗಳು ಹಳೆಗನ್ನಡದ ರೂಪಗಳಿಗಿಂತಲೂ ಪ್ರಾಚೀನವಾದವು ಎನ್ನುವುದನ್ನು ತೋರಿಸುತ್ತದೆ.

ಹಲ್ಮಿಡಿ ಶಾಸನದ ನಂತರ ಕನ್ನಡ ಶಾಸನವೆಂದರೆ ಕ್ರಿ. ಶ. 634-35ರಲ್ಲಿ ಐಹೊಳೆ ಗ್ರಾಮದ ಮೇಗುತಿ ದೇವಾಲಯದ ಗೋಡೆಯಲ್ಲಿ ಕೆತ್ತಿದ ಹಳೆಗನ್ನಡ ಹಾಗೂ ಸಂಸ್ಕೃತ ಭಾಷೆಯ ಶಾಸನವಾಗಿದೆ. ಈ ಶಾಸನದಿಂದ ಇಮ್ಮಡಿ ಪುಲಕೇಶಿಯ ಧೀರ ಚರಿತ್ರೆ, ನಮಗೆ ಸಿಗುತ್ತಿರಲಿಲ್ಲ. ಈ ಶಾಸನದ ಕರ್ತೃ ರವಿಕೀರ್ತಿ ಎಂಬ ಪಂಡಿತ.

ಕ್ರಿ. ಶ. ಏಳನೆಯ ಶತಮಾನದ ಶಾಸನವೊಂದು ಬಾದಾಮಿಯಲ್ಲಿ ದೊರಕಿದುದಲ್ಲದೆ - ಆ ಶಾಸನವು ಕನ್ನಡದ ಹೊನ್ನಸಿರಿಯನ್ನು ತೋರಿಸುತ್ತದೆ. ಓರ್ವ ಮಹಾನ್ ವ್ಯಕ್ತಿಯಾಗಿದ್ದ

ಶುಭಾಶಯಗಳು

ಧರ್ಮದರ್ಶಿಗಳು ಬ್ರಹ್ಮಶ್ರೀ ಬಿ. ಕೃಷ್ಣಮೂರ್ತಿ ಸಾಮಗರು

**ಶ್ರೀ ವಾಸುಕಿ ಅನಂತಪದ್ಮನಾಭ ದೇವಸ್ಥಾನ**

ಬಡಗುಪೇಟೆ, ಉಡುಪಿ - 576 101.

**ದೂರವಾಣಿ: 2523004**

ಕಪ್ಪೆ ಅರಭಟ್ಟನೆಂಬವನನ್ನು ಶಾಸನಕಾರ ಬಣ್ಣಿಸಿದ ಬಗೆ -

**ಕಪ್ಪೆ ಅರಭಟ್ಟನ್ ಶಿಷ್ಟ ಜನಪ್ರಿಯನ್**
**ಕಷ್ಟ ಜನವರ್ಜಿತನ್ ಕಲಿಯುಗ ವಿಪರೀತನ್**
**ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ**
**ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್**
**ಮಾಧವನೀತನ್ ಪೆರನಲ್ಲ ॥**

(ಶಾಸನದ ಮೂಲರೂಪವನ್ನು ಇತ್ತೀಚಿನ ಲಿಪಿಗೆ ಪರಿವರ್ತಿಸಿದಾಗ ಮೂಡಿ ಬಂದ ಶಬ್ದ ಪುಂಜ)

ಕಲ್ಲುಗಳಲ್ಲಿ ಕೊರೆಯುವ ಶಾಸನಕ್ಕೆ ಸಂಬಂಧಿಸಿದಂತೆ, ಏಳನೆಯ ಶತಮಾನದ ಮುಂದಿನ ದಿನಗಳಲ್ಲಿ ಕನ್ನಡನಾಡನ್ನಾಳಿದ ಹಲವಾರು - ವಿವಿಧ ವಂಶದ ರಾಜರುಗಳು ತಮ್ಮ ತಮ್ಮ ಬಹಾದ್ದೂರಿಯನ್ನು ಶಾಸನ ಬರೆಸುವುದರೊಂದಿಗೆ ದಾಖಲುಗೊಳಿಸಿರುವುದು ಕನ್ನಡನಾಡಿನಾದ್ಯಂತ ದೊರಕಿದೆ. ಕೇವಲ ಕಲ್ಲಿನಲ್ಲಿ ಮೂಡಿಸಿದ ಶಾಸನಗಳಲ್ಲದೆ ತಾಮ್ರ ಶಾಸನಗಳೂ ಅಲ್ಲಲ್ಲಿ ಕಾಣಿಸಿಕೊಂಡಿದ್ದು, ಕನ್ನಡದ ಅಕ್ಷರಗಳು ಕಾಲಕ್ರಮೇಣ ದುಂಡಗಾಗಿ ಅಭಿವೃದ್ಧಿಗೊಂಡಿರುವುದು ಕಾಣಿಸುತ್ತದೆ.

ಕದಂಬರ ಕಾಲದಿಂದ ಕನ್ನಡದ ಶಾಸನಗಳು ಬೆಳಕಿಗೆ ಬಂದಂತೆ - ಕನ್ನಡ ಲಿಪಿಗೆ ಒಂದು ಸಾವಿರದ ಐನೂರು ವರ್ಷಕ್ಕೂ ಮಿಕ್ಕಿದ ಇತಿಹಾಸವಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ಕೇಂದ್ರ ಸರಕಾರದ ಮೇಲೆ ವಿಶೇಷ ಒತ್ತಡವನ್ನು

ಶುಭಾಶಯಗಳು : ದೂರವಾಣಿ : 2528077

ಶ್ರೀ ಕೃಷ್ಣ
ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಲಿ.
ಎಲ್. ನಂ. 21487
ಪ್ರಧಾನ ಕಚೇರಿ : ವಾದಿರಾಜ ಕಾಂಪ್ಲೆಕ್ಸ್, ಹಳೆ ಪೋಸ್ಟ್ ಆಫೀಸು ರಸ್ತೆ, ಉಡುಪಿ - 576 101

❑ ನಮ್ಮಲ್ಲಿ ಚಿನ್ನಾಭರಣ ಈಡಿನ ಮೇಲೆ ಕಡಿಮೆ ಬಡ್ಡಿಯಲ್ಲಿ ಸಾಲ ಸೌಲಭ್ಯ.
❑ ವಾಹನ ಈಡಿನ ಸಾಲ ಕ್ಷಿಪ್ರವಾಗಿ ಸಿಗುವ ಸೌಲಭ್ಯ.
❑ ಕಡಿಮೆ ಬಡ್ಡಿದರದಲ್ಲಿ ಇತರ ಸಾಲಗಳು
❑ ವಿವಿಧ ಠೇವಣಾತಿಗಳ ಮೇಲೆ ಆಕರ್ಷಕ ಬಡ್ಡಿ ಕೊಡಲಾಗುವುದು.
❑ ನಿರಂತರ ಸೇವಾ ಠೇವಣಿ ಮಾಡಿದರೆ ಆಕರ್ಷಕ ಬಡ್ಡಿಯನ್ನು ಆಯಾ ದೇವಸ್ಥಾನಗಳಿಗೆ ಪೂಜೆ ಪುರಸ್ಕಾರಗಳಿಗೆ ಕಳುಹಿಸಿಕೊಡಲಾಗುವುದು.

ಶಾಖೆಗಳು : ಶ್ರೀಕೃಷ್ಣ ಕಾಂಪ್ಲೆಕ್ಸ್, ಬಸ್‌ಸ್ಟ್ಯಾಂಡ್‌ಬಳಿ, ಶಂಕರನಾರಾಯಣ, ಕುಂದಾಪುರ ತಾಲೂಕು
ಎನ್. ಎನ್. ಕಾಂಪ್ಲೆಕ್ಸ್, ಹೊನ್ನಾಳ - ಬ್ರಹ್ಮಾವರ, ಉಡುಪಿ ತಾಲೂಕು



ತರುವುದರೊಂದಿಗೆ ಶಾಸ್ತ್ರೀಯ ಭಾಷೆಯನ್ನಾಗಿ, ಜೀವಂತ ಭಾಷೆಯನ್ನಾಗಿ ಘೋಷಿಸಬೇಕಾದ ಅನಿವಾರ್ಯತೆಯನ್ನು ಬಿಂಬಿಸಬೇಕಾಗಿದೆ.

ಆದರೆ ಕರ್ನಾಟಕ ಸರಕಾರಕ್ಕೆ - ಕಾದು ನೋಡೋಣವೆನ್ನುವ ನೀತಿಯನ್ನು ಅನುಸರಿಸದೆ ಕನ್ನಡ ಭಾಷೆಯನ್ನು ಮಹತ್ವಪೂರ್ಣ ಹಂತಕ್ಕೆ ತಲುಪಿಸಬೇಕಾದ ಜವಾಬ್ದಾರಿಯಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಸಂಬಂಧ ಅತ್ಯಂತ ಮುತುವರ್ಜಿಯಿಂದ ಕೆಲಸ ಮಾಡಬೇಕಿದೆ.

ಕ್ರಿ. ಪೂ. ಮೂರನೆಯ ಶತಮಾನದಿಂದ ಕನ್ನಡ ಲಿಪಿ ಅಭಿವೃದ್ಧಿಗೊಂಡ ಬಗೆಗಿನ ಅಧಿಕೃತ ದಾಖಲೆಯನ್ನು ಗಮನಿಸಬಹುದಾಗಿದೆ. ಅಶೋಕನ ಕಾಲದ ಬ್ರಾಹ್ಮಿ ಲಿಪಿಯಿಂದ ರೂಪಾಂತರಗೊಂಡ ಕನ್ನಡ ಲಿಪಿಯ ಅಭಿವೃದ್ಧಿಯ ಹಂತಗಳನ್ನು ಹೇಗೆ ಪರಿವರ್ತನೆಯಾಯಿತೆನ್ನುವುದನ್ನು ನಿರ್ದಿಷ್ಟವಾಗಿ ದಾಖಲಾಗಿರುವುದನ್ನು ನೋಡಬಹುದಾಗಿದೆ.

**ಬ್ರಾಹ್ಮೀ ಲಿಪಿಯಿಂದ ರೂಪಾಂತರಗೊಂಡ ಕನ್ನಡ ಲಿಪಿಯ ಮುನ್ನಡೆ**

**ಕಾಲಮಾನ** **ರೂಪಾಂತರ ಹಂತಗಳು.**

ಕ್ರಿ. ಪೂ. 3ನೆಯ ಶತಮಾನ ...
ಕ್ರಿ. ಪೂ. 6ನೆಯ ಶತಮಾನ ...
ಕ್ರಿ. ಪೂ. 9ನೆಯ ಶತಮಾನ ...
ಕ್ರಿ. ಪೂ. 15ನೆಯ ಶತಮಾನ ..
ಆಧುನಿಕ ರೂಪ ...



ಶುಭಾಶಯಗಳು ಫೋನ್ : 2526114



ಸರಸ್ವತಿ ನಮಸ್ತುಭ್ಯಂ ವರದೆ ಕಾಮರೂಪಿಣಿ ।
ವಿದ್ಯಾರಂಭಂಕರಿಷ್ಯಾಮಿ ಸಿದ್ಧಿರ್ಭವತುಮೇಸದಾ ॥

ವಿದ್ಯಾ ಜ್ಯುವೆಲ್ಲರಿ ವರ್ಕ್ಸ್
ತೆಂಕಪೇಟೆ, ಉಡುಪಿ - 576 101

**ಉತ್ತರಗಳು :**

1. ಕಠೋಪನಿಷತ್ತು; 2) ಶಾಂತಿವನ; 3) ಹಂಪೆ; 4) ಬ್ರಹ್ಮಪುತ್ರ; 5) ಗೋಕಾಕ್, ಅನಂತಮೂರ್ತಿ 6) ಅನಸೂಯಾ; 7) ಭಗವದ್ಗೀತೆಯಲ್ಲಿ 8) ಭಾರತ ಸಿಂಧುರಶ್ಮಿ 9) ಮಹಾಭಾರತ 10) ಕನಕದಾಸರು; 11) ಯುರೇನಸ್ 12) ಜಲಂಧರ; 13) ಆಷಾಢ ಬಹುಳ ಅಮಾವಾಸ್ಯೆ; 14) ಮುಮ್ಮಡಿ ಕೃಷ್ಣರಾಜ ಒಡೆಯರ್; 15) ವಾಮನ; 16) ಗದಾಯುದ್ಧ; 17) ಆಶ್ವಯುಜ ಮಾಸದಲ್ಲಿ; 18) ವಿದ್ಯಾವಿಜಯದಶಮಿ 19) ಅಯ್ಯಪ್ಪ ಸ್ವಾಮಿ; 20) ಪ್ರಹ್ಲಾದ.



# ಸತ್ಯಬೋಧ ತೀರ್ಥರ ಪ್ರಾರ್ಥನೆಗೆ ಒಲಿದು ಬಂದ ಪಾವನ ಗಂಗೆ

**ಯು. ಎಸ್. ಶ್ರೀನಿವಾಸ ರಾವ್**

"ದೀರ್ಘಕಾಲ ಅಘೋರ ತಪವನ್ನಾಚರಿಸಿ ರಾಜಾಭಗೀರಥನು ದೇವಲೋಕದ ಗಂಗೆಯನ್ನು ಭೂಲೋಕಕ್ಕೆ ಬರುವಂತೆ ಮಾಡಿದರೆ, ಆ ಗಂಗೆ ಸವಣೂರಿನಲ್ಲಿ ಪ್ರತ್ಯಕ್ಷವಾಗುವಂತೆ ಮಾಡಿದ ಕೀರ್ತಿ, ಆಧುನಿಕ ಭಗೀರಥ, ಮಹಾತಪಸ್ವಿ, ಪ್ರಕಾಂಡ ಪಂಡಿತ, ಮಧ್ವಸಂಪ್ರದಾಯದ ಉತ್ತರಾಧಿಮಠಾಧೀಶರಾಗಿದ್ದ ಪೂಜ್ಯ ಶ್ರೀ ಶ್ರೀ ಸತ್ಯಬೋಧತೀರ್ಥ ಶ್ರೀಪಾದಂಗಳವರದು.

ಭಾರತವು ಸ್ವಾತಂತ್ರ್ಯ ಪಡೆಯುವ ಪೂರ್ವದಲ್ಲಿ ಕರ್ನಾಟಕದ ಹಿಂದಿನ ಧಾರವಾಡ ಜಿಲ್ಲೆಯ ಹಾಗೂ ಈಗಿನ ಹಾವೇರಿ ಜಿಲ್ಲೆಯಲ್ಲಿರುವ ಸವಣೂರು ನವಾಬರ ಆಳ್ವಿಕೆಗೊಳಪಟ್ಟಿದ್ದ ಚಿಕ್ಕ ಸಂಸ್ಥಾನವಾಗಿತ್ತು. ಸತ್ಯಬೋಧತೀರ್ಥರ ಕಾಲದಲ್ಲಿ ಆಗ ಧರ್ಮಿಷ್ಠನಾಗಿದ್ದ ಖಂಡೇರಾಯ ಸವಣೂರು ಸಂಸ್ಥಾನದ ದಿವಾನನಾಗಿದ್ದ. ಶ್ರೀಗಳವರು ದಕ್ಷಿಣ ಭಾರತದ ರಾಮೇಶ್ವರಾದಿ ಅನೇಕ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ವಿಶ್ವನಾಥನ ದರ್ಶನಕ್ಕೆ ವಾರಣಾಸಿ (ಕಾಶಿ)ಗೆ ಹೋಗುವವರು ಆ ಮಾರ್ಗದಲ್ಲಿ ಸಿಕ್ಕ ಸವಣೂರಿನಲ್ಲಿ ದಿವಾನ ಖಂಡೇರಾಯನ ಪ್ರಾರ್ಥನೆ ಮೇರೆಗೆ ಕೆಲಕಾಲ ತಂಗಿದ್ದರು. ಶ್ರೀಗಳವರ ಕಾಶಿಯಾತ್ರೆಯು ಸುಗಮವಾಗುವಂತೆ ಸಕಲ ಸಿದ್ಧತೆಗಳನ್ನು ಸ್ವತಃ ದಿವಾನ ಖಂಡೇರಾಯನ ಮೇಲ್ವಿಚಾರಣೆಯಲ್ಲಿ ನಡೆದು ಇನ್ನೇನು ಮರುದಿನ ಕಾಶಿಗೆ ಶ್ರೀಗಳವರು ತಮ್ಮ ದೇವರೊಂದಿಗೆ ಶಿಷ್ಯ ಪರಿವಾರ ಸಮೇತ ಹೊರಡುವುದೆಂದು ನಿಶ್ಚಯವಾಯಿತು. ಆದರೆ ಅದರ ಮುಂಚಿನ ದಿನ ಶ್ರೀಗಳವರ ಶಿಷ್ಯೋತ್ತಮನಿಗೆ ಗಂಗಾಮಾತೆ ಸ್ವಪ್ನದಲ್ಲಿ ಕಾಣಿಸಿಕೊಂಡು ಶ್ರೀಗಳವರು ಗಂಗಾಸ್ನಾನಕ್ಕೆ ಕಾಶಿಗೆ ಹೋಗುವ ಕಷ್ಟ ಅನುಭವಿಸಬೇಕಾಗಿಲ್ಲ ತಾನೆ ಅವರಿದ್ದಲ್ಲಿಗೆ ಸವಣೂರಿಗೆ ಬರುವುದಾಗಿ ತಿಳಿಸಿದಳು! ಅಪರೋಕ್ಷ ಜ್ಞಾನಿಗಳಾದ ಶ್ರೀಗಳವರು ಸ್ವಪ್ನ ವೃತ್ತಾಂತವನ್ನು ತಿಳಿದು ತಮ್ಮ ಕಾಶಿಯಾತ್ರೆಯನ್ನು ನಿಲ್ಲಿಸಿದರು. ಅಕ್ಷಯ ತೃತೀಯಾ ಶುಭದಿನದಂದು ಊರ ಹೊರಗೆ ಇರುವ ತೋಟದ ಬಾವಿಯಲ್ಲಿ ಸ್ನಾನಕ್ಕಿಳಿದರು. ಕೂಡಲೇ ಅಲ್ಲಿಯೇ ಇದ್ದ ಅತ್ತಿಮರದಿಂದ ಗಂಗೆ ಪ್ರತ್ಯಕ್ಷಳಾಗಿ ಪ್ರವಹಿಸತೊಡಗಿದಳು! ಶ್ರೀಗಳವರು ಅವರ ಶಿಷ್ಯರು, ಅಲ್ಲಿ ನೆರೆದಿದ್ದ ಊರ ಮಹನೀಯರು ಆನಂದ ಪುಳಕಿತರಾದರು. ಪುರ ಜನರು ತಮಗೆ ತಮ್ಮೂರಲ್ಲೇ ಗಂಗಾಸ್ನಾನದ ಪುಣ್ಯ ಒದಗಿಸಿಕೊಟ್ಟ ಶ್ರೀಗಳವರ ಪವಾಡಕಂಡು ಆಶ್ಚರ್ಯಚಕಿತರಾಗಿ ಶ್ರೀಗಳವರ ಪಾದಕ್ಕೆ ನಮೋ ನಮೋ ಎಂದರು!

938, ಆಶೀರ್ವಾದ, ಬಿ.ಎಸ್.ಕೆ. 3 ನೇ ಹಂತ, 7ನೇ ಬ್ಲಾಕ್, ಕಾಳಿದಾಸ ನಗರ, ಹೊಸಕೆರೆ ಹಳ್ಳಿ, ಬೆಂಗಳೂರು-85



ಪ್ರತಿ ದಿನ ಶ್ರೀಗಳವರು ಬಾವಿಯಲ್ಲಿ ಸ್ನಾನಮಾಡುವಾಗ ಅತ್ತಿ ಮರದಿಂದ ಗಂಗೆ ಬರುವುದನ್ನು ನೋಡಿ ಕೆಲ ಕುಹಕಿಗಳು ಗಂಗೆಯು ಬಾವಿಯೊಳಗಿಂದೇಕೆ ಬರುವುದಿಲ್ಲ ಎಂದು ಆಕ್ಷೇಪವೆತ್ತಿದರು. ಆಗ ಶ್ರೀಗಳವರು ಕುಹಕಿಗಳ ಮಾತಿಗೆ ಕೋಪಗೊಳ್ಳದೆ ಅದೇ ಬಾವಿಯಲ್ಲಿ ಸ್ನಾನಕ್ಕಿಳಿದು ಜಾಹ್ನವಿಯನ್ನು ಭಕ್ತಿಯಿಂದ ಸ್ತುತಿಸಲು, ಮಂತ್ರಗಳನ್ನು ಪಠಿಸುತ್ತಿರುವಂತೆ ಗಂಗೆ ಮೆಟ್ಟಿಲುಗಳ ಮೇಲೆ ಹರಿದು ಬಂದಳು! ನೆರೆದಿದ್ದ ಜನವೆಲ್ಲ ಸತ್ಯಬೋಧತೀರ್ಥರ ಪಾದಾರವಿಂದಕ್ಕೆ "ಗೋವಿಂದಾ... ಗೋವಿಂದ ಶ್ರೀರಾಮ ಜಯರಾಮ ಜಯ ಜಯ ರಾಮ; ಶ್ರೀಗಳವರಿಗೆ ಜಯವಾಗಲಿ" ಎಂದು ಮುಗಿಲು ಮುಟ್ಟುವ ಜೈಜೈಕಾರ ಮಾಡಿದರು. ಈ ಸುದ್ದಿ ದಿವಾನ ಖಂಡೇರಾಯನಿಂದ ನವಾಬನಿಗೆ ಗೊತ್ತಾಗಿ ಆತ ಶ್ರೀಗಳವರ ದರ್ಶನಕ್ಕೆ ಓಡಿ ಬಂದು ಶ್ರೀಗಳವರಿಗೆ ವಂದಿಸಿ ಅವರ ಅಪಾರ ಮಹಿಮೆಯನ್ನು ಮನಃಪೂರ್ವಕವಾಗಿ ಕೊಂಡಾಡಿದನಲ್ಲದೆ ಶ್ರೀಗಳವರು ಸ್ನಾನ ಮಾಡುತ್ತಿದ್ದ ಹಾಗೂ ಗಂಗೆಯನ್ನು ಪ್ರತ್ಯಕ್ಷೀಕರಿಸಿದ ಬಾವಿಯನ್ನು ಹಾಗೂ ಅದರ ಸುತ್ತಲ್ಲಿದ್ದ ತೋಟವನ್ನು ಶ್ರೀಗಳವರ ಮಠಕ್ಕೆ ದಾನ ಮಾಡಿದ. ನವಾಬನ ಆದರಾತಿಥ್ಯದಿಂದ ಸುಪ್ರೀತರಾದ ಶ್ರೀಗಳವರು ಆತನಿಗೂ, ಖಂಡೇರಾಯನಿಗೂ ಫಲಮಂತ್ರಾಕ್ಷತೆ ಕೊಟ್ಟು ಆಶೀರ್ವದಿಸಿದರು. ಈ ಪಾವನ ಬಾವಿಯೇ ಮುಂದೆ 'ವಿಷ್ಣುತೀರ್ಥ'ವೆಂದು ಪ್ರಸಿದ್ಧಿ ಪಡೆದು ವಿಶೇಷವಾಗಿ ಮಾಧ್ವರಿಗೆ ಪರಮ ಪುಣ್ಯ ತೀರ್ಥ ವೆನಿಸಿತು.

***** ***** *****

ಶುಭಾಶಯಗಳು : ದೂರವಾಣಿ : 2527512



॥ ಶ್ರೀ ಮಾರುತಿ ಜ್ಯೋತಿರ್ಮಂದಿರಮ್ ॥
ಎನ್. ರಾಜಗೋಪಾಲ ಬಲ್ಲಾಳ್, ಜ್ಯೋತಿಷ್ಯ ವಿದ್ವಾನ್
ಅಂಬಲಪಾಡಿ, ಉಡುಪಿ - 3,
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-30ರ ವರೆಗೆ
ಆಫೀಸ್ : ಆನಂದತೀರ್ಥ ಸಂಕೀರ್ಣ, ರಥಬೀದಿ, ಉಡುಪಿ - 1
ಸಮಯ : ಸಾಯ. 4-30ರಿಂದ 8-30ರ ವರೆಗೆ.

*With Best Compliments from :*
**VIJAYA METALS**
Behind Shiroor Mutt, Badagupet, Udupi - 1
**Phone : H.O. 2522543 Branch : 2523643 Resi. : 2524001**
**VIJAYA GOLD JEWLLERS**
Vyasaraja Mutt Building, Car Street, Udupi - 1 **Phone : 2522543**

# ಶ್ರೀ ವಿಷ್ಣು ಸಹಸ್ರನಾಮ ಚಿಂತನೆ - ಯಮ

**ಗುರುಮೂರ್ತಿ ಪೆಡಂಕೂರು**

**ಯ**ಮ ಎಂದರೆ ತತ್‌ಕ್ಷಣ ಕಣ್ ಮುಂದೆ ನಿಲ್ಲುವುದು ಮೃತ್ಯು ದೇವತೆಯಾದ ಯಮನೇ. ಸ್ತೋತ್ರ ರೂಪದ ಯಮನಿಗೆ ಆಕಾರ ನೀಡಿ ಚಿತ್ರಿಸಿದ ಅದ್ಭುತ ಕಲಾವಿದ ರಾಜಾ ರವಿವರ್ಮನ ದಯೆಯಿಂದ ಬೃಹತ್ ಕೋಣದ ಮೇಲೆ ಕೂತಿರುವ ಭಯಾನಕ ರೂಪಿನ ಯಮನೇ ಎಲ್ಲರಿಗೂ ಕಾಣುತ್ತಾನೆ. ಆದರೆ ಯಮ ಎಂದರೆ ನಿಯಂತ್ರಣ. ನಮ್ಮ ಕರಣಗಳ ಮೇಲೆ ನಿಗ್ರಹವೇ ಯಮ. ಹಿಂದೂಗಳು ಯಮನನ್ನು ನೆನಪಿಸಿಕೊಳ್ಳಲೂ ಭಯಪಡುತ್ತಾರೆ. ಆದರೆ ಪ್ರತಿಯೊಬ್ಬರೂ ಸಾವು ನಿಶ್ಚಿತವೆಂದೂ ಅರಿತವರಿರುತ್ತಾರೆ. 'ಜಾತಸ್ಯ ಮರಣಂ ಧ್ರುವಂ' ಎಂಬ ವೇದ ವಾಕ್ಯವನ್ನು ಮರೆತವರಿಲ್ಲ.

ಪರಮಾತ್ಮನು ಮನುಷ್ಯನಿಗೆ ಹಾಕಿರುವ ಅತಿದೊಡ್ಡ ಅಂಕುಶವೆಂದರೆ ಮರಣಭಯ. ಮರಣವು ಯಾವಾಗ ಯಾರಿಗೆ ಎಲ್ಲಿ ಯಾವ ರೀತಿಯಲ್ಲಿ ಪ್ರತ್ಯಕ್ಷವಾಗುವುದೋ ಎಂಬುದನ್ನು ತಿಳಿಯದೆ ಕಳವಳ ಪಡುವವರೇ ಸಾಕಷ್ಟು ಜನ. ಮನುಷ್ಯನ ಜೀವನದ ಅವಧಿಯ ಕಲ್ಪನೆ ಎಲ್ಲರಿಗು, ಎಲ್ಲ ದೇಶ ಮತ್ತು ಎಲ್ಲ ಮತದವರಿಗೂ ಸ್ಪಷ್ಟವಾಗಿ ಇದೆ. ಏನು ನಿಂತರೂ ನಿಲ್ಲುತ್ತದೆ. ಆದರೆ ಕಾಲಗಣನೆ ಮಾತ್ರ ನಿಲ್ಲುವುದಿಲ್ಲ. ಹುಟ್ಟುತ್ತೇವೆ, ಬೆಳೆಯುತ್ತೇವೆ, ಶಾಲೆಗೆ ಹೋಗುತ್ತೇವೆ, ವಯಸ್ಕರಾಗುತ್ತೇವೆ, ಮದುವೆ, ಮಕ್ಕಳು, ಬದುಕಿನ ಸಫಲತೆ ಅದರೊಂದಿಗೆ ಮುಪ್ಪು ಆವರಿಸುತ್ತದೆ.

ಗೃಹಸ್ಥಾಶ್ರಮದ ನಂತರ ವಾರ್ಧಕ್ಯ, ಅದಾದನಂತರ ಸನ್ಯಾಸಾಶ್ರಮಗಳ ಅರಿವು ಪಂಡಿತ ಪಾಮರರೆಲ್ಲರಿಗೂ ಇದೆ. ಅನಂತರ ಮರಣದ ಅಥವಾ ಎಂದಾದರೊಂದು ದಿನ ಸಾಯಬೇಕಾದ, ದೇಹತ್ಯಾಗ ಮಾಡಬೇಕಾದ ಸಂದರ್ಭದ ಬಗ್ಗೆ ಯಾರೂ ಯಾರಿಗೂ ಹೇಳಬೇಕಾಗಿಲ್ಲ. ಆದ್ದರಿಂದಲೇ **"ವಿನಾ ದೈನ್ಯೇನ ಜೀವನಂ, ಅನಾಯಾಸೇನ ಮರಣಂ"** ಎಂದು ಎಲ್ಲರೂ ಪ್ರಾರ್ಥಿಸುತ್ತಾರೆ. ಶರಣರನ್ನು ಮರಣದಲ್ಲಿ ಕಾಣು ಎಂಬ ಮಾತೂ ಇದೆ. ಆದರೆ ನಾವೆಲ್ಲಾ ಸಾವಿನಾಚೆ ಸುಖ ಸಂತೋಷದ ಅನುಭವದ ಅವಸ್ಥೆಗೆ ತಲುಪುವ ಪ್ರಯತ್ನವನ್ನು ಮಾಡುವುದೇ ಇಲ್ಲ. ಎಲ್ಲ ಭಾರತೀಯ ತತ್ವ ಶಾಸ್ತ್ರಗಳು ಪ್ರತಿಪಾದಿಸುವ ಅಷ್ಟಾಂಗ ಯೋಗದಲ್ಲಿ ಪ್ರಥಮ ಪಾದವೇ ಯಮ. ಅನಂತರ ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಕೊನೆಗೆ ಸಮಾಧಿ ಸ್ಥಿತಿ ಎನ್ನಲಾಗಿದೆ. ಸಾವನ್ನು ಮೀರಿ ನಿಲ್ಲುವ, ಚಿರಂಜೀವಿಯಾಗುವ ಮತ್ತು ಇಚ್ಛಾ ಮರಣಿಯಾಗುವ ಸ್ಥಿತಿಯೇ ಸಮಾಧಿ ಸ್ಥಿತಿ. ಜೀವಾತ್ಮ ಪರಮಾತ್ಮರು ಒಂದಾಗುವ ಬ್ರಹ್ಮಾನಂದದ ಅನುಭವವೇ ಅದು ಎಂದು ತತ್ವ ಜ್ಞಾನಿಗಳು ವರ್ಣಿಸಿದ್ದಾರೆ. ಯೋಗಿಗಳು, ಅನುಭಾವಿಗಳು ಮತ್ತು ಸಂತರು ಆ ಸ್ಥಿತಿಯಿಂದ ಲೋಕ ಕಲ್ಯಾಣಕ್ಕಾಗಿ ತಪಿಸಿದ್ದಾರೆ.

ಬದುಕಿನ ಈ ಸೂತ್ರವನ್ನು ಅರ್ಥಮಾಡಿಕೊಂಡವರಿಗೆ ದುಃಖವಿಲ್ಲ. ಈ ದೇಹ ಮತ್ತು ಆತ್ಮದ ರೂಪ ಪ್ರತಿರೂಪಗಳನ್ನು ತಿಳಿದುಕೊಂಡು ಸ್ವಸ್ವರೂಪ ದರ್ಶನ ಮಾಡಿಕೊಂಡವನೇ ಭಾಗ್ಯವಂತ. ಅವನು ಮೃತ್ಯುವನ್ನು ಜಯಿಸಿದ ಮೃತ್ಯುಂಜಯ - ಮಾರ್ಕಂಡೇಯನಾಗುತ್ತಾನೆ.

ಆದ್ದರಿಂದ ಯಮನೆಂದ ಕೂಡಲೇ ಅಂಜಬೇಕಾಗಿಲ್ಲ. ಅವನು ಹಾಗೆ ನೋಡಿದರೆ ಮೃತ್ಯುದೇವತೆ ಅಲ್ಲ. ಮೃತ್ಯುವನ್ನು ಜಯಿಸಲು ದಾರಿತೋರುವ ಪ್ರಥಮಪಾದ ಮತ್ತು ಗುರುವೆನಿಸುವವನು. ಅವನು ಧರ್ಮ ಪರಿಪಾಲಕ. ಅವನ ಮಗನಾದ ಯುಧಿಷ್ಠಿರನನ್ನು ಧರ್ಮರಾಯನೆಂದು ಕರೆಯಲಾಗಿದೆ. ಎಂತಹ ಪರಿಸ್ಥಿತಿಯಲ್ಲೂ ಅಧರ್ಮದ ದಾರಿ ಹಿಡಿಯದ ಅಪರೂಪದ ವ್ಯಕ್ತಿ ಯುಧಿಷ್ಠಿರ. ಕೃಷ್ಣಾವತಾರ ಧರಿಸಿದ ಶ್ರೀ ಮಹಾವಿಷ್ಣುವು ಕೂಡಾ ಧರ್ಮರಾಯನಿಗೆ ನತಮಸ್ತಕನಾಗುತ್ತಿದ್ದನು. ಆದ್ದರಿಂದ ಯಮ ಎಂದರೆ ಆನಂದದ, ಪರಮಾನಂದದ, ಮುಕ್ತಿ ಅನುಭವಕ್ಕೆ ಪ್ರಥಮ ಮಂತ್ರ. ಯಮನಿಂದಲೇ ಶಕ್ತಿ ಮತ್ತು ಯಮನಿಂದಲೇ ಮುಕ್ತಿ ಅಂತೆಯೇ ಶ್ರೀಹರಿಯನ್ನು ಯಮನೆಂದು ಯತಿಗಳು ಸ್ತುತಿಸಿದ್ದಾರೆ.

**ಹಗರಿಬೊಮ್ಮನಹಳ್ಳಿ**

**- 58 ವರ್ಷಗಳ ಅವಿರತ ಸೇವೆ -**

**ಹಾರ್ದಿಕ ಶುಭಾಶಯಗಳು** **ಫೋನ್ : 2520431**

*ಮದುವೆ ಸೀರೆಗಳ ಪ್ರತ್ಯೇಕ ವಿಭಾಗ ... ಆಧುನಿಕ ಶೈಲಿಯ ರೆಡಿಮೇಡ್ ಡ್ರೆಸ್‌ಗಳು...*
*ಭರ್‌ಪೂರ್ ಸಂಗ್ರಹ, ಮದುವೆ ಸೀರೆ, ಸೂಟಿಂಗ್ಸ್ ಹಾಗೂ ಶರ್ಟಿಂಗ್ಸ್‌ಗಳಿಗೆ ನಗರದ*
*ಹೆಸರಾಂತ ಜನಪ್ರಿಯ ಮಳಿಗೆ*

**ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್**

**ತೆಂಕಪೇಟೆ, ಉಡುಪಿ – 576 101**

**ಶುಭಾಶಯಗಳು :** ✆: 2522266 (O) 2522244 (R)
Mobile : 9844292866



**ಲಕ್ಷ್ಮೀ ಇಲೆಕ್ಟ್ರಿಕಲ್ಸ್**

**ಎಸ್. ಎಂ. ಎಸ್. ಪಿ. ಕಾಂಪ್ಲೆಕ್ಸ್, ಉಡುಪಿ – 576 101.**

**ಪ್ರೊ. ರಾಜಗೋಪಾಲ ಎಸ್.**



# ಶ್ರೀಕೃಷ್ಣನ ಸಂದೇಶಕ್ಕೆ ಭಾರತದ ಸಂವಾದ

ಸಗ್ರಿ ರಾಘವೇಂದ್ರ ಉಪಾಧ್ಯಾಯ

ಮಹಾಭಾರತಾನುಸಂಧಾನ

'ಜಲಕ್ರೀಡಾಸಮಾಸಕ್ತಗೋಪೀವಸ್ತ್ರಾಪಹಾರಕ' - ಎಂದು ಸ್ತುತನಾಗಿರುವ ಶ್ರೀಕೃಷ್ಣ ಕಾತ್ಯಾಯನೀ ವ್ರತನಿಷ್ಠರಾಗಿದ್ದ ಗೋಪಬಾಲಿಕೆಯರು ಯಮುನಾ ನದಿಯಲ್ಲಿ ವಿವಸ್ತ್ರರಾಗಿ ಮೀಯಲು, ಅವರ ಉಡುಪನ್ನು ಅಪಹರಿಸಿ, ಅವರಿಗೆ ಹಾಗೂ ಅವರು ಪ್ರತಿನಿಧಿಸುವ ಸಕಲ ಸಾಧಕರಿಗೆ ನೀಡಿರುವ ಸಂದೇಶ ಭಾಗವತದ ಈ ಶ್ಲೋಕದಲ್ಲಿ ಅಡಗಿದೆ.

**ಯೂಯಂ ವಿವಸ್ತ್ರಾ ಯದಪೋ ಧೃತವ್ರತಾಃ ವ್ಯಾಗಾಹತೈತದ್ ತದು ದೇವಹೇಲನಮ್।**

**ಬಧ್ವಾಽಂಜಲಿಂ ಮೂರ್ಧ್ನ್ಯಪನುತ್ತಯೇಽಂಹಸಃ ಕೃತ್ವಾ ನಮೋ ವೋ ವಸನಂ ಪ್ರಗೃಹ್ಯತಾಮ್॥**

(ಭಾಗ. 10-20-20)

ಜಗದ್ಗುರು ಶ್ರೀಕೃಷ್ಣ ಈ ಶ್ಲೋಕದಲ್ಲಿ ಸಾಧಕರಿಗೆ ಮೂರು ಅಂಶಗಳ ಬಗ್ಗೆ ಎಚ್ಚರಿಕೆ ನೀಡುವನು.

1. ವಿವಸ್ತ್ರರಾಗಿ ಜಲದ ಸಂಪರ್ಕಕ್ಕೊಳಗಾದಲ್ಲಿ ಜಲದ ಅಭಿಮಾನಿಗಳನ್ನು ಕಡೆಗಣಿಸಿದಂತಾಗುವುದು. ಆದುದರಿಂದ ಸ್ನಾನಮಾಡುವಾಗ ಯಾರೂ ವಿವಸ್ತ್ರರಾಗಿ ಇರಬಾರದು. ವಿಶೇಷವಾಗಿ ವ್ರತಗಳಲ್ಲಿ ತೊಡಗಿದವರು ಇಂತಹ ಅಪರಾಧಗಳನ್ನು ಎಸಗಲೇಬಾರದು. ಇದರಿಂದಾಗಿ ವ್ರತಕ್ಕೆ ಹಾನಿ ಉಂಟಾಗುವುದು.

2) ಯಾವುದೇ ಅಪರಾಧದ ಪರಿಹಾರಕ್ಕೆ ಮುಖ್ಯ ಪ್ರಾಯಶ್ಚಿತ್ತ ಎಂದರೆ ಎರಡು ಕೈಗಳನ್ನೂ ಜೋಡಿಸಿ, ನೆತ್ತಿಯ ಮೇಲೆ ಹಿಡಿದು ಭಕ್ತಿಯಿಂದ ಭಗವಂತನಿಗೆ ನಮಸ್ಕರಿಸುವುದು.

3) ಅಂಜಲಿಬಂಧ ನಡೆಸಿ ನಮಸ್ಕರಿಸಬೇಕೇ ಹೊರತು ಎಂದೂ ಒಂದು ಹಸ್ತದಿಂದ ನಮಸ್ಕರಿಸಬಾರದು.

ನಮ್ಮಲ್ಲಿಯ ಕಾಮಭಾವನೆಯ ದೌರ್ಬಲ್ಯದ ಕನ್ನಡಕವನ್ನು ಸಿಕ್ಕಿಸಿಕೊಂಡು ಕೃಷ್ಣನ ಈ ಮಾತನ್ನು ಕಾಣುವಾಗ ಶ್ರೀಕೃಷ್ಣ ಆ ಬಾಲಿಕೆಯರ ಬತ್ತಲೆ ದರ್ಶನವನ್ನು ಪಡೆಯುವುದಕ್ಕಾಗಿ ಹಾಗೆ ಹೇಳಿದನೆಂದು ಕಂಡರೆ ಆಶ್ಚರ್ಯವಿಲ್ಲ.

ಆದರೆ 'ವಿಶ್ವತಶ್ಚಕ್ಷು' ಎನಿಸಿರುವ ಕೃಷ್ಣನಿಗೆ ಆ ಬಾಲಿಕೆಯರ ಅಂತಹ ದರ್ಶನ ಪಡೆಯಬೇಕೆಂದರೆ ನಮ್ಮ ಹಾಗೆ ಕಷ್ಟ ಪಡಬೇಕಾದ ಆವಶ್ಯಕತೆಯೇ ಇಲ್ಲ. 'ಸ್ವಾತ್ಮಾರಾಮ'ನಾದ ಅವನಿಗೆ ಆ ಬಗೆಯ ಚಾಪಲ್ಯಕ್ಕೊಳಗಾಗಿ ಕಾಮಸುಖ ಪಡೆಯುವ ಅವಶ್ಯಕತೆಯೂ ಇಲ್ಲ ಎಂದು ವಿವೇಚಿಸಿಕೊಳ್ಳಬೇಕಾದಂತೆ, ಅವನ ಆ ಮಾತಿನ ಒಂದೊಂದು ಅಂಶವೂ ಶಾಸ್ತ್ರೀಯ ಸಂದೇಶದ

ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ



ಹಿನ್ನೆಲೆಯಲ್ಲಿ ಹೊರಬರುವಂತಹದ್ದೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾದದ್ದು.

**ಮಹಾಭಾರತದ ಸಂವಾದ :**

ವಿವಸ್ತ್ರರಾಗಿ ಸ್ನಾನ ಮಾಡಬಾರದೆಂಬುದು ಶಾಸ್ತ್ರದಲ್ಲಿ ಪ್ರಸಿದ್ಧವಾದ ಪ್ರಮೇಯ. ಇದಕ್ಕೆ ಮಹಾಭಾರತದ ಸಂವಾದವೂ ಇದೆ.

ಅರ್ಜುನ ಅಭಿಮನ್ಯುವಿನ ಹತ್ಯೆಗೆ ಕಾರಣನಾದ ಜಯದ್ರಥನನ್ನು ಸೂರ್ಯ ಮುಳುಗುವುದರೊಳಗೆ ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿ, ಆ ಪ್ರತಿಜ್ಞೆಯನ್ನು ಈಡೇರಿಸಿಲ್ಲ ಎಂದಲ್ಲಿ ಶಾಸ್ತ್ರ ನಿಷಿದ್ಧ ಕರ್ಮಗಳನ್ನೆಸಗಿದವರಿಗೆ ದೊರಕಬಲ್ಲ ದುರ್ಗತಿ ತನಗೆ ದೊರಕಲೆಂದು ಶಪಥ ಮಾಡುವಾಗ, ಶಾಸ್ತ್ರ ನಿಷಿದ್ಧ ಕರ್ಮಗಳಲ್ಲಿ ಒಂದಾಗಿ ವಿವಸ್ತ್ರರಾಗಿ ಸ್ನಾನಮಾಡುವುದನ್ನೂ ಉಲ್ಲೇಖಿಸಿರುವನು.

**ನಗ್ನಸ್ಯ ಸ್ನಾಯಮಾನಸ್ಯ ಯಾ ಚ ... ಗತಿ।**

**ತಾಂ ಗಚ್ಛೇಯಂ ಗತಿಂ ಘೋರಾಂ ನ ಚೇದ್ಧನ್ಯಾಂ ಜಯದ್ರಥಮ್ ॥**

ಮ. ಭಾ. ದ್ರೋಣ 73-32

ಜಯದ್ರಥನನ್ನು ಕೊಲ್ಲದಿದ್ದಲ್ಲಿ ನಗ್ನನಾಗಿ ಮೀಯುವವನಿಗೆ ದೊರಕಬಲ್ಲ ಭಯಂಕರ ದುರ್ಗತಿಯನ್ನು ಹೊಂದುವೆನು.

*With Best Compliments From:*

Ph.: 2520718
2526718
Fax : 0820-2525628

**GENERAL CRAFTERS REFRIGERATION PVT. LTD.**

**Car street, UDUPI - 576 101**

*Bottle Coolers, Combination Coolers*
*Ice Candy Plants, Display Cabinets*
*Ice Cream Plants, Lolly Tanks*
*Kitchen Equipments etc.*

*Deep Freezers, Water Coolers*
*Milk Coolers, Vertical Freezers*
*Blast Freezers, Pepsi / Cream Hardner.*

ಶುಭಾಶಯಗಳು :

**Ph. : 2521312**



New Novelty JEWELLERS



Badagupet, Udupi - 576 101

**Prop. : G. Narayana Acharya**

ಇದರಿಂದ ಸ್ಪಷ್ಟವಾಗಬಲ್ಲದು ನಗ್ನರಾಗಿ ಮೀಯುವುದು ಶಾಸ್ತ್ರ ದೃಷ್ಟಿಯಿಂದ ಎಷ್ಟು ದೊಡ್ಡ ಅಪರಾಧ ಎಂಬುದಾಗಿ.

ಅಪರಾಧಗಳ ಪರಿಹಾರಕ್ಕೆ ಬೇರೆ ಬೇರೆ ಪ್ರಾಯಶ್ಚಿತ್ತಗಳನ್ನು ಹೇಳಲಾಗಿದೆ. ಆದರೆ ಪಶ್ಚಾತ್ತಾಪ ಪೂರ್ವಕವಾಗಿ ಭಗವಂತನಿಗೆ ನಮಸ್ಕರಿಸುವುದು ದೊಡ್ಡ ಪ್ರಾಯಶ್ಚಿತ್ತ.

ಶರಪಂಜರದಲ್ಲಿ ಪವಡಿಸಿರುವ ಭೀಷ್ಮರು ಹೀಗೆ ಉದ್ಗರಿಸಿರುವರು -

**ಅತಸೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್ ।**

**ಯೇ ನಮಸ್ಯಂತಿ ಗೋವಿಂದಂ ನ ತೇಷಾಂ ವಿದ್ಯತೇ ಭಯಮ್ ॥**

ಮ. ಭಾ. ಶಾಂತಿ 47-91

ಅಗಸೆ ಪುಷ್ಪದಂತೆ ಬೆಳ್ಳಗಾಗಿರುವ, ಪಟ್ಟೆ ಪೀತಾಂಬರ ಉಟ್ಟ ಗೋವಿಂದನನ್ನು ಯಾರು ನಮಸ್ಕರಿಸುವರೋ ಅವರಿಗೆ ಯಾವುದೇ ಭಯವಿಲ್ಲ.

ಎಂತಹ ಅಪರಾಧದ ಪಾಪದ ಭಯವೂ ಗೋವಿಂದನ ನಮಸ್ಕಾರದಿಂದ ಪರಿಹೃತವಾಗಬಲ್ಲವೆಂದು ಇದರಿಂದ ಸಿದ್ಧವಾಗುವುದು.

'ಬದ್ಧ್ವಾಽಂಜಲಿಂ.....' ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸಲು ಶ್ರೀಕೃಷ್ಣನು ಗೋಪಬಾಲಕೆಯರಿಗೆ ತಿಳಿಸುವನು. ಪ್ರಾಯಶಃ ಆ ಬಾಲಿಕೆಯರು ಒಂದು ಹಸ್ತದಿಂದ ತಮ್ಮ ಗುಹ್ಯಾಂಗವನ್ನು ಮುಚ್ಚಿಕೊಂಡು ಮತ್ತೊಂದು ಕೈಯಿಂದಷ್ಟೇ ನಮಸ್ಕರಿಸಲು ತೊಡಗುತ್ತಿರುವಾಗ ಶ್ರೀಕೃಷ್ಣ ಹೀಗೆ ಎಚ್ಚರಿಸಿರಬಹುದು. ಯಾಕೆ ಹೀಗೆ ಎಚ್ಚರಿಸಿದ? ಒಂದು ಕೈಯಿಂದ ಮರೆಮಾಚಿದ್ದನ್ನು ಕಾಣುವ ಕೆಟ್ಟ ಕುತೂಹಲದಿಂದ ಎಂದು ನಮ್ಮ ಕಾಮಮಯ ಮನಸ್ಸು ತೀರ್ಮಾನಿಸಬಹುದು. ಆದರೆ ನಿಜವಾಗಿ ಒಂದು ಹಸ್ತದಿಂದ ನಡೆಸುವ ಪ್ರಣಾಮ ಬಹುಪುಣ್ಯಾಪಹಾರಕವಾದ ಅಪರಾಧ. ಮನುಸ್ಮೃತಿ (2-8) ಈ ಬಗ್ಗೆ ಹೀಗೆ ಎಚ್ಚರಿಸಿದೆ.

**ಜನ್ಮಪ್ರಭೃತಿ ಯತ್ ಕಿಂಚಿಚ್ಚೇತಸಾ ಧರ್ಮ ಮಾಚರೇತ್ ।**

**ತತ್ ಸರ್ವಂ ವಿಫಲಂ ಜ್ಞೇಯಮೇಕಹಸ್ತಾಭಿವಾದನಾತ್ ॥**

ಶುಭಾಶಯಗಳು : ದೂರವಾಣಿ : 2528218

ಅಪ್ಪಟ ಚಿನ್ನಾಭರಣದ ವಿಫುಲ ಸಂಗ್ರಹ ಸಂದರ್ಶಿಸಿರಿ :



ಐರೋಡಿ ಜ್ಯುವೆಲ್ಲರ್ಸ್

ಶ್ರೀ ಪೇಜಾವರ ಮಠದ ಬಳಿ,
ರಥಬೀದಿ, ಉಡುಪಿ

ವ್ಯವಹಾರದ ಸಮಯ : 9-30 ರಿಂದ 1-30
3-30 ರಿಂದ 7-30

ಮೆ॥ ಐರೋಡಿ ರಾಧಕೃಷ್ಣ ಪೈ ಇವರ ಸಮೂಹ ಸಂಸ್ಥೆ.



ಒಂದು ಹಸ್ತದಿಂದ ನಮಸ್ಕಾರ ಮಾಡಿದರೆ ಪುಣ್ಯ ಇಲ್ಲ, ಅಷ್ಟೇ ಅಲ್ಲ ಹುಟ್ಟಿದಾರಭ್ಯ ಮನಃಪೂರ್ವಕವಾಗಿ ನಡೆಸಿದ ಧರ್ಮವೆಲ್ಲ ನಿಷ್ಫಲವೆನಿಸುವುದು.

ಹೀಗೆ ಶಾಸ್ತ್ರದಲ್ಲಿ ತುಂಬ ದಾರ್ಢ್ಯಪೂರ್ವಕವಾಗಿ ನಿಷಿದ್ಧವಾದ ಈ ಕ್ರಮವನ್ನು ಅಲ್ಲಗಳೆದು ಆ ಬಗ್ಗೆ ಬೆಳಕುಚೆಲ್ಲುವುದಕ್ಕಾಗಿಯಷ್ಟೇ ಶ್ರೀಕೃಷ್ಣ ಸ್ಪಷ್ಟವಾಗಿ ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸುವಂತೆ ತಿಳಿಸಿರುವನು.

## ಬಾಲಿಕೆಯರಿಗೆ ಅರ್ಥವಾಯಿತು

ಶ್ರೀಕೃಷ್ಣನ ಮಾತಿನ ಆಂತರ್ಯ ಆ ಗೋಪಬಾಲಿಕೆಯರಿಗೆ ಅರ್ಥವಾಯಿತು '......ಮತ್ವಾ ವಿವಸ್ತ್ರಾಪ್ಲವನಂ ವ್ರತಚ್ಯುತಿಮ್ । ತತ್ಪೂರ್ತಿಕಾಮಾಸ್ತದಶೇಷಕರ್ಮಣಾಂ ಸಾಕ್ಷಾತ್ಕೃತಂ ನೇಮುರವದ್ಯಮುಜ್ಝಿತುಮ್ ॥ (ಭಾಗ 10-20-21) ತಾವು ವಿವಸ್ತ್ರರಾಗಿ ಸ್ನಾನ ನಡೆಸಿದ್ದರಿಂದಾಗಿ ತಮ್ಮ ಕಾತ್ಯಾಯನೀ ವ್ರತಕ್ಕೆ ಧಕ್ಕೆ ಬಂದಂತಾಯಿತೆಂಬುದನ್ನೂ ಅದರ ಪರಿಹಾರಕ್ಕೆ ಶ್ರೀಕೃಷ್ಣನಿಗೆ ಎರಡು ಕೈ ಜೋಡಿಸಿ ನಮಸ್ಕರಿಸಬೇಕೆಂಬುದನ್ನೂ ಮನವರಿಕೆ ಮಾಡಿಕೊಂಡು ಹಾಗೆಯೇ ನಡೆದುಕೊಂಡರು.

ಹೀಗಿರುವಾಗ ನಾವು ಶ್ರೀಕೃಷ್ಣನ ಈ ನಡತೆಯ ಬಗ್ಗೆ ಕೆಟ್ಟ ಭಾವನೆಯನ್ನು ತಾಳುವುದು ಎಷ್ಟೊಂದು ಅನುಚಿತ!!

ಶುಭಾಶಯಗಳು : ದೂರವಾಣಿ : 0820-2526755

ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ

ರಥಬೀದಿ, ಪೇಜಾವರ ಮಠದ ಬಳಿ
ಉಡುಪಿ – 576 101

ಧಾರ್ಮಿಕ ಪುಸ್ತಕಗಳ ಪ್ರಕಾಶಕರು ಮತ್ತು ವಿತರಕರು

ಶುಭಾಶಯಗಳು : ಫೋನ್ : 2521951

ಗೃಹೋಪಯೋಗಿ ಉಪಕರಣಗಳ ಮಳಿಗೆ

ಹೈ ಟೆಕ್

ಹೋಮ್ ವರ್ಲ್ಡ್

ಕನಕದಾಸ ರಸ್ತೆ, ಉಡುಪಿ – 576 101

ನೀತಿ ಕಥೆ

# ಅನ್ನದ ಪ್ರಭಾವ

ಭೀಷ್ಮ ಪಿತಾಮಹರು ಶರಶಯ್ಯೆಯಲ್ಲೊರಗಿದ್ದರು. ಯುಧಿಷ್ಠಿರ ಅವರಿಂದ ಧರ್ಮೋಪದೇಶ ಪಡೆಯುತ್ತಿದ್ದ. ಧರ್ಮದ ಬಗ್ಗೆ ಗಂಭೀರ ಹಾಗೂ ಲಾಭದಾಯಕ ಚರ್ಚೆ ನಡೆಯುತ್ತಿತ್ತು. ಆಗಲೇ ದ್ರೌಪದಿ ಅವರೊಡನೆ... “ಮಾನ್ಯರೇ.... ನನ್ನದೂ ಒಂದು ಪ್ರಶ್ನೆಯಿದೆ. ನೀವು ಅನುಮತಿಯಿತ್ತರೆ ಕೇಳುವೆ” ಎಂದಳು.

“ಕೇಳು ಮಗಳೇ ನಿನ್ನ ಪ್ರಶ್ನೆಗೂ ಉತ್ತರ ಕೊಡುವೆ” - ಎಂದರು ಭೀಷ್ಮರು.

“ಮಾನ್ಯರೇ, ಪ್ರಶ್ನೆ ಕೇಳುವ ಮೊದಲೇ ಕ್ಷಮೆಯಾಚಿಸುವೆ. ನನ್ನ ಪ್ರಶ್ನೆ ತುಸು ಕಠೋರವಾದುದು. ನಿಮ್ಮ ಮನಸ್ಸಿಗೆ ನೋವಾಗಬಹುದು. ನೀವು ಸಿಟ್ಟಾಗಬಾರದು”.

“ಇಲ್ಲ ಮಗಳೇ... ನಾನೇನೂ ಸಿಟ್ಟಾಗುವುದಿಲ್ಲ. ನೀನು ಏನು ಬೇಕಾದರೂ ಕೇಳು”

“ಮಾನ್ಯರೇ, ದುರ್ಯೋಧನನ ಸಭೆಯಲ್ಲಿ ದುಃಶಾಸನ ನನ್ನನ್ನು ಬತ್ತಲೆಗೊಳಿಸಲು ಯತ್ನಿಸುತ್ತಿದ್ದಾಗ, ನಾನು ಜೋರಾಗಿ ಅಳುತ್ತಿದ್ದೆ. ನೀವು ಅಲ್ಲೇ ಇದ್ದಿರಿ. ನನಗೆ ಸಹಾಯ ಮಾಡುವಂತೆ ನಿಮ್ಮನ್ನು ಬೇಡಿಕೊಂಡೆ. ನೀವಿಂದು ಜ್ಞಾನದ ಬಗ್ಗೆ ದೊಡ್ಡ ದೊಡ್ಡ ಮಾತು ಹೇಳುತ್ತಿದ್ದೀರಿ. ಆಗ ನಿಮ್ಮ ಜ್ಞಾನ ಎಲ್ಲಿ ಹೋಗಿತ್ತು? ಆ ವೇಳೆ ಅಬಲೆಯೊಬ್ಬಳಿಗೆ ಆಗುತ್ತಿರುವ ಅಪಮಾನವನ್ನು ನೀವು ಅದೆಂತು ಸಹಿಸಿದಿರಿ? ಅವಳ ಮೊರೆಯನ್ನು ಅದೇಕೆ ಆಲಿಸಲಿಲ್ಲ?” ಎಂದಳು ದ್ರೌಪದಿ.

“ನಿನ್ನ ಮಾತು ನಿಜ. ಆ ವೇಳೆ ನಾನು ದುರ್ಯೋಧನನ ಪಾಪ ಭರಿತ ಅನ್ನವನ್ನು ತಿನ್ನುತ್ತಿದ್ದೆ. ಆ ಪಾಪ ನನ್ನ ದೇಹವಿಡೀ ವ್ಯಾಪಿಸಿಕೊಂಡಿತ್ತು. ಅದು ರಕ್ತವಾಗಿ ನನ್ನ ನರನಾಡಿಗಳಲ್ಲಿ ಹರಿಯುತ್ತಿತ್ತು. ಆ ವೇಳೆ ಮನಸ್ಸಿದ್ದರೂ ಧರ್ಮದ ಮಾತು ಹೇಳದಾದೆ. ಈಗ ಅರ್ಜುನನ ಬಾಣಗಳು ಆ ಪಾಪಮಯ ರಕ್ತವನ್ನು ಹೊರ ಹಾಕಿವೆ. ಸಾಕಷ್ಟು ಸಮಯದಿಂದ ನಾನು ಈ ಶರಶಯ್ಯೆಯಲ್ಲಿ ಒರಗಿದ್ದೇನೆ. ಪಾಪಮಯ ಅನ್ನ ನನ್ನ ದೇಹದಿಂದ ಹೊರಟುಹೋಗಿದೆ. ಎಂತಲೇ ಧರ್ಮದ ಉಪದೇಶಕೊಡತೊಡಗಿದ್ದೇನೆ”-ಎಂದರು ಭೀಷ್ಮರು. ಇದು ಅನ್ನದ ಪ್ರಭಾವ. ಅನ್ನ ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಭೀಷ್ಮರಂತಹ ಮಹಾತ್ಮರಿಗೇ ಇಂತಹ ಸ್ಥಿತಿ ಒದಗಿರುವಾಗ ಜನಸಾಮಾನ್ಯರ ಪಾಡೇನು? (ಹಿಂದಿಯಿಂದ)

ಬಿ. ಸುಬ್ರಾಯ ಅಡಿಗ, ನಿವೃತ್ತ ಅಧ್ಯಾಪಕರು, ಸಂಡೂರು, ಬಳ್ಳಾರಿ ಜಿಲ್ಲೆ.

*With Best Compliments from :*



U. KRISHNA SHET
JEWELLERY
Car Street, UDUPI
**Phone : 2522669** Prop. : **G.S. Shet**

# ಅಪಾತ್ರ ಅನುಕಂಪ

ಮ. ಗೋ. ಹೆಗಡೆ

**ಮಾ**ನವೀಯ ಮೌಲ್ಯಗಳಲ್ಲಿ ಶ್ರೇಷ್ಠಾತಿ ಶ್ರೇಷ್ಠ ಮೌಲ್ಯವೆಂದರೆ - ಇತರರೂ ತನ್ನಂತೆ ಬದುಕಬೇಕೆಂಬ ಸಾತ್ವಿಕವಾದ ಬಯಕೆ.

ನೆರೆಯವರಿಗಾಗುವ ನೋವು, ತನ್ನ ನೋವು ಎಂದು, ಮನುಷ್ಯನು ತಿಳಿದುಕೊಳ್ಳುತ್ತಾನೋ ಅಂದು ಈ ಭೂಮಿ ಖಂಡಿತವಾಗಿ ಸ್ವರ್ಗ ವಾಗುವುದು.

ಅನ್ಯರ ದುಃಖದಲ್ಲಿ ಪಾಲ್ಗೊಳ್ಳುವ ಮನುಷ್ಯನ ಆಂತರಿಕ ಇಚ್ಛೆಯನ್ನು 'ಅನುಕಂಪ' ಎನ್ನುತ್ತಾರೆ. ಅನುಕಂಪ ನಾಟಕೀಯ ವರ್ತನೆಯಲ್ಲ. ಅದು ಹಿತೈಷಿಯ ಪ್ರಮುಖ ಲಕ್ಷಣ. ತನಗಿಲ್ಲದಿದ್ದರೂ ಇಲ್ಲ ಅನ್ಯರಿಗೆ ಒಳ್ಳೆಯದಾಗಬೇಕೆಂಬ ಸದಾಶಯವಿದೆಯಲ್ಲಾ ಅದು ಮನುಷ್ಯನಲ್ಲಿಯ ದೇವರ ದರ್ಶನ ಮಾಡಿಸುತ್ತದೆ. ಅವನನ್ನು ಇತರರು - ದೇವರಂತಹ ಮನುಷ್ಯ ಅಥವಾ ಜೀವಂತ ದೇವರು ಎಂದು ಅವನ ಅನುಪಸ್ಥಿತಿಯಲ್ಲೂ ಸ್ಮರಿಸುತ್ತಾರೆ.

ಮಾನವೀಯ ಮೌಲ್ಯವು ಅದನ್ನು ಪಡೆಯುವ ಪಾತ್ರವನ್ನು ಅವಲಂಬಿಸಿರುತ್ತದೆ. 'ಸತ್ಪಾತ್ರರೊಳ್ ದಾನಮಂ' ಎಂದು ಸೋಮೇಶ್ವರ ಕವಿ ನಮ್ಮನ್ನು ಎಚ್ಚರಿಸುತ್ತಾನೆ. ನಾವು ತೋರಿಸುವ ಅನುಕಂಪ ಯೋಗ್ಯಪಾತ್ರ (Right recipient)ವಾಗಿರಬೇಕು ಎಂಬುದನ್ನು ಇಲ್ಲಿ ಗಮನಿಸಬೇಕು.

ಬಾಗಿಲಿಗೆ ಬಂದವನು 'ಭವತೀ ಭಿಕ್ಷಾಂದೇಹಿ' ಎಂದಾಗ, ಅವನನ್ನು ಸರಿಯಾಗಿ ತೂಕ ಮಾಡುವ ಸಾಮರ್ಥ್ಯ ನಮಗಿರಬೇಕು. ನಾವು ನೀಡುವ ಹಣ ಅಥವಾ ಇತರ ದ್ರವ್ಯಗಳನ್ನು ಆ ಜೀವಾತ್ಮ ಸದ್ವಿನಿಯೋಗ ಮಾಡಬಲ್ಲದೇ ಎಂದು ಸುಲಭವಾಗಿ ಹೇಳಲು ಬರುವುದಿಲ್ಲ. ಇಲ್ಲಿ ನಾವು ತೋರಿಸಿದ ಅನುಕಂಪದ ಮೌಲ್ಯಮಾಪನವಾಗುತ್ತದೆ.

ಅಪಾತ್ರದಲ್ಲಿ ನಾವು ದಾನವಿತ್ತರೆ ಖಂಡಿತವಾಗಿ ಸಮಾಜಘಾತಕ ಪ್ರವೃತ್ತಿಗೊಂದಿಷ್ಟು ಅವಕಾಶ ವಿಟ್ಟಂತಾಗುತ್ತದೆ. ಮಾನವ ರೂಪದ ಮೃಗಗಳ ಸಂಖ್ಯೆ ವರ್ಧಿಸುತ್ತದೆ. ಈಗ ಸಮಾಜದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದು ಇದೇ. ಮತದಾರನ ಅಪಾತ್ರ ಅನುಕಂಪ ಸ್ವಾಮಿ ದ್ರೋಹಿ ಹಾಗೂ ದೇಶದ್ರೋಹಿಗಳ ರೂಪದಲ್ಲಿ ಪ್ರತಿನಿಧಿಗಳನ್ನು ಸೃಷ್ಟಿಸುತ್ತದೆ. ಇದು ಪ್ರಜಾಪ್ರಭುತ್ವದ ಘೋರ ದುರಂತ.

ಎಲ್ಲಿಯವರೆಗೆ ಮತದಾರರ ನಿಷ್ಪಕ್ಷಪಾತವಾದ ಒಳಗಣ್ಣು ತೆರೆಯುವುದಿಲ್ಲವೋ ಅಲ್ಲಿಯವರೆಗೆ ಆಯ್ಕೆಯಾದ ಪ್ರತಿನಿಧಿಗಳು ಸಮಾಜದ ಸಮಸ್ಯೆಗಳನ್ನು ಬಗೆಹರಿಸುವುದರ ಬದಲು ಹೊಸ ಹೊಸ ಸಮಸ್ಯೆಗಳನ್ನು ಉಂಟುಮಾಡಿ ತಾವು ಮಾತ್ರ ಐಷಾರಾಮಿನ ಜೀವನವನ್ನು ನಡೆಸುತ್ತ ದೇಶದ ಅಧಃಪತನಕ್ಕೆ ಕಾರಣರಾಗುತ್ತಾರೆ.

ಬಂಕಿಕೊಡ್ಲ – 581 319, ಉತ್ತರಕನ್ನಡ



ಅಪಾತ್ರ ಅನುಕಂಪ ಯಾವ ಯಾವ ಸಂದರ್ಭಗಳಲ್ಲಿ ಸಂಭವಿಸಬಹುದೆಂದು ಸಂಸ್ಕೃತ ಸುಭಾಷಿತವೊಂದು ಹೀಗೆ ಹೇಳುತ್ತದೆ.

**ವೃಥಾ ವೃಷ್ಟಿಃ ಸಮುದ್ರೇಷು, ವೃಥಾ ತೃಪ್ತಸ್ಯ ಭೋಜನಮ್ ।**

**ವೃಥಾ ದಾನಂ ಸಮರ್ಥಸ್ಯ, ವೃಥಾ ದೀಪೋ ದಿವಾಪಿಚ ॥**

ಸಮುದ್ರಕ್ಕೆ ಮಳೆ ಅನವಶ್ಯಕ. ಅದರಂತೆ ಹೊಟ್ಟೆ ತುಂಬಿದವನಿಗೆ ಊಟ ಬಡಿಸುವುದು ವ್ಯರ್ಥ. ಇದ್ದವನಿಗೆ ದಾನ ನೀಡುವುದು ಅಪಾತ್ರ ಅನುಕಂಪ. ಹಗಲಿನಲ್ಲಿ ದೀಪವೂ ಅವುಗಳಂತೆ.

ಅಪಾತ್ರ ಅನುಕಂಪ ಏನೇನೆಲ್ಲಾ ಸೃಷ್ಟಿಸಬಹುದು ಎನ್ನುವುದನ್ನು ಇಂದು ನಡೆಯುತ್ತಿರುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪತ್ತೆಯಾಗುತ್ತದೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳಲ್ಲಿ 'ವಾರ್ಷಿಕ ತಪಾಸಣೆ' ಎಂಬ ಸೋಗಲಾಡಿತನ ನಡೆಯುತ್ತದೆ. ಆ ಸಂದರ್ಭದಲ್ಲಿ ವಿಷಯದ ಗಂಧಗಾಳಿಯಿಲ್ಲದವರು, ವಿಷಯತಜ್ಞ (Subject inspector)ರಾಗಿ ನಟಿಸುತ್ತಾ ಬರುತ್ತಾರೆ. ಆ ಜೀವಾತ್ಮಗಳಿಗೆ ಶ್ರದ್ಧೆಯಿಂದ, ಪ್ರಾಮಾಣಿಕನಾಗಿ ಪಾಠ ಮಾಡುವ ಶಿಕ್ಷಕರನ್ನು ಕಂಡರೆ ಅಷ್ಟಕ್ಕಷ್ಟೇ! ಅದಕ್ಕೆ ವ್ಯತಿರಿಕ್ತವಾಗಿ ವರ್ಷವಿಡೀ ಒಂದಕ್ಷರವನ್ನೂ ಸರಿಯಾಗಿ ಹೇಳಿಕೊಡದವರನ್ನು ಪ್ರೀತ್ಯಾದರಗಳಿಂದ ಕಂಡು ಅವರ ಹೆಸರನ್ನು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗೆ ಶಿಫಾರಸು ಮಾಡುತ್ತಾರೆ. ಕೆಲವರಿಗೆ ಪ್ರಶಸ್ತಿ ಸ್ವೀಕರಿಸಲು ನಾಚಿಕೆಯಾಗುತ್ತದೆ. ಏಕೆಂದರೆ ಅಪರಾಧ ಪ್ರಜ್ಞೆ (Guilt consciousness) ಅವರನ್ನು ತಾತ್ಕಾಲಿಕವಾಗಿಯಾದರೂ ಕಾಡುತ್ತದೆ.

**ಕೇವಲ ಶಿಕ್ಷಣ ಕ್ಷೇತ್ರ ಮಾತ್ರವಲ್ಲ ಅಪಾತ್ರ ಅನುಕಂಪ ಪ್ರತಿಯೊಂದು ಇಲಾಖೆಯಲ್ಲೂ ಸ್ಪಷ್ಟವಾಗಿ ಗೋಚರಿಸುತ್ತದೆ. ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ವೈದ್ಯಕೀಯ ಇಲಾಖೆ ಅನ್ಯಾಯ ತಾಂಡವವಾಡುವ ನ್ಯಾಯ ಖಾತೆ ಹೀಗೆ ಬರೆಯುತ್ತ ಹೋದರೆ ಅದು ಕೊನೆಯಿಲ್ಲದ ಯಾದಿಯಾದೀತು.**

ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲೂ ಅಪಾತ್ರ ಅನುಕಂಪ ನಿರಂತರವಾಗಿ ಸಾಗುತ್ತಲೇ ಇದೆ. ಹಳ್ಳಿಯ ಮಟ್ಟದಲ್ಲಿರುವ ಗ್ರಾಮ ಪಂಚಾಯತ್ ಚುನಾವಣೆಯಿಂದ ಹಿಡಿದು ದೇಶದ ಮಟ್ಟದ ಸಂಸತ್ತಿಗೆ ಚುನಾವಣೆಯವರೆಗೂ ಅಪಾತ್ರ ಅನುಕಂಪ ವ್ಯಾಪಿಸಿಕೊಂಡಿದ್ದು ಈಗ

– ❋ ಹಾರ್ದಿಕ ಶುಭಾಶಯಗಳೊಂದಿಗೆ ❋ –



ಶ್ರೀ ಗಣೇಶ ಜ್ಯುವೆಲ್ಲರ್ಸ್

ತೆಂಕುಪೇಟೆ, ಉಡುಪಿ

ಗ್ರಾಂ : ಗಜಮುಖ ಸ್ಥಾಪನೆ : 1977

ಫೋನ್ : 2523277, 2528077 ಮನೆ : 2555477

ಪ್ರೊ : ಪಡುಬಿದ್ರಿ ನಾರಾಯಣ ವಿ. ರಾವ್



ತೆರೆಯ ಮರೆಯಲ್ಲಿಲ್ಲ, ರಾಜಾರೋಷವಾಗಿದೆ.

'ನಿಧಿ'ಯನ್ನು ಸಂಗ್ರಹಿಸುವುದರಲ್ಲಿಯೇ ಮಗ್ನರಾಗಿರುವ ಪ್ರತಿನಿಧಿಗಳಿಗೆ, ತನ್ನ ಕ್ಷೇತ್ರದ ಜನರ ಅಭ್ಯುದಯವಾಗುವುದು ಬೇಕಾಗಿದೆಯೇ? ಖಂಡಿತಾ ಇಲ್ಲ. ಜನರ ಅನುಕಂಪದಿಂದ ತಾನು ಆಯ್ಕೆಯಾಗಿದ್ದೇನೆ ಎನ್ನುವ ಪ್ರಾಥಮಿಕ ಅರಿವೂ ಇಲ್ಲದ ಪ್ರತಿನಿಧಿಗಳಿಂದ, ನಾವು ಏನನ್ನು ನಿರೀಕ್ಷಿಸಬಹುದು?

ಸ್ವಾರ್ಥಕ್ಕಾಗಿ ಸ್ವಾಮಿದ್ರೋಹಿಯಾಗಲು ಹೇಸದ ದೇಶದ್ರೋಹಿಗಳು, ಜನರ ಅನುಕಂಪಕ್ಕೆ ಸತ್ಪಾತ್ರರೇ?

**ಶೇಕಡಾ 70ರಷ್ಟು ಅನರಕ್ಷರಸ್ಥರಿರುವ ಈ ದೇಶದಲ್ಲಿ 30ರಷ್ಟು ಜನ ಆಡಿದ್ದೇ ಆಟವಾಗಿದೆ.**

**ತಮ್ಮ ಕಿಸೆಯಲ್ಲಿದ್ದ ಐದು ಅಥವಾ ಹತ್ತು ರೂಪಾಯಿಗಳು ಕಾಣೆಯಾದರೆ ಅದು ತನಗಾದ ಅನಿರೀಕ್ಷಿತ ಹಾನಿ ಎಂದು ತಿಳಿದುಕೊಳ್ಳುವಷ್ಟು ಪ್ರಜ್ಞೆಯುಳ್ಳ ಶೇಕಡಾ 70ರಷ್ಟು ಜನ, ಪ್ರತಿದಿನ ತಮ್ಮ ನೂರಾರು ರೂಪಾಯಿಗಳನ್ನು ಕೊಳ್ಳೆ ಹೊಡೆಯುವ, ತಮ್ಮ ಪ್ರತಿನಿಧಿಗಳ ಬಗ್ಗೆ ಅಜಾಗ್ರತರಾಗಿದ್ದುದು, ಈ ದೇಶದ ಮಹಾದುರಂತ.**

ತನ್ನನ್ನು ಕೊಲ್ಲುತ್ತಿರುವವನನ್ನು, ಮೆಟ್ಟುತ್ತಿರುವವನನ್ನು 'ಅಯೋಗ್ಯ'ನೆಂದು ನಿರ್ಣಯಿಸುವ ಸಾಮರ್ಥ್ಯ ಶ್ರೀಸಾಮಾನ್ಯನಿಗಿಲ್ಲ. ಇದರ ದುರುಪಯೋಗತೆಗೆದು ಕೊಳ್ಳುವವರು ಜನರ ಪ್ರತಿನಿಧಿಗಳಾಗುವವರು.

ನ್ಯಾಯಾಲಯದಲ್ಲಿ ಕೊಲೆಗಾರನೊಬ್ಬ ನಿರಪರಾಧಿಯಾಗಿ ಹೊರಬರುವ ಈ ದಿನಗಳಲ್ಲಿ 'ನ್ಯಾಯ'ದ [Justice] ಮೌಲ್ಯ ಎಲ್ಲಿ ಹೋಯಿತು? ನ್ಯಾಯಾಧೀಶನೊಬ್ಬ ನ್ಯಾಯ ನಿರ್ಣಯ [Verdict] ನೀಡುವ ವೈಖರಿಯನ್ನು ವೀಕ್ಷಿಸಿದರೆ - ಪ್ರಜಾಪ್ರಭುತ್ವದ ಸ್ವತಂತ್ರ ಅಂಗವಾದ 'ನ್ಯಾಯಾಂಗ'ದ ಮಟ್ಟ ಎಷ್ಟು ಹದಗೆಟ್ಟಿದೆ ಎಂದು ಅರಿವಾಗದಿರದು.

**"ಆರೋಪಿ ಕುಡಿದ ಅಮಲಿನಲ್ಲಿ ಕೊಲೆ ಮಾಡಿದ್ದಾನೆ. ಕೊಲೆ ಮಾಡುವುದು ಅವನ ಉದ್ದೇಶವಾಗಿರಲಿಲ್ಲ. ಆದುದರಿಂದ ಸದ್ರಿ ಆರೋಪಿಯು ಆರೋಪದಿಂದ ಮುಕ್ತನಾಗಿದ್ದಾನೆ" ಇದು ನ್ಯಾಯಾಲಯದಲ್ಲಿ ನಡೆಯುವ ಅಪಾತ್ರ ಅನುಕಂಪ! ವಧೂ ದಹನದಂತಹ ಅಮಾನುಷ ಕೊಲೆಗೂ ಸಹ ಶಿಕ್ಷೆಯಾಗದ ವಾತಾವರಣ ಈಗ ದೇಶದ ಎಲ್ಲೆಡೆಗೂ ಹರಡಿದೆ.**

42ನೇ ಪುಟಕ್ಕೆ

*With Best Compliments From :* ESTD : 1990



**AMRITH JEWELLERS**

Car Street, UDUPI - 576 101

Phone :
Shop : 2523035, Residence : 2526035

*Koni Ananthapadmanabha Shet*



15ನೇ ಪುಟದಿಂದ

ಬೇಲಿಯೇ ಎದ್ದು ಹೊಲ ಮೇಯುವ ದೃಶ್ಯವನ್ನು ನೋಡುತ್ತ ಮೂಕಪ್ರೇಕ್ಷಕನಾಗಿ ಜೀವಿಸುವ ಮನುಷ್ಯ, ಈಗ ಮನುಷ್ಯನಾಗಿಲ್ಲ.

'ಮನುಷ್ಯ ರೂಪೇಣ ಮೃಗಾಶ್ಚರಂತಿ' ಎನ್ನುವಂತೆ, ನಿರರ್ಥಕವಾದ ಜೀವನ, ಗೊತ್ತು ಗುರಿಗಳಿಲ್ಲದೆ ಸಾಗುತ್ತಲಿದೆ. ಅಮೂಲ್ಯವಾದ ಮನುಷ್ಯ ಜನ್ಮ ಕೆಲವರ ದೃಷ್ಟಿಯಲ್ಲಿ ಮಹತ್ವದ್ದಾಗಿ ಕಾಣಿಸುವುದಿಲ್ಲ. ಇರುವಷ್ಟು ದಿನ ಹೇಗಾದರೂ ಬದುಕಿದರಾಯಿತು - ಎಂಬ ಉದಾಸೀನತೆ ಮನುಷ್ಯರಲ್ಲಿ ಕಾಣುವ ಸಾಮಾನ್ಯ ಲಕ್ಷಣ.

ಕರ್ತವ್ಯವನ್ನು ಅಶ್ರದ್ಧೆಯಿಂದ ಮಾಡುವವರೇ ಹೆಚ್ಚಾಗಿರುವ ಇಂದಿನ ಸಮಾಜದಲ್ಲಿ ಕರ್ತವ್ಯದಕ್ಷತೆಯುಳ್ಳ ವ್ಯಕ್ತಿ ಮೂಲೆಗುಂಪಾಗಿದ್ದಾನೆ. ಅದಕ್ಷತೆಯುಳ್ಳ ಬೇಜವಾಬ್ದಾರಿ ಮನುಷ್ಯರು, ಅಧಿಕಾರದ ಗದ್ದುಗೆಯಲ್ಲಿ ಆಸೀನರಾಗಿರುವವರೆಗೆ, ಸಾಮಾಜಿಕ ಪ್ರಗತಿಯಾಗಲಿ, ದೇಶದ ಅಭಿವೃದ್ಧಿಯಾಗಲೀ ಕೇವಲ ಕನಸಾಗಿಯೇ ಇರುತ್ತದೆ. ಅಥವಾ ಜನರ ಕಣ್ಣಿಗೆ ಮಣ್ಣೆರಚುವ ಬೂಟಾಟಿಕೆ ನಿರಂತರವಾಗಿ ನಡೆಯುತ್ತದೆ.

ಅಪಾತ್ರ ಅನುಕಂಪದಿಂದ ಮನುಷ್ಯ, ತಾನು ಅಧಃಪತನ ಹೊಂದುವುದರೊಂದಿಗೆ, ಮತ್ತೊಬ್ಬನನ್ನು ದುರ್ಮಾರ್ಗಕ್ಕೆ ಸೆಳೆಯುತ್ತಾನೆ. ತಾನು ಕೊಡುವ ವರ (boon) ಅಪಾತ್ರ ಅನುಕಂಪವೆಂದು ಅರಿಯಲಾರದ ಶಿವ, ಭಸ್ಮಾಸುರನಂತಹ ಕೃತಘ್ನ ರಾಕ್ಷಸನಿಂದ ರಕ್ಷಿಸಿಕೊಳ್ಳಲು, ವಿಷ್ಣುವಿನ ಮೊರೆ ಹೋಗಬೇಕಾಯಿತು.

ಕೃತಜ್ಞರಂತೆ ನಟಿಸುವ ಕೃತಘ್ನರು ಖಂಡಿತವಾಗಿ ಅನುಕಂಪಕ್ಕೆ ಅನರ್ಹರು. ಹಾಲೆರೆದರೆ ಹಾಲಾಹಲವಾಗುವ ಪರಿಸ್ಥಿತಿ ಇಂದು ಪ್ರಪಂಚದಲ್ಲೆಡೆಗೂ ಕಂಡು ಬರುವ ನಿತ್ಯ ಸನ್ನಿವೇಶ. ಕೃತಘ್ನರ ಮಧ್ಯೆ ಕೃತಜ್ಞರನ್ನು ಹುಡುಕುವುದು ಅಸಾಧ್ಯವಲ್ಲದಿದ್ದರೂ ಕಷ್ಟ ಸಾಧ್ಯ. ಸಂಶಯವಿಲ್ಲ ಕೃತಜ್ಞರೂ ಇದ್ದಾರೆ. ಓರ್ವ ವ್ಯಕ್ತಿಯ ಮುಖಚರ್ಯೆಯಿಂದಲೇ ಅವನು ಕೃತಜ್ಞನೋ, ಕೃತಘ್ನನೋ ಎಂದು ನಿರ್ಣಯಿಸಬಹುದು.

**'ಮೋರೆಯೇ ಮನದ ಕನ್ನಡಿ' ಎಂಬ ಅರ್ಥವನ್ನು ಪ್ರತಿಫಲಿಸುವ ಒಂದು ಆಂಗ್ಲೋಕ್ತಿ ಇದೆ. "Face is an index of the mind" ಮನಸ್ಸಿನಲ್ಲಿ ನಡೆಯುವ ಲೆಕ್ಕಾಚಾರಗಳೆಲ್ಲ ಒಬ್ಬ ವ್ಯಕ್ತಿಯ ಮುಖದಲ್ಲಿ ಹೊರಸೂಸುತ್ತಿರುತ್ತದೆ. ಇದು ಆ ವ್ಯಕ್ತಿಗೆ ತಿಳಿದಿರುವುದಿಲ್ಲ.**

**ಶುಭಾಶಯಗಳು :** ದೂರವಾಣಿ : 0820-2521476

ಶಾಸ್ತ್ರೀಯವಾಗಿ ತಯಾರಿಸಿದ ಉತ್ತಮ ಆಯುರ್ವೇದ
ಔಷಧಿಗಳಿಗಾಗಿ ಸಂದರ್ಶಿಸಿರಿ.

**ಶ್ರೀನಿಧಿ ಮೆಡಿಕಲ್ಸ್**

ಮಾರುತಿ ವೀಥಿಕಾ, ಉಡುಪಿ.

ಡಾ। ಕೆ. ಕೃಷ್ಣರಾಜ ಭಟ್ಟ

ಇದನ್ನು ಮುಖದ ಅಧ್ಯಯನ ಎನ್ನುತ್ತಾರೆ. ಚಡಪಡಿಸುವ ವ್ಯಕ್ತಿಯೋರ್ವನು, ತಾನು ಬಂದ ಉದ್ದೇಶವನ್ನು ಅಸಂದಿಗ್ಧತೆ (Non- ambiguity)ಯಿಂದ ನಿರೂಪಿಸಲು ಸೋಲುತ್ತಾನೆ. ಅವನಾಡುವ ಮಾತು, ಅವನಿಗೇ ಅರ್ಥವಾಗುವುದಿಲ್ಲ. ಇದು ಕೃತಘ್ನತೆಯ ಮೂಲ ಶಿಕ್ಷಣ.

ಪದೇ ಪದೇ ಕರ್ಚೀಫಿನಿಂದ ಮುಖವನ್ನು ಒರೆಸುತ್ತಿರುವುದು, ಅನವಶ್ಯಕವಾಗಿ ಕೆರೆಯದಿದ್ದರೂ ತಲೆಯನ್ನು ತುರಿಸಿಕೊಳ್ಳುವನು, ಅವೇಳೆಯಲ್ಲಿ (wrong time) ನಗುವುದು, ಕೆಮ್ಮು ಬರದಿದ್ದರೂ ಕೆಮ್ಮುವುದು ಮುಂತಾದ ಸಂಗತಿಗಳೆಲ್ಲಾ ಕೃತಘ್ನರ ಇತರ ಲಕ್ಷಣಗಳು.

ಒಬ್ಬನ ಮುಖದ ಅಧ್ಯಯನ ಮಾಡುವಾಗ ಮೇಲಿನ (Face Reading) ಸಂಗತಿಗಳಿಗೆ ಪೂರಕವಾಗಿ ಇನ್ನೂ ಅನೇಕ ಅಂಶಗಳಿರುತ್ತವೆ. ಆ ಅನೇಕ ಅಂಶಗಳನ್ನು ಅವನಾಡುವ ಮಾತಿನಿಂದ ಖಂಡಿತವಾಗಿ ಗುರುತಿಸಬಹುದು.

ಮಾತಿನಲ್ಲಿ ಅವಿಧೇಯತೆ ವ್ಯಕ್ತವಾದರೆ, ಮಾತನಾಡುತ್ತಿರುವವನು 'ಕೃತಘ್ನ' ಎಂದು ನಿರ್ಣಯಿಸಬಹುದು. ತುಟಿಯ ಮೇಲೆ ತೋರಿಸುವ ಕರುಣೆ (lip sympathy) ಕೃತಘ್ನ ವ್ಯಕ್ತಿಯ ಮತ್ತೊಂದು ಲಕ್ಷಣ. ಅನವಶ್ಯಕ ಆಶ್ವಾಸನೆಕೊಡುವುದು ಧೂರ್ತನ ವರ್ತನೆ.

ಈ ಎಲ್ಲಾ ಸಂಗತಿಗಳಿಂದ ಆ ವ್ಯಕ್ತಿ 'ಕೃತಘ್ನ' ಎಂದು ನಿರ್ಣಯಿಸಿದ ಮೇಲೆ, ಅವನ ಬಗ್ಗೆ ಅನುಕಂಪ ತೋರುವುದು ಸರಿಯೋ ತಪ್ಪೋ ಎಂದು ನಿರ್ಣಯಿಸುವುದು 'ದಾನಿ'ಗೆ ಬಿಟ್ಟ ವಿಷಯ. ತಪ್ಪನ್ನು ಯಾರೇ ಮಾಡಲಿ, ಅದನ್ನು 'ಸರಿ' ಎಂದು ಒಪ್ಪಿಕೊಳ್ಳುವುದು ಘೋರ ದುರಂತ. ತಪ್ಪನ್ನು ಮಾಡದ ವ್ಯಕ್ತಿ ಇಲ್ಲ. "To err is human" ಎಂಬಲ್ಲಿ ಮನುಷ್ಯತ್ವವೇ ತಪ್ಪಿಗೆ ಇನ್ನೊಂದು ಪದವೆಂಬ ಅರ್ಥವಿದೆ.

**ಹಿಂದಿಯಲ್ಲಿ ಬರುವ ವಿಚಾರವೊಂದು ಇಲ್ಲಿ ಮನನೀಯ. "ಗಲತಿ ಕರೋ ಗಲತಿಯಾ ಕರೋ ಲೇಕಿನ್ ಏಕ ತರಹ ಕೀ ಗಲತಿ, ದೋ ಬಾರ್ ಮತ್ ಕರೋ" ಅಂದರೆ - ತಪ್ಪನ್ನು ಮಾಡು, ತಪ್ಪುಗಳನ್ನು ಮಾಡು, ಆದರೆ ಒಂದೇ ತರದ ತಪ್ಪನ್ನು ಎರಡು ಸಲ ಮಾಡಬೇಡ ಎಂತಹ ಅರ್ಥವತ್ತಾದ ವಿಚಾರ. ಪೂರ್ವಾಗ್ರಹ ಪೀಡಿತನಾಗಿ, ಒಬ್ಬನ ಅನೇಕ ತಪ್ಪುಗಳನ್ನು ಮತ್ತೊಬ್ಬನು ಕಂಡೂ ಕಾಣದಂತೆ ವರ್ತಿಸಿದರೆ, ಅದೂ ಸಹ ಅಪಾತ್ರ ಅನುಕಂಪವೇ.**

ಶುಭಾಶಯಗಳು : ದೂರವಾಣಿ : **2522982**



ಸಂಖ್ಯಾ ವಿಜ್ಞಾನ ಮತ್ತು ವಾಸ್ತು ಶಾಸ್ತ್ರ ತಜ್ಞರು

ಎಂ. ಜಿ. ರಾವ್

**ಅಶ್ವಿನಿ ಫೋಟೋ ಸ್ಟುಡಿಯೋ**

ತೆಂಕಪೇಟೆ, ಉಡುಪಿ – 576 101



ಸೂಕ್ಷ್ಮಾತಿ ಸೂಕ್ಷ್ಮವಾದ ವಿಚಾರಗಳಲ್ಲಿಯೂ ಅಪಾತ್ರ ಅನುಕಂಪ ಆಗಾಗ ತಲೆದೋರುತ್ತಲೇ ಇರುತ್ತವೆ. ಅದೂ ಅಪಾಯ.

ಒಂದು ಕೆಲಸದಲ್ಲಿ ಮಗ್ನವಾದ ಮನಸ್ಸು ಇನ್ನೊಂದು ದಿಶೆಯಲ್ಲಿ ಕಾರ್ಯೋನ್ಮುಖವಾದಾಗ, ಅಂತಹ ಮನಸ್ಸಿನಿಂದ ಯಾವ ಕಾರ್ಯವೂ ಸರಿಯಾಗಿ ಕೊನೆಗೊಳ್ಳದು.

ಒಬ್ಬನ ಮನಸ್ಸು ಏಕಾಗ್ರತೆಯಿಂದ ಚಂಚಲತೆ ಹೊಂದುವುದು, ಮತ್ತೊಬ್ಬನಿಗೆ ಸುಲಭವಾಗಿ ಗೊತ್ತಾಗುವುದಿಲ್ಲ. ಯಾಕೆಂದರೆ ಅದು ಸೂಕ್ಷ್ಮಾತಿಸೂಕ್ಷ್ಮವಾದ ವಿಷಯ.

ಒಂದರಲ್ಲಿ ನಿಲ್ಲದ ಮನಸ್ಸು, ಅನೇಕದರಲ್ಲಿ ನಿಂತು ಏನನ್ನೂ ಸಾಧಿಸಲಾರದು. ಮನುಷ್ಯನ ಮನಸ್ಸು ಅಪಾತ್ರ ಅನುಕಂಪಕ್ಕೆ ಬಲಿಯಾದರೆ, ಅದರಿಂದ ಉಂಟಾಗುವುದು ಅಶಾಂತಿ ಮತ್ತು ಗೊಂದಲ.

ಸಾಧಿಸುವ ಮನೋಧರ್ಮವುಳ್ಳವನಿಗೆ ಅಪಾತ್ರ ಅನುಕಂಪದ ಬಗ್ಗೆ ಹಿಡಿತವಿರಬೇಕು. ಪ್ರಜಾಪ್ರಭುತ್ವ ಮಾದರಿಯ ಸರಕಾರದಲ್ಲಿ ಅನುಕಂಪದ ಅಲೆ ನಿರಂತರವಾಗಿ ಪ್ರವಹಿಸುತ್ತಲೇ ಇರುತ್ತದೆ. ಅದು ಸತ್ಪಾತ್ರದಲ್ಲಾದರೆ ಖಂಡಿತವಾಗಿ ದೇಶ ಅಭಿವೃದ್ಧಿ ಹೊಂದಬಹುದು. ಅದಕ್ಕೆ ವ್ಯತಿರಿಕ್ತವಾಗಿ ಅಪಾತ್ರದಲ್ಲಾದರೆ ದೇಶ ಅಭಿವೃದ್ಧಿ ಹೊಂದಬೇಕಾದ ಗುಂಪಿಗೆ ಸೇರ್ಪಡೆಯಾಗುತ್ತದೆ. ★

Ph. : 2480248 (5 lines)
Mobile : 9844009894 (Amar)
Tele Fax : 2125099 /2126420
Email : nandaki@vsnl.net

NANDAKI

**Investments & Holdings (P) Ltd.**

**ENGINEERS & DEVELOPERS (P) Ltd.**

1st floor, CFC Building Annexe, #14/3,
Nrupathunga Road, Bangalore - 560 001

*Contact us for advice on your*
**Investments (Mutual Funds, RBI Bonds, Infrastructure Bonds etc.)**
**Insurance (Life Insurance & General Insurance)**
**Home Loans**
**Construction of Flats & Houses**

# ಗೋಡೆಯಿಂದ ದೇವರು ಮೂಡಿಬಂದನು

**ತೊಂಡೆಮೂಲೆ ನಾರಾಯಣ ಭಟ್ಟ**

ಮಧೂರಿಗೆ ಗಣಪತಿಯು ಎಲ್ಲಿಂದ ಬಂದನು? ಗಣಪತಿಯ ವಿಗ್ರಹವು ಮನುಷ್ಯನಿರ್ಮಿತವೇ? ಅಲ್ಲವೇ? ಮುಂತಾದ ಪ್ರಶ್ನೆಗಳನ್ನು ಹಲವಾರು ಭಕ್ತರು ಕೇಳುತ್ತಾ ಇದ್ದಾರೆ. ಅದಕ್ಕೆ ಇದು ಉತ್ತರ.

ಸುಮಾರು 600 ವರುಷಗಳ ಹಿಂದೆ ಒಬ್ಬ ನಿಷ್ಠಾವಂತನಾದ ಅರ್ಚಕನು ಮಧೂರಿನಲ್ಲಿ ಮದನೇಶ್ವರನ ಪೂಜೆ ಮಾಡುತ್ತಾ ಇದ್ದನು. ಆಗ ದೇವರ ಪೂಜೆಯನ್ನು ತಾವೂ ಮಾಡಬೇಕೆಂದು 3-4 ವರುಷ ಪ್ರಾಯದ ಕೆಲವು ಮುಗ್ಧಬಾಲಕರಿಗೆ ಆಸೆ ಹುಟ್ಟಿತು. ಆ ಬಾಲಕರು ಪೂಜಾಗೃಹಕ್ಕೆ ನುಗ್ಗಿ ಅರ್ಚಕನು ಹೇಳುವ ಮಂತ್ರಗಳನ್ನೇ ತಮ್ಮ ತೊದಲು ನುಡಿಗಳಿಂದ ಉಚ್ಚರಿಸುತ್ತಾ ಹರಿವಾಣದಿಂದ ಹೂಗಳನ್ನು ಹೆಕ್ಕಿ ಶಿವಲಿಂಗಕ್ಕೆ ಹಾಕತೊಡಗಿದರು. ಅರ್ಚಕನಿಗೆ ತಾಳ್ಮೆ ತಪ್ಪಿತು. ಗದರಿಸಿದನು. ಏನಿದು ? ಪೂಜೆಯೆಂದರೆ ಮಕ್ಕಳಾಟವೇ? ಉಪನಯನ ಕೂಡ ಆಗದ ಕೇವಲ 3-4 ವರುಷ ಪ್ರಾಯದ ಅಜ್ಞಾನಿಗಳಿಗೆ ಪೂಜೆಯ ಅಧಿಕಾರವೇ ಇಲ್ಲ. ಇಲ್ಲಿ ನಾನು ಮಾತ್ರ ಪೂಜೆಯ ಅಧಿಕಾರಿ. ನಡೀರಿ ಹೊರಗೆ! ಎಂದು ಆರ್ಭಟಿಸುತ್ತಾ ಬಾಲಕರನ್ನೆಲ್ಲಾ ದೂರಕ್ಕೆ ಓಡಿಸಿದನು. ಮುಗ್ಧ ಬಾಲಕರು ದುಃಖವನ್ನು ಸಹಿಸಲಾರದೆ ಕಣ್ಣೀರು ಸುರಿಸಿದರು. ನಾವೇ ಗೋಡೆಯಲ್ಲಿ ಗಣಪತಿಯ ಚಿತ್ರವನ್ನು ಬರೆದು ಪೂಜೆ ಮಾಡೋಣ ಎನ್ನುತ್ತಾ ಗೋಡೆಯಲ್ಲಿ ಚಿತ್ರ ಬರೆಯತೊಡಗಿದರು. ಚಿತ್ರ ಪೂರ್ತಿಯಾಗುವ ಮೊದಲೇ ಮುಗ್ಧ ಬಾಲಕರ ಭಕ್ತಿಗೆ ಮೆಚ್ಚಿ ಗಣಪತಿಯು ಗೋಡೆಯಿಂದ ಮೂಡಿಬಂದನು. ಅಶ್ಚರ್ಯಕರವಾದ ಈ ಸುದ್ದಿಯನ್ನು ಕೇಳಿ ಕುಂಬಳೆ ರಾಜರು ಉಳಿಯದ ತಂತ್ರಿಗಳನ್ನೂ ಬರಮಾಡಿ ವಿಧ್ಯುಕ್ತವಾಗಿ ಬ್ರಹ್ಮಕಲಶಾದಿಗಳನ್ನು ನೆರವೇರಿಸಿದರು. ಹೀಗೆ ಅತಿಶೀಘ್ರವಾಗಿ ಸಿದ್ಧಿಯನ್ನುಂಟು ಮಾಡುವ ಈ ಗಣಪತಿಗೆ ಸಿದ್ಧಿವಿನಾಯಕನೆಂಬ ಹೆಸರು ಬಂತು. ಇಂದಿಗೂ ಮಧೂರು ದೇವರಿಗೆ ಮಕ್ಕಳೆಂದರೆ ತುಂಬಾ ಮಮತೆ.

**ಕಾಸರಗೋಡು – 671 125.**

**ಶುಭಾಶಯಗಳು :** ಫೋನ್ : **2523301(S), 2520001(R)**

**ಕೋಣಿ ವಾಸುದೇವ ಶೇಟ್ ಮತ್ತು ಮಕ್ಕಳು**

*ರಥಬೀದಿ, ಉಡುಪಿ – 576 101*

**ಶ್ರೀ ಸುಬ್ರಹ್ಮಣ್ಯ ಜ್ಯುವೆಲ್ಲರ್ಸ್**

ಎಸ್. ಎಂ. ಎಸ್. ಪಿ. ಕಾಂಪ್ಲೆಕ್ಸ್‌ನ ಎದುರು

ರಾಜಾಜಿ ಕ್ರಾಸ್‌ರೋಡ್, ಉಡುಪಿ – 576 101



# “ಧರ್ಮವು ಅಮಾನುಷವಲ್ಲ”

## ಟರ್ಕಿಯಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಪುತ್ತಿಗೆ ಶ್ರೀಪಾದರು




ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಉಡುಪಿ ಶ್ರೀ ಪುತ್ತಿಗೆ ಮಠದ ಪರಮ ಪೂಜ್ಯ ಸ್ವಾಮೀಜಿ ಹಾಗೂ ಡಬ್ಲ್ಯೂಸಿಆರ್‌ಪಿಯ ಅಂತಾರಾಷ್ಟ್ರೀಯ ಅಧ್ಯಕ್ಷರೂ ಆದ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಟರ್ಕಿ ಇಸ್ತಾಂಬುಲ್‌ನಲ್ಲಿ ನಡೆದ ಡಬ್ಲ್ಯೂಸಿಆರ್‌ಪಿಯ ಧರ್ಮದರ್ಶಿಗಳು ಮತ್ತು ವಿಶ್ವಧಾರ್ಮಿಕ ನೇತಾರರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹೀಗೆ ಹೇಳಿದರು. “ಮಾನವೀಯತೆಯನ್ನು ಮನ್ನಿಸದ ಧರ್ಮ ಧರ್ಮವೇ ಅಲ್ಲ. ಇಂದಿನ ದಿನಗಳಲ್ಲಿ ಅನೇಕ ಅಮಾನುಷ ಮತ್ತು ನಿಯಮ ಬಾಹಿರ ಚಟುವಟಿಕೆಗಳು ಧರ್ಮದ ಹೆಸರಿನಲ್ಲಿ ನಡೆಯುತ್ತಿವೆ. ಎಲ್ಲೆಡೆ ನಾವು ಧರ್ಮವನ್ನು ದುರುಪಯೋಗಿಸುವ ಮತ್ತು ಇಚ್ಛಾನುಸಾರ ತಿರಿಚುವ ವಿದ್ಯಮಾನವನ್ನು ಕಾಣುತ್ತೇವೆ. ಸ್ವಾರ್ಥಿಗಳು ಶಾಂತಿ ಸೌಹಾರ್ದಗಳ ತಳಹದಿಯಾದ ಧರ್ಮವನ್ನು ದುರುಪಯೋಗ ಪಡಿಸುತ್ತಿದ್ದಾರೆ. ಹೀಗಿರುತ್ತಾ ಸ್ವಾರ್ಥಿಗಳ ಕೈಯಲ್ಲಿ ಧರ್ಮಕ್ಕೆ ಅಪಾಯವಾಗುತ್ತಿರುವುದನ್ನು ನೋಡುತ್ತಾ ಧಾರ್ಮಿಕ ಮುಖಂಡರು ಮೂಕ ಪ್ರೇಕ್ಷಕರಂತೆ ಕೈಕಟ್ಟಿ ಕುಳಿತುಕೊಂಡಿರಲು ಸಾಧ್ಯವಿಲ್ಲ. ಧರ್ಮದ ನಿಜವಾದ ಅರ್ಥವನ್ನು ಕಾಪಾಡಲು ಅಗತ್ಯವೆನಿಸುವ ಕಾರ್ಯಗಳನ್ನು ಕೈಗೊಳ್ಳಲೇಬೇಕಾಗಿದೆ. ಧಾರ್ಮಿಕ ಮುಂದಾಳುಗಳು ಮಾನವ ಕೋಟಿಯ ಹೃದಯಗಳನ್ನು ಪ್ರೀತಿ ವಾತ್ಸಲ್ಯಗಳಿಂದ ಬೆಸೆಯಲು ಅಗತ್ಯವಿರುವುದನ್ನೆಲ್ಲಾ ಮಾಡಲೇಬೇಕು.

ಕೆಲವರು ಹಿಂದೂ ದೇವರುಗಳಿಗೆ ಅನೇಕ ಮುಖಗಳಿದ್ದರೂ ಒಂದೇ ಒಂದು ಹೃದಯವಿರುತ್ತದೆ. ಹಾಗೆಯೇ ಎಲ್ಲ ಧರ್ಮಗಳ ನೇತಾರರು ಈ ಗುರಿಯ ಸಾಧನೆಗಾಗಿ ಒಟ್ಟಾಗಿ ದುಡಿಯಲೇಬೇಕು. ಎಲ್ಲ ಮತಧರ್ಮಗಳು ಸಮಾನ ಕಾರ್ಯತಂತ್ರವನ್ನು ಕೈಗೆತ್ತಿಕೊಳ್ಳುವ ಕಾಲ ಸನ್ನಿಹಿತವಾಗಿದೆ. ಹೀಗೆ ಧಾರ್ಮಿಕ ಮುಂದಾಳುಗಳ ಜಾಗತಿಕ ಸಂಸ್ಥೆ ಮತ್ತು ವಿಶ್ವಸಂಸ್ಥೆಯ



ಆಶ್ರಯದಲ್ಲಿ ರೂಪುಗೊಂಡ ಡಬ್ಲ್ಯೂಸಿಆರ್‌ಪಿ (ವಿಶ್ವಶಾಂತಿಗಾಗಿರುವ ಧರ್ಮಗಳ ವಿಶ್ವಸಂಸ್ಥೆ)ಗಳು ನಿರ್ಣಾಯಕ ಹಾಗೂ ಮಹತ್ವಪೂರ್ಣವಾದ ಪಾತ್ರವನ್ನು ವಹಿಸಬೇಕಾಗಿದೆ”

ಯುರೋಪ್ ಮತ್ತು ಏಷ್ಯಾಗಳ ಸಂಗಮ ಕ್ಷೇತ್ರವಾದ ಇಸ್ತಾಂಬುಲ್‌ನಲ್ಲಿ ಜರುಗಿದ ಈ ನಿರ್ಣಾಯಕ ಸಭೆಯು ಎಲ್ಲ ಭೂಖಂಡಗಳ ಮನುಷ್ಯರ ನಡುವೆ ಸ್ನೇಹ ಸೇತುವನ್ನು ನಿರ್ಮಿಸುವುದೆಂದು ಶ್ರೀಪಾದರು ಆಶಿಸಿದರು. ಡಬ್ಲ್ಯೂಸಿಆರ್‌ಪಿಯ ಧರ್ಮದರ್ಶಿಗಳ ಮಂಡಳಿಯ ಸಭೆಯನ್ನು ಉದ್ಘಾಟಿಸಿದ ಜೋರ್ಡಾನಿನ ರಾಜಕುಮಾರ ಶ್ರೀ ರಶೀದ್ ಎಲ್. ಹಸನ್‌ರವರು, ರಾಜಕೀಯ ಮುಂದಾಳುಗಳು ನ್ಯಾಯಯುತರಾಗಿದ್ದು ಯಾವುದೇ ಸಂದರ್ಭದಲ್ಲಿ ಎಲ್ಲರನ್ನು ಒಳಗೊಳ್ಳಬೇಕು ಎಂದು ಕರೆಕೊಟ್ಟರು. ರಾಜಕಾರಣಿಗಳು ಎಲ್ಲ ಪೌರರನ್ನು ಏಕಪ್ರಕಾರವಾಗಿ ಹಾಗೂ ನ್ಯಾಯಯುತವಾಗಿ ನೋಡಿಕೊಳ್ಳುವುದು ತಮ್ಮ ಆದ್ಯ ಕರ್ತವ್ಯವೆನ್ನುವುದನ್ನು ಮರೆಯಬಾರದೆಂದು ಅವರು ಈ ಸಂದರ್ಭದಲ್ಲಿ ಒತ್ತಿ ಹೇಳಿದರು. ಜೋರ್ಡಾನ್ ಮತ್ತು ಟರ್ಕಿಗಳು ಈ ವಿಷಯದಲ್ಲಿ ಮುಂಚೂಣಿಯಲ್ಲಿರುವುದನ್ನು ಒತ್ತಿಹೇಳಿದ ರಾಜಕುಮಾರರು ಇತರ ರಾಷ್ಟ್ರಗಳು ಇವುಗಳ ಮೇಲ್ಪಂಕ್ತಿಯನ್ನು ಅನುಸರಿಸುವುದು ಅಪೇಕ್ಷಣೀಯವೆಂದರು. ಡಬ್ಲ್ಯೂಸಿಆರ್‌ಪಿಯ ಮಹಾಕಾರ್ಯದರ್ಶಿ ಡಾ। ವಿಲಿಯಂ ಎಫ್. ವೆಂಡ್ಲಿಯವರು, ಡಬ್ಲ್ಯೂಸಿ ಆರ್‌ಪಿಯ ಆಫ್ರಿಕಾ, ಇರಾಕ್ ಬೋಸ್ನಿಯಾ, ಇಸ್ರೇಲ್ ಮತ್ತು ಶ್ರೀಲಂಕಾಗಳಲ್ಲಿ ಅಲ್ಲಿನ ಧಾರ್ಮಿಕ ಮುಖಂಡರುಗಳ ಜೊತೆಗೆ ಕೈಜೋಡಿಸಿ ಆ ದೇಶಗಳಲ್ಲಿನ ಜ್ವಲಂತ ಸಂಘರ್ಷಗಳನ್ನು ಪರಿಹರಿಸಿಕೊಳ್ಳಲು ಶಕ್ತಿಮೀರಿ ದುಡಿಯುತ್ತಿದೆ ಎಂದು ಹೇಳಿದರು.

ಅಂತಾರಾಷ್ಟ್ರೀಯ ಧರ್ಮದರ್ಶಿ ಮಂಡಳಿಯ ಜಂಟಿ ಅಧ್ಯಕ್ಷ ಹಾಗೂ ಉದ್ಯಮಿ ಶ್ರೀ ರಿಚರ್ಡ್ ಬ್ಲಮ್, ಟರ್ಕಿಯ ಪ್ರೊಫೆಸರ್ ಆಲಿ ಬರ್ಡಕೊಗ್ಲು, ಯು. ಎಸ್. ಎ. ಯ ಉದ್ಯಮಿ ಶ್ರೀಮತಿ ಎಲೆನಿ ಸಕೋಪೌಲಸ್ ಕೌನಲಕಿಸ್, ಬೋಸ್ನಿಯಾದ ಮುಸ್ತಾಫ ಸೆರೀಕ್, ನಾರ್ವೆಯ ಶ್ರೀ ಬಿಷಪ್ ಗುನ್ನಾರ್ ಜೆ. ಸ್ಟಾಲ್‌ಸೆಟ್, ಯು. ಎಸ್. ಎ. ಯಲ್ಲಿನ ಕಾಶ್ಮೀರಿ ಉದ್ಯಮಿ ಎಮ್. ಫಾರೂಕ್ ಕತ್ವಾರಿ, ಕುವೈಟ್‌ನ ಅಬ್ದುಲ್ ಇಲಾಹ್ ಮರಾಫಿ, ಕ್ಯಾಲಿಫೋರ್ನಿಯಾದ ಡಯಾನೆ ಫೈನ್‌ಸೇನ್, ಯು. ಎಸ್. ಎ. ನ ವಿ. ರೆವೆರಂಡ್ ಲಿಯೋನೆಡ್ ಕಿಸ್ಕೋಸ್ಕಿ ಮತ್ತು ಇರಾಕ್, ಇಟಲಿ, ಸಿರಿಯಾ, ಜಪಾನ್, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳ ಧಾರ್ಮಿಕ ಮುಂದಾಳುಗಳು ಡಬ್ಲ್ಯೂಸಿಆರ್‌ಪಿಯ ಭಾವೀ ಚಟುವಟಿಕೆಗಳನ್ನೂ ವಿಶ್ವಶಾಂತಿ ಸೌಹಾರ್ದಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಚರ್ಚಿಸಿದರು.

ವಿಶ್ವಶಾಂತಿ ಸೇವೆಗಳ ನಿರ್ದೇಶಕ ಕ್ಯೊಚಿ ಸುಗಿನೋರವರು ಡಬ್ಲ್ಯೂಸಿ ಆರ್‌ಪಿಯ ವಿಶ್ವವ್ಯಾಪಿ ಕಾರ್ಯಕ್ರಮವನ್ನು ಪರಿಚಯಿಸಿದರು. ಶ್ರೀಮತಿ ವೆಲೆರಿ ನ್ಯಾಷ್ ಧಾರ್ಮಿಕ ಮುಂದಾಳುಗಳಿಗೆ ಧನ್ಯವಾದ ಸಮರ್ಪಿಸಿದರು. ಕಾನ್‌ಸ್ಟಂಟಿನೋಪಲ್‌ನ ಆರ್ಚ್ ಬಿಷಪ್ ಬಾರ್ಥೊಲೊಮೆವ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಮುಂದಿನ ಕಾರ್ಯಕ್ರಮಕ್ಕೆ ಯಶಸ್ಸನ್ನು ಕೋರಿದರು. ಎರಡು ದಿನಗಳ ಕಾಲ ನೀಡಿ ನಿಂತ ಈ ಸಭೆಯ ಸಮಾರೋಪ ಸಂದರ್ಭದಲ್ಲಿ ಜಗತ್ತಿನ ಎಲ್ಲ ಧರ್ಮಗಳ ನೇತಾರರನ್ನು ಒಂದುಗೂಡಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಭಾರತೀಯ ಭಕ್ತಾಭಿಮಾನಿಯೋರ್ವರ ಅತಿಥಿಗೃಹದಲ್ಲಿ ತಂಗಿದ್ದ ಶ್ರೀಪಾದರನ್ನು ಭಾರತೀಯ ಮೂಲದ ಭಕ್ತ ಸಮೂಹವು ಈ ಸಂದರ್ಭದಲ್ಲಿ ಸನ್ಮಾನಿಸಿತು.



# ಈಶಾವಾಸ್ಯೋಪನಿಷತ್

( ಆಚಾರ್ಯ ಮಧ್ವರ ಭಾಷ್ಯಾನುಸಾರಿ)

ಲೇಖಾಂಕ ೧೦

ಬಿಂದು ಮಾಧವಾಚಾರ್ಯ ನಾಗಸಂಪಿಗೆ, ಬಾಗಲಕೋಟೆ

**ಎಂಟನೆಯ ಮಂತ್ರದ ವಿವರಣೆ :**

ಭಗವಂತನನ್ನು ಸರಿಯಾಗಿ ಅರಿತ ಜ್ಞಾನಿಯು ಈ ಸಂಸಾರಬಂಧನದಿಂದ ಬಿಡುಗಡೆಹೊಂದಿ ಅವನ ಸಾಮೀಪ್ಯವನ್ನು ಹೊಂದುತ್ತಾನೆ. ಭಗವಂತನನ್ನು ಸೇರುವುದಕ್ಕೆ ಅವನನ್ನು ಅರಿಯುವ ರೀತಿಯೇ ಕಾರಣ. ಹೀಗಿರುವಾಗ ಭಗವಂತನನ್ನು ಅರಿಯುವ ಬಗೆ ಹೇಗೆ? ಉಪನಿಷತ್ತು ನುಡಿಯಿತು. 'ಶುಕ್ರಂ ಅಕಾಯಮ್' ಎಂದು. ಭಗವಂತನು ಶುಕ್ರ. ದುಃಖದಿಂದ ದೂರನಾದವ. 'ಶುಚಂ ಶೋಕಂ ರಹತಿ ತ್ಯಜತಿ ರಹಯತಿ ತ್ಯಜಯತೀತಿ ಚ ಶುಕ್ರ ಇತಿ ವ್ಯುತ್ಪತ್ತ್ಯಾ ಸರ್ವಸ್ಯ ಶೋಕನಾಶಕಃ ಸ್ವಯಂಶೋಕರಹಿತಶ್ಚ ಪರಮಾತ್ಮಾ ಯತೋಽತಸ್ತಂ ಪ್ರಾಪ್ತಸ್ಯ ಶೋಕೋ ನಾಸ್ತೀತಿಭಾವಃ॥' "ಉಕ್ತಂ ಚ ಶುಕ್ರಂ ತಚ್ಛೋಕರಾಹಿತ್ಯಮ್" ಇತಿ ವಾರಾಹೇ (ಕೃಷ್ಣಾವಧೂತ ವಿರಚಿತ ಪ್ರಭಾವ್ಯಾಖ್ಯಾನ) ಎಲ್ಲರ ದುಃಖದೂರಮಾಡುವ ಹಾಗೂ ನಿತ್ಯಜ್ಞಾನಾನಂದಾದಿ ಗುಣದೇಹನಾದ ಆ ಭಗವಂತನಿಗೆ ದುಃಖದ ಸಂಪರ್ಕವಾಗಲು ಸಾಧ್ಯವೇ? ಆದ್ದರಿಂದ ಭಗವಂತನನ್ನು ತಿಳಿದು ಉಪಾಸನೆ ಮಾಡಿದಾಗ ದುಃಖವು ದೂರವಾಗುವುದು.

ಭಗವಂತನು ಅವ್ರಣ. "ಅವ್ರಣಂ ನಿತ್ಯಪೂರ್ಣತಃ ಇತಿಸ್ಮೃತೇಃ" ಅನಾದ್ಯನಂತಂ ಮಹತಃ ಪರಂಧ್ರುವಮ್ (ಕಠ, 3, 15) ಅಣೋರಣೀಯಾನ್ ಮಹತೋ ಮಹೀಯಾನ್ (ಕಠ2-20) ಅಂದರೆ ಎಲ್ಲ ಕಾಲದಲ್ಲೂ ಇರುವವನಾಗಿ ಎಲ್ಲ ಗುಣಗಳಿಂದಲೂ ಪೂರ್ಣನಾದವ. ಎಲ್ಲ ದೋಷಗಳಿಂದ ದೂರ. ಎಲ್ಲ ಗುಣಗಳ ಆಗರ. ನಿರ್ದುಷ್ಟ ಜ್ಞಾನಾನಂದಾದಿಗುಣಗಳೇ ಮೈವೆತ್ತಿ ಪರಮಸುಂದರ. ಅವನ ಗುಣಗಳಲ್ಲಿ ಯಾವುದಕ್ಕೂ ಕೊರತೆಯಿಲ್ಲ.

ಭಗವಂತನು ಗುಣಮೂರ್ತಿ. ಗುಣಪೂರ್ಣ. ಮತ್ತು ಆಕಾಯ "ಅಕಾಯಂ ಲಿಂಗವರ್ಜನಾತ್ ಇತ್ಯುಕ್ತೇಃ ಕಂ ಸುಖಮಯತೇ ಪ್ರಾಪ್ನೋತೀತಿ ಕಾಯೋ ಲಿಂಗದೇಹಃ। ನ ವಿದ್ಯಮಾನಃ ಕಾಯೋ ಯಸ್ಯೇತ್ಯಕಾಯಮಿತಿ ವ್ಯುತ್ಪತ್ತ್ಯಾ ಶೋಕಮೂಲ ಲಿಂಗದೇಹರಾಹಿತ್ಯಸ್ಯ ಶೋಕೋ ನಾಸ್ತೀತಿಭಾವಃ" (ಪ್ರಭಾವ್ಯಾಖ್ಯಾನ)

ಅಂದರೆ ಭಗವಂತನಿಗೆ ಜೀವರಂತೆ ಸೂಕ್ಷ್ಮವಾದ ಲಿಂಗದೇಹವಾಗಲಿ ಸ್ಥೂಲವಾದ ಭೌತಿಕ ದೇಹವಾಗಲಿ ಇಲ್ಲ. ಹಾಗೆಂದ ಮಾತ್ರಕ್ಕೆ ಅವನು ನಿರಾಕಾರ ಅಲ್ಲ.

ಶ್ರೀರಾಘವೇಂದ್ರ ಸ್ವಾಮಿಗಳ ಮಠ, 50ನೇ ಸೆಕ್ಟರ್, ಪ್ಲಾಟ್ ನಂ.81, ನವನಗರ, ಬಾಗಲಕೋಟೆ. ✆: 08354-237234



ಜ್ಞಾನಾನಂದಾತ್ಮಕವಾದ ದೇಹವುಳ್ಳವ. ಭಕ್ತರ ಉದ್ಧಾರಕ್ಕಾಗಿ ಸಾವಿರಾರು ರೂಪಗಳನ್ನು ಧರಿಸಿ ಬರುವ ಕರುಣಾಸಮುದ್ರ. ಆದರೆ ಆ ಭಗವಂತನಿಗೆ ನಮ್ಮಂತೆ ಪಂಚಭೂತಗಳಿಂದ ನಿರ್ಮಿತವಾದ ಸ್ನಾಯು ಅಸ್ತಿ ಮೊದಲಾದ ಸಪ್ತಧಾತು ಸಮಷ್ಟಿರೂಪವಾದ ಯಾತನಾಮಯವಾದ ಜನನ, ಜರಾಮರಣಗಳಿಗೆ ಒಳಗಾಗುವ ದುಃಖಮಯವಾದ ನಶ್ವರವಾದ ಶರೀರವಿರುವುದಿಲ್ಲ. ಹೀಗಾಗಿ ಭಗವಂತ ಸದಾ ಸಾಕಾರ.

ಇನ್ನು ಭೌತಿಕ ಶರೀರ ಬಂಧವಿಲ್ಲದ ಭಗವಂತನಿಗೆ ಪಾಪಗಳ ಅಥವಾ ದೋಷಗಳ ಸಂಬಂಧ ಎಲ್ಲಿಂದ? ಆದ್ದರಿಂದ ಉಪನಿಷತ್ತು ಅವನನ್ನು 'ಅಪಾಪವಿದ್ಧಂ' ಎಂದಿದೆ. ನಿರ್ದುಷ್ಟಗುಣಸ್ವರೂಪನಾದ ಭಗವಂತನು ಎಲ್ಲರನ್ನೂ ಪುನೀತರನ್ನಾಗಿ ಮಾಡುವುದರಿಂದ ಅವನು ಶುದ್ಧ. ಎಲ್ಲವನ್ನೂ ಬಲ್ಲವನಾದ್ದರಿಂದ ಕವಿ. ಸರ್ವಜ್ಞ. "ಕಂ ಧಿಯಂ ವಯತಿ ಸರ್ವತ್ರ ಪ್ರಾಪಯತೀತಿ ಕವಿಃ ಸರ್ವಜ್ಞಃ ಇತ್ಯರ್ಥ" (ಪ್ರಭಾವ್ಯಾಖಾನ) ಅಂದರೆ ಅವನೇ ಪ್ರಕೃತಿಯ, ಲಕ್ಷ್ಮೀದೇವಿಯ ಹಾಗೂ ಚತುರ್ಮುಖಾದಿ ಸಮಸ್ತ ಚೇತನರ ಮನದೊಳಗೆ ನಿಂತು ನಿಯಂತ್ರಿಸುತ್ತಾನೆ. ಎಲ್ಲವನ್ನೂ ಮೀರಿ ಎಲ್ಲಕ್ಕಿಂತ ಎತ್ತರದಲ್ಲಿ ನಿಂತಿದ್ದಾನೆ. ಅವನಿಗೆ ಇನ್ನೊಬ್ಬರ ಆಸರೆಯ ಅವಶ್ಯಕತೆಯಿಲ್ಲ. ಅವನು ತನ್ನಿಂದಲೇ ತಾನಾಗಿದ್ದಾನೆ. ಹಾಗೂ ಸರ್ವದಾ ಸ್ವತಂತ್ರನಾದ್ದರಿಂದ "ಪರಿಭೂಃ" ಎನಿಸಿದ್ದಾನೆ. "ಪರಿಭೂಃ ಸರ್ವತೋ ವರಃ ಸರ್ವೋತ್ತಮಃ ಇತ್ಯರ್ಥ" ಅವನನ್ನು ಯಾರೂ ಹುಟ್ಟಿಸಿಲ್ಲ. ತನ್ನ ಇಚ್ಛೆಯಿಂದಲೇ ನಿತ್ಯವಾದ ಅನಂತಾನಂತ ರೂಪಗಳನ್ನು ಪ್ರಕಟಗೊಳಿಸುತ್ತಾನೆ.

ತನ್ನ ಇಚ್ಛೆಯಂತೆಯೇ ಜಗತ್ತನ್ನು ಹುಟ್ಟಿಸುತ್ತಾನೆ. ಪಾಲಿಸುತ್ತಾನೆ. ಕೊನೆಗೊಮ್ಮೆ ಇಲ್ಲವಾಗಿಸುತ್ತಾನೆ. ಆದ್ದರಿಂದ ಇದೆಲ್ಲ ಆತನ ಲೀಲೆ. ಈ ಲೀಲೆ ಅನಾದಿಕಾಲದಿಂದ ನಡೆದಿದೆ. ಇದಕ್ಕೆ ಕೊನೆಯಿಲ್ಲವಾದ್ದರಿಂದ ಇದು ಅನಾದ್ಯನಂತ. ಭಗವಂತನ ಈ ವಿಶ್ವಸೃಷ್ಟಿ ಲೀಲೆಯು ಸತ್ಯ. ಈ ವಿಶ್ವವೂ ಸತ್ಯ. ನಮ್ಮ ಅನುಭವಕ್ಕೆ ಗೋಚರವಾಗುವ ಈ ವಿಚಿತ್ರವಾದ ವಿಶ್ವವು ಅವನ ಅದ್ಭುತ ಶಕ್ತಿಗೆ ಒಂದು ಪ್ರತ್ಯಕ್ಷ ಸಾಕ್ಷಿ. ಇಂತಹ ವಿಶ್ವವನ್ನು ಅಲ್ಲಗಳೆದರೆ ಭಗವಂತನ ಮಹಿಮೆಯನ್ನೇ ಅಲ್ಲಗಳೆದಂತೆ. ಆದ್ದರಿಂದ ಭಗವಂತನನ್ನು ಉಪನಿಷತ್ತು ತಿಳಿಸುವಂತೆ ಶುಕ್ರಂ, ಅಕಾಯಂ, ಅವ್ರಣಂ, ಶುದ್ಧಂ, ಅಪಾಪವಿದ್ಧಂ, ಕವಿ, ಸರ್ವಜ್ಞ ಮುಂತಾದ ವಿಶೇಷಣಗಳ ಅರ್ಥ ಮಹತಿಯನ್ನು ತಿಳಿದು ಉಪಾಸಿಸಬೇಕು. (ಸಶೇಷ)




ಶುಭಾಶಯಗಳು :

ಜವುಳಿ ವ್ಯಾಪಾರದಲ್ಲಿ ನಂಬಿಕೆಯ ಹೆಸರು

**ನೂತನ್ ಸಿಲ್ಕ್ಸ್**

ಬಡಗು ಪೇಟೆ, ಉಡುಪಿ - 576 101.

ದೂರವಾಣಿ: 2520415, ಮನೆ: 2520574

# ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ

**ಶತವಾಧಾನಿ ಉಡುಪಿ ರಾಮನಾಥಾಚಾರ್ಯ**

ನರನಿಗೂ ನಾರಾಯಣನಿಗೂ ಇಷ್ಟೆ ವ್ಯತ್ಯಾಸ - ನರನು ನರಳುತ್ತಾನೆ; ಉರುಳುತ್ತಾನೆ, ಸುರುಳಿ ಸುತ್ತುತ್ತಾನೆ. ನಾರಾಯಣನು ಅರಳುತ್ತಾನೆ, ಮೆರೆಯುತ್ತಾನೆ, ಮರಳಿ ಕುಣಿಯುತ್ತಾನೆ.

ಪಂಚ ಭೂತಗಳ ಪ್ರಪಂಚದ - ಹೆಡೆಬಿಚ್ಚಿ ಅರಳಿದ ಹೆಬ್ಬಾವಿನ ಉರುಳಿಗೆ ಸಿಕ್ಕ ನರ ಸಾವನ್ನಪ್ಪುತ್ತಾನೆ. ಪ್ರಪಂಚಕ್ಕೆ ಮನುಷ್ಯ ಸಿಲುಕಿ ಪ್ರತಿಯೊಂದು ವಿಷಯವನ್ನು ವಿಷವನ್ನಾಗಿಸಿ ಸ್ವೀಕರಿಸುತ್ತಾನೆ. ಇಲ್ಲಿ ಕಣ್ಣಿಗೆ ಸಿಕ್ಕಿದ, ಕಿವಿಗೆ ಬಿದ್ದ, ಬಾಯಿಗೆ ಜಾರಿದ, ಮೈಗೆ ಮೆತ್ತಿದ, ಮೂಗಿಗೆ ಬಡಿದ ಎಲ್ಲವೂ ವಿಷವೆ. ಈ ವರ್ತುಲದಿಂದ ಆತ ಅಭಯವನ್ನು ಪಡೆಯಲು, ಅಮೃತವನ್ನುಣ್ಣಲು ನಾರಾಯಣನನ್ನೆ ಕರೆಯಬೇಕು.

ಪಂಚಮಯ ಪ್ರಪಂಚಕ್ಕಿಂತ ಆಚೆ ನಿಂತ ನಾರಾಯಣನು ನರನ ಉದ್ಧಾರಕ್ಕೆ ಪ್ರಪಂಚವನ್ನೇ ಮಣಿಸುತ್ತಾನೆ. ಪಂಚ ವಿಷಯಗಳ ವಿಷ ವಾಸನೆಯನ್ನು ತಗ್ಗಿಸುತ್ತಾನೆ. ನರನ ಪಂಚೇಂದ್ರಿಯಗಳಿಗೆ ತನ್ನ ಪಂಚರೂಪಗಳನ್ನು ಕರುಣಿಸುತ್ತಾನೆ. ಆಗ ನರನೂ ನಾರಾಯಣ ನೆದುರು ಕುಣಿಯುತ್ತಾನೆ, ಬಿಂಬ ಕುಣಿದಾಗ ಪ್ರತಿಬಿಂಬ ಕುಣಿದಂತೆ. ಪ್ರತಿಬಿಂಬ ಕುಣಿವ ಆಸೆ ಪಟ್ಟಾಗ ಬಿಂಬನೂ ಕುಣಿಯ ತೊಡಗುತ್ತಾನೆ. ತಾಯಿ ಕುಣಿದು ತೋರಿಸಿದಾಗ ಮಗು ಕುಣಿದಂತೆ, ಮಗು ಕುಣಿಯುವುದ ಕಂಡು ತಾಯಿ ತಾನೆ ಕುಣಿದಂತೆ.

ಈ ಕತೆ ಕೃಷ್ಣಾವತಾರದಲ್ಲಿ ಕಾಲಿಯ ನಾಗನದ್ದು. ಪಂಚಶಿರದ ಕಾಲೀಯ ಒಮ್ಮೆ ಪ್ರಪಂಚದ ವೇಷ ತೊಟ್ಟರೆ ಮಗದೊಮ್ಮೆ ಪಂಚೇಂದ್ರಿಯದ ಪಾಮರನೂ ಆಗುವನು, ಕೊನೆಗೆ ಪಂಚರೂಪನ ಪದ ಪಂಕಜವನ್ನು ಹೊತ್ತ ಪರ - ನರನೂ ಆಗಬಲ್ಲನು.

ಉಡುಪಿ ಶ್ರೀಕೃಷ್ಣನ ಮುಂಬರುವ ಸಪರ್ಯಾಪರ್ಯಾಯ ಶ್ರೀಕೃಷ್ಣಾಪುರ ಶ್ರೀಪಾದರದ್ದು. ಆಚಾರ್ಯ ಮಧ್ವರು ಶಿಷ್ಯ ಶ್ರೀ ಜನಾರ್ದನ ತೀರ್ಥರಿಗೆ ಕೊಡ ಮಾಡಿದ ಪ್ರತಿಮೆ - ಕಾಲೀಯ ಮರ್ದನ ಕೃಷ್ಣ. ಅಭಯಪ್ರದ ಶ್ರೀಕೃಷ್ಣ ಲೋಕಕ್ಕೆ ವಿಷಮಯ ವಾತಾವರಣದಿಂದ ರಕ್ಷಣೆ ನೀಡಲಿ.

ನೆಲ ನಡುಗದಿರಲಿ

ನೀರು ಹಾರದಿರಲಿ

ಗಾಳಿ ದೂಡದಿರಲಿ

ಬೆಂಕಿ ಹತ್ತದಿರಲಿ

ಅಪಘಾತ ಆಗದಿರಲಿ.

ಮುಖಪುಟಲೇಖನ



# ಭಗವದ್ ಗೀತೆ

**ಲೇಖಾಂಕ ೧೭೨**

**ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ**

ಮೂರನೆಯ ಅಧ್ಯಾಯದ ಹತ್ತನೆಯ ಶ್ಲೋಕ :

**ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।**

**ಅನೇನ ಪ್ರಸವಿಷ್ಯಧ್ವಮೇಷ ವೋऽಸ್ತ್ವಿಷ್ಟಕಾಮಧುಕ್ ॥೧೦ ॥**

[ಯಜ್ಞಗಳ ಜತೆಗೆ ಜನರನ್ನು ಹುಟ್ಟಿಸಿ ಮೊದಲು ಹೇಳಿದನು ಚತುರ್ಮುಖನು; ಇದರಿಂದ ಬಾಳನ್ನು ಬೆಳೆಸಿರಿ; ಇದು ನೀಡಲಿ ನೀವು ನೆಚ್ಚಿದ ಬಯಕೆಗಳನ್ನು.]

ಈಗ ಭಾಷ್ಯಕಾರರು ಈ ಪದ್ಯವನ್ನು ಹೇಗೆಲ್ಲ ವಿವರಿಸಿದ್ದಾರೆ ಎನ್ನುವುದನ್ನು ನೋಡೋಣ.

**ಶಂಕರರ ಭಾಷ್ಯ**

ಅಷ್ಟೇ ಅಲ್ಲ; ಅಧಿಕಾರ ಉಳ್ಳವರೆ ಕರ್ಮ ಮಾಡಬೇಕು - 'ಸಹಯಜ್ಞಾಃ' ...... ಸಹಯಜ್ಞಾಃ = ಯಜ್ಞಗಳಿಂದೊಡಗೂಡಿದ, ಪ್ರಜಾಃ = ಮೂರು ವರ್ಣದ ಜನರನ್ನು, ಸೃಷ್ಟ್ವಾ= ಹುಟ್ಟಿಸಿ, ಪುರಾ = ಮೊದಲು, ಸೃಷ್ಟಿಯ ಆದಿಯಲ್ಲಿ, ಉವಾಚ = ಹೇಳಿದನು, ಪ್ರಜಾಪತಿಃ= ಪ್ರಜೆಗಳನ್ನು ಹುಟ್ಟಿಸಿದವನು. ಅನೇನ = ಈ ಯಜ್ಞದಿಂದ, ಪ್ರಸವಿಷ್ಯಧ್ವಮ್= ಪ್ರಸವವೆಂದರೆ ಬೆಳವಣಿಗೆ ಮತ್ತು ಹುಟ್ಟು; ಅದನ್ನು ಮಾಡಿರಿ; ಏಷಃ= ಈ ಯಜ್ಞವು. ವಃ= ನಿಮಗೆ, ಅಸ್ತು = ಆಗಲಿ, ಇಷ್ಟಕಾಮ. ಧುಕ್ = ಇಷ್ಟವಾದ, ಬಯಸುವಂಥ, ಕಾಮನೆಗಳನ್ನು ಎಂದರೆ ಫಲವಿಶೇಷಗಳನ್ನು, ದೋಗ್ಧಿ = ಈಯುತ್ತದೆ, ಅದರಿಂದ 'ಇಷ್ಟಕಾಮಧುಕ್'.

***** ***** ***** ***** *****

ಆಚಾರ್ಯ ರಾಮಾನುಜರ ಪ್ರಕಾರ ಗೀತೆಯ ಪಾಠ - 'ಸಹ ಯಜ್ಞೈಃ ಪ್ರಜಾಃ ಸೃಷ್ಟ್ವಾ' ಎಂದು. ಅದರಂತೆ ಅವರ ಭಾಷ್ಯದ ವಿವರಣೆ ಹೀಗಿದೆ -

**ರಾಮಾನುಜರ ಭಾಷ್ಯ**

ಎಲ್ಲ ಪುರುಷಾರ್ಥಗಳ ಸಾಧನೆಗಳಲ್ಲಿ ತೊಡಗಿದವರೂ ಯಜ್ಞಶಿಷ್ಟವಾದ ಭಗವತ್ ಪ್ರಸಾದದಿಂದಲೆ ದೇಹಪೋಷಣೆ ಮಾಡಬೇಕು ಎನ್ನುತ್ತಾನೆ; ಜತೆಗೆ ಯಜ್ಞಶಿಷ್ಟವಲ್ಲದ ಆಹಾರದಿಂದ ದೇಹಪೋಷಣೆ ಮಾಡುವವರಿಗೆ ತಟ್ಟುವ ದೋಷವನ್ನು ಹೇಳುತ್ತಾನೆ - 'ಸಹ ಯಜ್ಞೈಃ....' ಎಂದು.

'ಪತಿಂ ವಿಶ್ವಸ್ಯ...' [ಎಲ್ಲ ಜಗತ್ತಿನ ಒಡೆಯ] ಮುಂತಾದ ಶ್ರುತಿವಚನದಿಂದ



'ಪ್ರಜಾಪತಿ' ಶಬ್ದವು ಮುಖ್ಯಪ್ರವೃತ್ತಿಯಿಂದ, ಎಲ್ಲದರ ಒಡೆಯನಾದ, ಜಗದ ಸ್ರಷ್ಟಾರನಾದ, ಜಗದ ಅಂತರ್ಯಾಮಿಯಾದ, ಹಿರಿಯ ಆಸರೆಯಾದ ನಾರಾಯಣನನ್ನೆ ಹೇಳುತ್ತದೆ. ಪುರಾಃ ಸೃಷ್ಟಿಕಾಲದಲ್ಲಿ, ಆ ಭಗವಂತನಾದ 'ಪ್ರಜಾಪತಿ'ಯು, ಅನಾದಿಕಾಲದಿಂದ ಅಂಟಿಕೊಂಡ ಜಡದ ಒಡನಾಟದಿಂದ ಮೈಮರೆತು, ಹೆಸರು - ರೂಪಗಳನ್ನು ಕಳಕೊಂಡು ತನ್ನಲ್ಲಿ ಹುದುಗಿರುವ, ಎಲ್ಲ ಪುರುಷಾರ್ಥಗಳಿಂದ ವಂಚಿತರಾಗಿ ಜಡದಂತೆ ಬಿದ್ದಿರುವ [ಪ್ರಜಾಃ] ಪ್ರಜೆಗಳನ್ನು ಕಂಡು, ತುಂಬುಕರುಣೆಯಿಂದ ಅವರನ್ನು ಮೇಲೆತ್ತಬಯಸಿ, ತನ್ನ ಪೂಜೆಗೆ ಸಾಧನವಾದ ಯಜ್ಞಗಳ ನಿರ್ವಹಣೆಗಾಗಿ [ಯಜ್ಞೈಃ ಸಹ] ಯಜ್ಞಗಳೊಡನೆ, ಅವರನ್ನೂ, ಸೃಷ್ಟ್ವಾ = ಸೃಷ್ಟಿಸಿ, ಹೀಗೆಂದು ಉವಾಚ = ಹೇಳಿದನು. ಅನೇನ = ಈ ಯಜ್ಞದಿಂದ, ಪ್ರಸವಿಷ್ಯಧ್ವಮ್ = ನಿಮ್ಮ ಏಳಿಗೆಯನ್ನು ಮಾಡಿಕೊಳ್ಳಿ. ಏಷ ವಃ = ಈ ನಿಮ್ಮ ಯಜ್ಞವು, ಪರಮಪುರುಷಾರ್ಥವಾದ ಮೋಕ್ಷವೆಂಬ ಬಯಕೆಯನ್ನು ಮತ್ತು ಅದಕ್ಕೆ ಹೊಂದಿಕೆಯಾಗುವ ಬೇರೆ ಬಯಕೆಗಳನ್ನೂ ಈಡೇರಿಸುವಂಥದಾಗಲಿ.

***** ***** ***** ***** *****

ಆಚಾರ್ಯ ಮಧ್ವರು ಮುಂದಿನ ಪ್ರಸಂಗಕ್ಕೆ ಒಂದು ಹೊಸ ತಿರುವನ್ನೀಯುತ್ತಾರೆ. ಇಡಿಯ ಕಥೆಗೆ ಒಂದು ಹೊಸ ಆಯಾಮವನ್ನು ನೀಡುತ್ತಾರೆ. ಒಂದು ವಾಕ್ಯದ ಪುಟ್ಟ ಭಾಷ್ಯದಿಂದ-


ಫೋನ್: 2531003 **-: ಶುಭಾಶಯಗಳೊಂದಿಗೆ :-** ಫೋನ್: 4291212

**ಸಂಕರ್ಷಣ ಡಿಪಾರ್ಟ್‌ಮೆಂಟಲ್ ಸ್ಟೋರ್**

ಭೂವರಾಹ ಕಾಂಪ್ಲೆಕ್ಸ್, ಸೋದೆ ಮಠದ ಹತ್ತಿರ, ವಾದಿರಾಜ ರೋಡ್, ಉಡುಪಿ - 1

**ಎಲ್ಲಾ ತರಹದ ಜಿನಸು ಹಾಗೂ ಸಿಹಿತಿಂಡಿಗಳಿಗೆ ವಿಚಾರಿಸಿರಿ**

**ವಿಶ್ವನಿಧಿ ಟ್ರೇಡರ್ಸ್**

ಭೂವರಾಹ ಕಾಂಪ್ಲೆಕ್ಸ್, ಸೋದೆ ಮಠದ ಹತ್ತಿರ, ವಾದಿರಾಜ ರೋಡ್, ಉಡುಪಿ - 1

**ಎಲ್ಲಾ ತರಹದ ಪೈಂಟ್ಸ್ ಮತ್ತು ಹಾರ್ಡ್‌ವೇರ್ ವಿತರಕರು**

**ಶುಭಾಶಯಗಳು :** ದೂರವಾಣಿ: 2524023

**ಚಕ್ರವರ್ತಿ ಒಪ್ಟಿಶಿಯನ್ಸ್**

**ಶ್ರೀ ರಾಘವೇಂದ್ರ ಮಠದ ಎದುರು**

**ಬಡಗುಪೇಟೆ, ರಥಬೀದಿ, ಉಡುಪಿ – 576 101**

## ಮಧ್ವರ ಭಾಷ್ಯ

ಈ ವಿಷಯದ ಬಗೆಗೆ ಒಂದು ಮೆಚ್ಚುಗೆಯ ಕಥೆಯನ್ನು ಹೇಳುತ್ತಾರೆ. 'ಸಹಯಜ್ಞಾಃ' ಎಂದು

***** ***** ***** ***** *****

ಭಗವಂತನ ಪೂಜಾರೂಪವಾಗಿ ಕರ್ಮಗಳನ್ನು ಮಾಡು ಎಂದು ಅರ್ಜುನನಿಗೆ ಬೋಧಿಸಿದ ಶ್ರೀಕೃಷ್ಣ.

ಆದರೂ ಕೆಲವರಿಗೆ ಸಂಶಯ. ಏನಾದರೂ ಕರ್ಮ ಬಂಧಕವಲ್ಲವೆ? ಬಿಡುಗಡೆಯ ದಾರಿಯಲ್ಲಿ ಸಾಗುವ ಸಾಧಕನಿಗೆ ಕರ್ಮದ ಅಂಟು-ನಂಟು ಬೇಕೆ? ಜ್ಞಾನ ಒಂದಿದ್ದರೆ ಸಾಲದೆ?

ಇಂಥ ಸಂಶಯಾತ್ಮರಿಗಾಗಿ ಮುಂದಿನ ಮಾತು. ಇದೊಂದು ಕರ್ಮದ ಅರ್ಥವಾದ ಏನು ಅರ್ಥವಾದ ಎಂದರೆ?

ಒಂದು ಸಂಗತಿಯನ್ನು ಹೊಗಳುವ ಮೂಲಕ ಅಥವಾ ಅದಕ್ಕಿಂತ ಭಿನ್ನವಾದ ದಾರಿಯನ್ನು ತೆಗಳುವ ಮೂಲಕ ಅದರ ಮಹಿಮೆಯನ್ನು ಉಪಯುಕ್ತತೆಯನ್ನು ಸಾರುವುದು. ಬೇಕಿದ್ದರೆ ಅದಕ್ಕೊಂದು ಇತಿಹಾಸದ ಋಜುವಾತು. ಇತಿಹಾಸವೇ ಆಗಬೇಕಿಲ್ಲ. ಕಥೆ ಕಟ್ಟಿಯೂ ಮಹಿಮೆಯನ್ನು ಸಾರಬಹುದು. ಕಥೆ ಮುಖ್ಯವಲ್ಲ; ಕಥೆಯ ಹಿಂದಿರುವ ಸಂದೇಶ ಮುಖ್ಯ.

ಕೃಷ್ಣ ಅಂಥ ಒಂದು ಕಥೆಯನ್ನು ಹೇಳುತ್ತಾನೆ; ನಡೆದ ಕಥೆಯೋ ಎನ್ನುವಂತೆ. ಅದರ ಹಿಂದಿರುವ ಉದ್ದೇಶವನ್ನು ಮನವರಿಕೆ ಮಾಡಲು ಕೃಷ್ಣನದು ಈ 'ಅರ್ಥವಾದ' ತಂತ್ರ.

ನಾವು ಅರ್ಥವಾದ ಹಾಗೆ ನಟಿಸುತ್ತೇವೆ. ಆದರೆ ಅರ್ಥವಾಗಿರೋಲ್ಲ. ಅಂಥವರಿಗಾಗಿ ಈ 'ಅರ್ಥವಾದ'. ಗಹನವಾದ ಸಂಗತಿಯನ್ನು ಮಕ್ಕಳಿಗೂ ಅರ್ಥವಾಗುವಂತೆ ಹೇಳುವ ವಿಧಾನ. ಶುಗರ್‌ಕೋಟೆಡ್ ಪಿಲ್ ಮೂಲಕ ಔಷಧ ಕುಡಿಸುವ ತಂತ್ರ. ಪಂಚತಂತ್ರದ ಕಥೆಗಳ ಹಾಗೆ. ಈಸೋಪನ ಕಥೆಗಳ ಹಾಗೆ. ಭೀಷ್ಮಾಚಾರ್ಯರ ಶಾಂತಿಪರ್ವದ ಕಥೆಗಳ ಹಾಗೆ.

ಪ್ರಜಾಪತಿ ಮೊದಲು ಪ್ರಜೆಗಳನ್ನು ಸೃಷ್ಟಿಸಿದನಂತೆ ಜತೆಗೆ ಯಜ್ಞಗಳನ್ನು. ಮತ್ತೆ ಮಕ್ಕಳನ್ನು ಕರೆದು ಹೇಳಿದನಂತೆ : 'ಮಕ್ಕಳೇ, ಇದರಿಂದ ಏಳಿಗೆ ಪಡೆಯಿರಿ ಈ ಯಜ್ಞ ನೀವು ಬಯಸಿದ್ದನ್ನೀವ ಕಾಮಧೇನುವಾಗಿ ನಿಮ್ಮನ್ನು ಕಾಪಾಡಲಿ'; ಎಂದು.

47ನೇ ಪುಟಕ್ಕೆ

-: ಶುಭಾಶಯಗಳೊಂದಿಗೆ :-

**ಸದಾನಂದ ಶೇಟ್ ಜ್ಯುವೆಲ್ಲರ್ಸ್**
ಬಡಗುಪೇಟೆ, ಉಡುಪಿ - 576 101.
ಫೋನ್: 2522667; 2522668

**ನ್ಯೂ ಸದಾನಂದ ಶೇಟ್ ಜ್ಯುವೆಲ್ಲರ್ಸ್**
ಎಸ್.ಎಂ.ಎಸ್.ಪಿ. ಕಾಂಪ್ಲೆಕ್ಸ್,
ಉಡುಪಿ.
ಫೋನ್ : 2522866



11ನೇ ಪುಟದಿಂದ

ಯಾರು ಈ ಪ್ರಜಾಪತಿ. ಪ್ರಜಾಪತಿ ನಾರಾಯಣನೂ ಆಗಬಹುದು; ಪ್ರಜಾಪತಿ ಚತುರ್ಮುಖನೂ ಆಗಬಹುದು. ಏಕೆಂದರೆ ಇದೊಂದು ಕಥನ ತಂತ್ರ. ನಾರಾಯಣ ಹೇಳಿದ ಎಂದರೂ ಸರಿಯೆ. ಚತುರ್ಮುಖ ಹೇಳಿದ ಎಂದರೂ ಸರಿಯೆ.

ಹಿರಿಯರು ಮಕ್ಕಳಿಗೆ ಕಥೆ ಹೇಳೋದಿಲ್ಲವೆ : 'ಒಂದೂರಿನಲ್ಲಿ ಒಬ್ಬ ರಾಜನಿದ್ದ...' ರಾಜನ ಹೆಸರು ಏನಾದರೇನು? ಕಥೆಯ ಸಾರಾಂಶ ಮುಖ್ಯ.

ಇಲ್ಲೂ ಅಷ್ಟೆ. ನಾರಾಯಣನೂ ಪ್ರಜೆಗಳನ್ನು ಕರೆದು ಹೇಳಲಿಲ್ಲ. ಚತುರ್ಮುಖನೂ ಹೇಳಲಿಲ್ಲ. ಸೃಷ್ಟಿಯ ಆರಂಭದಲ್ಲಿ. ಜೀವರನ್ನೂ ಅವರು ಮಾಡಬೇಕಾದ ಕರ್ತವ್ಯ ಕರ್ಮಗಳನ್ನು ಸೃಜಿಸಿದ ಭಗವಂತ ಅಥವಾ ಆದಿಜೀವನಾದ ಚತುರ್ಮುಖ ಹೀಗೆ ಆಲೋಚಿಸಿ ಅವುಗಳನ್ನು ಸೃಷ್ಟಿಸಿದ. ಸೃಷ್ಟಿಯ ಮೂಲದಲ್ಲಿ ಇರುವ ಈ ದೈವೀ ಚಿಂತನೆಯನ್ನು, ಈ ದೈವ ಸಂಕಲ್ಪವನ್ನು ಕೃಷ್ಣ ತಂದೆ-ಮಕ್ಕಳ ಸಂಭಾಷಣೆಯ ಕಥೆಯ ರೂಪದಲ್ಲಿ ಅರ್ಜುನನ ಮುಂದಿಟ್ಟ. ಹೇಳಿದವನು ಮಕ್ಕಳ ಪಾಲನೆಯ ಹೊಣೆ ಹೊತ್ತ 'ಪ್ರಜಾಪತಿ'. ಕೇಳಿದವರು ಮಕ್ಕಳು ಇದಕ್ಕಿಂತ ಹಿತವಾದ ಉಪದೇಶ ಬೇರೇನು ಇದ್ದೀತು. ಇದು ಕತೆಯ ಒತ್ತು. ಇದು ಈ ಅರ್ಥವಾದದ ಉದ್ದೇಶ. ಇದು ಸಾರ್ಥಕತೆಯ ವಾದ; ಸಾರ್ಥಕ ವಾದ.

ಈಗ ಒಟ್ಟು ಶ್ಲೋಕದ ಅರ್ಥ ಹೀಗಾಯಿತು.

ಪುರಾ = ಹಿಂದೆ, ಈ ಜಗತ್ತು ಸೃಷ್ಟಿಯಾದ ಆರಂಭದ ಕಾಲದಲ್ಲಿ, ಪ್ರಜಾ + ಪತಿಃ= ಈ

ಶುಭ ಹಾರೈಸುವ

**ಕಲ್ಲಂಕಾರ್ ರತ್ನ ಫ್ಯಾಬ್ರಿಕ್ಸ್**

ಸಂಸ್ಕೃತ ಕಾಲೇಜ್ ಸಂಕೀರ್ಣ
ಉಡುಪಿ – 576 101
ದೂರವಾಣಿ : 5293602

*With Best Compliments from :* Ph.: 2527148, Mob.: 9448239735



**CASSETTE Corner**
Admar Mutt Lane,
Udupi - 576 101.
Branch : CASSETTE CORNER BOMBAY MARKETING 022-25216619
Royal Touch Complex, Opp. Matru Sagar, 50 feet Road, Hanuman Nagar, Bangalore.

ಜೀವಜಾತದ ಸ್ರಷ್ಟಾರನೂ ಪಾಲಕನೂ ಆದ ನಾರಾಯಣ ಅಥವಾ ಚತುರ್ಮುಖ, ಸಹ + ಯಜ್ಞಾಃ = ಯಜ್ಞಗಳಿಂದೊಡಗೂಡಿದ, ಪ್ರಜಾಃ = ಈ ಜೀವಗಳೆಂಬ ಮಕ್ಕಳನ್ನು, ಸೃಷ್ಟ್ವಾ = ಹುಟ್ಟಿಸಿ, ಉವಾಚ = ಹೇಳಿದನು. ಅನೇನ = ನಿಮ್ಮ ಜತೆಗೆ ಸೃಷ್ಟಿಸಿ ನಾನು ನೀಡಿರುವ ಈ ಯಜ್ಞವೆಂಬ ಭಗವದಾರಾಧನಪದ್ಧತಿಯಿಂದ, ಪ್ರಸವಿಷ್ಯಧ್ವಮ್ = ಎತ್ತರಕ್ಕೆ ಬೆಳೆಯಿರಿ ಮತ್ತು ವಂಶವನ್ನು ಬೆಳೆಸಿರಿ. ಏಷಃ = ಈ ಭಗವದರ್ಪಣ ಬುದ್ಧಿಯಿಂದ ಮಾಡುವ ಯಜ್ಞರೂಪವಾದ ಕರ್ಮವು, ವಃ = ನಿಮಗೆ, ಸಾಧಕರಿಗೆ, ಇಷ್ಟ + ಕಾಮ + ಧುಕ್ = ಬಯಸಿದ ಕಾಮನೆಗಳನ್ನು ನೀಡುವಂಥದು, ಅಸ್ತು = ಆಗಲಿ.

ಇಲ್ಲಿ 'ಇಷ್ಟಕಾಮಧುಕ್' ಎನ್ನುವುದು ಒಂದು ಕಾವ್ಯಮಯವಾದ ಉದ್ಗಾರ. 'ಧುಕ್' ಎಂದರೆ ಕೆಚ್ಚಲಿನಿಂದ ಹಾಲು ಸುರಿಸುವಂಥದು. 'ಕಾಮಧುಕ್' ಎಂದರೆ ಹಾಲು ಸುರಿಸಿದಂತೆ ಬಯಸಿದ್ದನ್ನೆಲ್ಲ ಸುರಿಸುವ ಕಾಮಧೇನು. ಈ ಯಜ್ಞವೂ ಅಂಥ ಒಂದು ಕಾಮಧೇನು. ಅಭೀಷ್ಟದ ಮಳೆ ಸುರಿಸುವ ಕಲ್ಪವೃಕ್ಷ. ತನಗಾಗಿ ಮಾಡಿದ ಕರ್ಮ ಬಲೆಯಾಗಿ ಬಂಧಕವಾಗಿ ಕಾಡಿದರೆ ಭಗವಂತನಿಗಾಗಿ ಮಾಡಿದ ಕರ್ಮ ನೀಡದ ಅಭೀಷ್ಟವಿಲ್ಲ. ಆದರಿಂದ ಏನನ್ನು ಬೇಕಾದರೂ ಪಡೆಯಬಹುದು. ಮೋಕ್ಷವನ್ನೂ. ಇದು ಈ ವಿಶೇಷಣದ ಆಶಯ.

ಮುಂದಿನ ಮೂರು ಶ್ಲೋಕಗಳೂ ಇದೇ ಕತೆಯ, ತಂದೆ ಮತ್ತು ಮಕ್ಕಳ ಮಾತುಕತೆಯ ಮುಂದುವರಿಕೆ. ★


*With Best Compliments From :*

Ph.: (0820) 2521001 (S)
2524907 (R)

**APOORVA JEWELLERS**

BADAGUPET, UDUPI - 576101

*A. Suresh Kini*

*With Best Compliments From :*

**SADIYA ELECTRICALS**






Ph.: 2520715 (S)
2527235(R)

ANCHOR
Authorised Dealer

**Ashok S. Poojary**
Licensed Electrical Contractor
Class-1 No. 9509

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಶ್ರೀ ಸುಧಾಸುವಚನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -46 ಮೊಕ್ಕಾಂ: ಫೀನಿಕ್ಸ್

ವೇದದ ಎಲ್ಲಾ ವಾಕ್ಯಗಳಿಂದಲೂ ಭಗವಂತನೇ ಗಮ್ಯ ಎಂಬ ಉಲ್ಲೇಖವನ್ನು ನೋಡಿದ್ದಾಯ್ತು. ಇದರ ಮೇಲೆ ಬಂದ ಪ್ರಶ್ನೆ - ಎಲ್ಲ ವಾಕ್ಯಗಳಿಂದಲೂ ಭಗವಂತನೇ ಗಮ್ಯನಾದರೆ ಪುಣ್ಯ, ಪಾಪ, ಸ್ವರ್ಗ, ನರಕ ಇತ್ಯಾದಿ ಇತರ ವಿಚಾರಗಳು ವೇದಪ್ರತಿಪಾದ್ಯವಲ್ಲವೆಂದಾಯ್ತು. ಪುಣ್ಯ ಪಾಪಾದಿಗಳನ್ನು ವೇದಗಳು ಪ್ರತಿಪಾದಿಸುವುದಿಲ್ಲವೆಂದಾದರೆ ಮತ್ತೆ ಪುಣ್ಯ ಪಾಪಾದಿಗಳೇ ಇಲ್ಲವೆಂದಾಗುತ್ತದೆ. ಯಾಕೆಂದರೆ ಅವು ಪ್ರಮಾಣಾಂತರ ಅಗೋಚರತ್ವಾತ್ ಎಂದು.

ಈ ಪ್ರಶ್ನೆಗೆ ಸಮಾಧಾನವಾಗಿ ಆಚಾರ್ಯರು ಆಪ್ಯತಮಮ್ ಎಂದು 'ತಮಪ್' ಪ್ರಯೋಗಿಸಿದರೆಂದು ಜಯಾರ್ಯರು ಆಚಾರ್ಯರ ಆಂತರವನ್ನು ಪ್ರಕಟಿಸಿದರು.

ಅಮುಖ್ಯವಾಗಿ ಪುಣ್ಯಪಾಪಗಳು ವೇದಪ್ರತಿಪಾದ್ಯಗಳೇ ಆಗಿವೆ. ಆದ್ದರಿಂದ ಪುಣ್ಯಪಾಪಾದಿಗಳೂ ವೇದದಿಂದ ಸಿದ್ಧವಾಗುತ್ತವೆ ಎಂದು.

ಇದೀಗ ಇದರ ಮೇಲೆ ಜಿಜ್ಞಾಸೆಯೇನೆಂದರೆ ಪುಣ್ಯ, ಪಾಪಗಳನ್ನು ವೇದೈಕಸಮಾಧಿಗಮ್ಯವೆಂದು ಏಕೆ ತಿಳಿಯಬೇಕು?

ಕೆಟ್ಟ ಕರ್ಮದಿಂದ ಕೆಟ್ಟ ಫಲವಾಗಬೇಕಾದರೆ ಆ ಮಧ್ಯೆ ಕಾರಕವಾದದ್ದು ಯಾವುದಾದರೂ ಇರಲೇಬೇಕು. ಅದು ಯಾವುದೆಂದರೆ ಅದೇ ಪಾಪ.

ಅದರಂತೆ ಒಳ್ಳೆ ಕರ್ಮ ಮತ್ತು ಒಳ್ಳೆ ಫಲಗಳ ನಡುವೆ ಇರತಕ್ಕದ್ದು ಅದುವೇ ಪುಣ್ಯ. ಎಂಬಿತ್ಯಾದಿ ಯುಕ್ತಿಯಿಂದ ಅನುಮಾನದಿಂದಲೂ ಪುಣ್ಯಪಾಪಗಳ ಸಿದ್ಧಿಯಾಗಬಹುದಲ್ಲಾ? ಅವು ಪ್ರಮಾಣಾಂತರ ಅಗೋಚರ ಎಂದು ಏಕೆ ಭಾವಿಸಬೇಕು? ಎಂದು.

ಹೇಗೆ ನಾವು ವ್ಯವಹಾರದಲ್ಲಿ ಮಧ್ಯೆ ದುಡ್ಡನ್ನಿಟ್ಟುಕೊಂಡು ಕೂಡಿಸುತ್ತೇವೆಯೋ ಹಾಗೆ ಒಳ್ಳೇ ಕೆಲಸ ಮಾಡಿದರೆ ಒಳ್ಳೆಯದಾಗುತ್ತೆ, ಕೆಟ್ಟ ಕೆಲಸ ಮಾಡಿದರೆ ಕೆಟ್ಟದಾಗುತ್ತೆ ಎಂಬುದನ್ನು ಮಧ್ಯೆ ಪುಣ್ಯ ಪಾಪ ಇಟ್ಟುಕೊಂಡು ಕೂಡಿಸುತ್ತೇವೆ ಎಂದು.

ಅಂದರೆ ಒಳ್ಳೇ ಕೆಲಸ ಮಾಡಿದರೆ ಪುಣ್ಯವೆಂಬ ದುಡ್ಡು ಬರುತ್ತೆ. ಒಳ್ಳೆ ದುಡ್ಡು ಬಂದರೆ ಅದರಿಂದ ಒಳ್ಳೆ ಸುಖ ಬರುತ್ತೆ, ಒಳ್ಳೆಯದಾಗುತ್ತೆ ಎಂದು. ಅದರಂತೆ ಕೆಟ್ಟ ಕೆಲಸ ಮಾಡಿದರೆ ದುಡ್ಡು ಹೋಗಿ ಕೆಟ್ಟದಾಗುತ್ತೆ, ದುಃಖ ಬರುತ್ತೆ ಎಂದು.

ಒಂದು ವೇಳೆ ಹಣ, ದುಡ್ಡು ಎಂಬ ಪದಾರ್ಥವೇ ಇಲ್ಲದೇ ಹೋದರೆ ಒಳ್ಳೇ ಕೆಲಸದಿಂದ ಒಳ್ಳೆಯದಾಗುವುದನ್ನಾಗಲೀ, ಕೆಟ್ಟ ಕೆಲಸದಿಂದ ಕೆಟ್ಟದಾಗುವುದನ್ನಾಗಲೀ ಹೇಗೆ



ಕೂಡಿಸಬೇಕು?

ಅದಕ್ಕೋಸ್ಕರ ಮಧ್ಯದಲ್ಲಿ ದುಡ್ಡು ಎಂಬುದು ಹೇಗೆ ಇದೆಯೋ ಅದರಂತೆ ಡಿವೈನ್ ದುಡ್ಡಿಗೆನೇ ಪುಣ್ಯಪಾಪ ಎನ್ನುವುದು ಎಂದು ಪುಣ್ಯಪಾಪವನ್ನೂ ಯುಕ್ತಿಯಿಂದ ಸಾಧಿಸಬಹುದಲ್ಲಾ?

ಪುಣ್ಯ ಪಾಪ ವೇದ ಹೊರತು ಬೇರಾವುದರಿಂದಲೂ ಸಿದ್ಧವಾಗದು. ತಸ್ಯ ಪ್ರಮಾಣಾಂತರ ಅಗೋಚರತ್ವಾತ್ ಎಂದು ಟೀಕಾರ್ಯರು ಆಚಾರ್ಯರ ಭಾವವನ್ನು ಪ್ರಕಟಿಸಿದ್ದು ಸರಿಯಾ? ಎಂಬುದೊಂದು ಜಿಜ್ಞಾಸೆ ಇಲ್ಲಿ.

ಈ ಪ್ರಶ್ನೆ, ಈ ನಿರೂಪಣೆ ಮೇಲ್ನೋಟಕ್ಕೆ ಚೆಂದವಾಗಿ ಕಂಡರೂ ಇದು ಗಟ್ಟಿಯಿಲ್ಲ. ಜೋರಾಗಿ ಉಸಿರಾಡಿದರೆ ಈ ವಾದ ಬಿದ್ದು ಬೀಳುತ್ತೆ.

ಯಾಕೆಂದರೆ ಈ ವಾದ ನಿಲ್ಲಬೇಕಾದರೆ ಮೊದಲು ದುಡ್ಡು ಅಂದರೆ ಏನು? ಒಳ್ಳೆಯದು ಅಂದರೆ ಏನು? ಒಳ್ಳೆಯದಕ್ಕೂ ದುಡ್ಡಿಗೂ ಸಂಬಂಧ ಏನು?

ಹಾಗೇ ಕೆಟ್ಟದಕ್ಕೂ ಹಣಾಭಾವಕ್ಕೂ ಸಂಬಂಧ ಏನು? ಇಷ್ಟೆಲ್ಲಾ ಸಿದ್ಧವಾದರೇನೇ ಆ ಪಂಚಾಂಗದ ಮೇಲೆ ಈ ವಾದ ನಿಲ್ಲುತ್ತೆ. ಆದರೆ ಇದೆ ಸಿದ್ಧವಾಗುವುದಿಲ್ಲ ನಿಲ್ಲುವುದಲ್ಲ ನೋಡಿ.

ಯಾಕೆಂದರೆ ಸರಿಯಾಗಿ ವಿಮರ್ಶೆ ಮಾಡಿದರೆ ದುಡ್ಡು ಎಂಬ ಪದಾರ್ಥವೇ ಲೋಕದಲ್ಲಿ ಇಲ್ಲ. ಎಲ್ಲೂ ಇಲ್ಲ. ಅಲ್ಲಾ ಹತ್ತು ರೂಪಾಯಿ, ನೂರು ರೂಪಾಯಿ, ಸಾವಿರ ರೂಪಾಯಿ ನೋಟೆಲ್ಲಾ ಇದೆಯಲ್ಲಾ? ಮತ್ತೆ ದುಡ್ಡು ಎಂಬುದೇ ಇಲ್ಲ ಎಂದು ಹೇಗೆ ಹೇಳುತ್ತೀರಿ ಎನ್ನಬಹುದು ನೀವು.

ಹೌದು, ಅದು ನೋಟು ಹೊರತು ದುಡ್ಡು ಅಲ್ಲವಲ್ಲಾ? ನೋಟೇ, ನಾಣ್ಯವೇ ದುಡ್ಡಾದರೆ ನಾಳೆ ದಿವಸ ಕ್ಷಣಾರ್ಧದಲ್ಲಿ ಆ ನೋಟುಗಳನ್ನು ಬ್ಯಾನ್ ಮಾಡಿದರೆ ಅದು ದುಡ್ಡಲ್ಲವಾಗುತ್ತದಲ್ಲಾ? ಅದು ಹೇಗೆ?

ಹಾಗಿದ್ದರೆ ದುಡ್ಡೆಂದರೆ ಯಾವ ಕಾಗದದ ತುಂಡನ್ನು ಅಥವಾ ನಿರ್ದಿಷ್ಟ ಕಾಗದವನ್ನು ಯಾವ ಲೋಹದ ಚೂರನ್ನು ಸರಕಾರ ಅಥವಾ ಸರ್ವಜನರು ದುಡ್ಡೆಂದು ಕರೆಯುತ್ತಾರೋ ಅದೇ ದುಡ್ಡು ಎಂದಂತಾಯ್ತು.

ಹಾಗಿದ್ದರೆ ದುಡ್ಡು ಎಂದರೆ ದುಡ್ಡುತ್ವೇನ ಸರ್ವಜನ ಅಂಗೀಕಾರ, ಸರ್ವಾಂಗೀಕಾರ ಅಥವಾ ಸಾಮೂಹಿಕ ಭ್ರಮೆ, ಅಧಿಕೃತಭ್ರಮೆ, ಅಥವಾ ಸಮೂಹಸನ್ನಿ ಎಂದಾಯ್ತು.

ದುಡ್ಡು ಎಂದರೆ ದುಡ್ಡು ಎಂದು ಕರೆಯಲ್ಪಡುವುದು ಎಂದಾಯ್ತು ಹೊರತು, ದುಡ್ಡೆಂಬ ಪ್ರತ್ಯೇಕ ವಸ್ತು ಸಿದ್ಧವಾಗಿಲ್ಲವಲ್ಲ?

ನಾವು ನೋಡುವುದು, ಹಿಡಿಯುವುದು ನೋಟು ನಾಣ್ಯಗಳನ್ನು ಹೊರತು ದುಡ್ಡನ್ನಲ್ಲವೆಂದಾಯ್ತಲ್ಲವೇ?

ದುಡ್ಡು ನೋಟು ನಾಣ್ಯಗಳಿಗಿಂತಲೂ ದೊಡ್ಡದು. ಅದು ಎಲ್ಲಿದೆ? ನೋಟೇ ದುಡ್ಡಾಗಿದ್ದರೆ ಒಂದೇ ನೋಟಿಗೆ ಒಂದು ದಿನ ಬೆಲೆ ಜಾಸ್ತಿ ದುಡ್ಡು ಜಾಸ್ತಿ ಮತ್ತೊಂದು ದಿನ ಬೆಲೆ ಕಡಿಮೆ ಅದು ಏನು?

ನೋಟು ಇದ್ದ ಹಾಗೆ ಇದ್ದರೂ ದುಡ್ಡು ಹೆಚ್ಚು ಕಡಿಮೆಯಾಗುವುದಿಲ್ಲವಾ? ಹಾಗಿದ್ದರೆ ದುಡ್ಡು ಬೇರೆ ನೋಟು ಬೇರೆ ನಾಣ್ಯ ಬೇರೆ ಎಂದಂತಾಯ್ತು. ಹಾಗಿದ್ದರೆ ಆ ಬೇರೆಯಾದ ದುಡ್ಡು ಎಲ್ಲಿದೆ?

ಅಲ್ಲ ಮನುಷ್ಯನಿಗೆ ಏನು ಆವಶ್ಯಕತೆ ಎಂಬುದಿದೆ ಅದನ್ನೇ ದುಡ್ಡು ಎಂದು ಕರೆಯುವುದು. ದುಡ್ಡೆಂದರೆ ಬೇರೇನಲ್ಲ ಎನ್ನುವುದಾದರೆ ಹಾಗಿದ್ದರೆ ದುಡ್ಡಿನ ಆವಶ್ಯಕತೆಯಿದೆಯೆಂದರೇನರ್ಥ?

ಹಾಗಿದ್ದರೆ ದುಡ್ಡಿನಿಂದ ಸುಖವಾಗುತ್ತದೆಂದರೆ ಆವಶ್ಯಕತೆಯಿಂದ ಸುಖವಾಗುತ್ತದೆಂದರ್ಥವೇ?

ಅವಶ್ಯಕತೆಯಿಲ್ಲವೆಂದರೆ ದುಃಖವೆಂದರ್ಥವೇ? ಅನಾವಶ್ಯಕವಾಗಿಯೂ ದುಃಖ ಬಂದು ಬಿಡುತ್ತಾದಲ್ವಾ? ಅದು ಏನು?

ಹಾಗಿದ್ದರೆ ಇನ್ನೊಬ್ಬನಿಗೆ ನಾವು ಅವಶ್ಯಕವಾಗಿರುವುದೇ ದುಡ್ಡು ಎಂದರ್ಥವಾಯಿತು ಹೊರತು ದುಡ್ಡೆಂಬ ಅತಿರಿಕ್ತ ಮೂರ್ತ ಪದಾರ್ಥಸಿದ್ಧವಾಗಲಿಲ್ಲವಲ್ಲಾ?

ಮತ್ತೂ ಕೂಡ ಪ್ರಾಣಿಗಳ ಬಳಿ ದುಡ್ಡುಂಟೋ ಇಲ್ಲವೋ? ಉಂಟು ಅಂದರೆ ಎಲ್ಲಿದೆ? ಯಾವ ಬ್ಯಾಂಕಿನಲ್ಲಿದೆ?

ಇಲ್ಲವೆಂದರೆ ಅವುಗಳಲ್ಲಿ ಪರಸ್ಪರ ಆವಶ್ಯಕತೆಯಿರುವುದಿಲ್ಲವೆ? ಪರಸ್ಪರ ವ್ಯವಹಾರವಿರುವುದಿಲ್ಲವೇ? ದುಡ್ಡಿಲ್ಲದೆನೂ ವ್ಯವಹಾರ ಹೇಗೆ ಬಂತು?

ಕಿಂಚ ಧನಧಾನ್ಯಸಂಪದಭಿವೃದ್ಧಿ ಎನ್ನುವಾಗ ವಿಪುಲ ನೋಟು ನಾಣ್ಯವೋ ಹೇಗೆ?

ಅಪಿಚ ಮನಿ ಮಾರ್ಕೇಟ್ ಟ್ರೆಟ್ ಇದೆ ಎಂದರೇನರ್ಥ?

ವ್ಯವಹಾರವಾಗಬೇಕಾದರೆ ಮಧ್ಯೆ ದುಡ್ಡು ಎಂಬುದು ಬೇಕು ಅನ್ನುವುದಾದರೆ ದುಡ್ಡಿನದ್ದೇ ವ್ಯವಹಾರ ಮಾಡುತ್ತರಲ್ಲಾ?

ಶುಭಾಶಯಗಳು :

**ಭಾರತ ಮಾತೆಯು ಸಸ್ಯಶ್ಯಾಮಲೆಯಾಗಿ ಶೋಭಿಸಲು ಗಿಡಮರ ಬೆಳೆಸಿ ಸಹಕರಿಸಿರಿ.**
**ಸೌಂದರ್ಯ, ಸ್ವಚ್ಛತೆ ಮತ್ತು ಪರಿಸರ ನೈರ್ಮಲ್ಯಕ್ಕೆ ಕಂಕಣಬದ್ಧರಾಗಿ**

**ಹೋಟೆಲ್ ರಸಗಂಗಾ**

**ಕೋರ್ಟ್‌ರೋಡ್, ಉಡುಪಿ – 576 101**



ಅಲ್ಲಿ ಮತ್ತೊಂದು ದುಡ್ಡು ಎಂಬುವುದಿದೆಯಾ? ದುಡ್ಡೂ ಕೂಡ ಅಗ್ಗ ದುಬಾರಿ ಆಗುವುದಿದೆಯಾ?

ಆ ದೇಶದಲ್ಲಿ ದುಡ್ಡು ತುಂಬ ಅಗ್ಗವಂತೆ, ಆ ದೇಶದಲ್ಲಿ ತುಂಬಾ ತುಟ್ಟಿಯಂತೆ ಎಂಬುದಿದೆಯಾ?

ಇನ್ನೂ ಸೋಜಿಗವೆಂದರೆ ಸದ್ಯೋಭವಿಷ್ಯದಲ್ಲಿ ಲೋಕದಲ್ಲಿ ದುಡ್ಡೆಂಬುದನ್ನೇ ಕ್ಯಾನ್ಸಲ್ ಮಾಡಿ ಬಿಡಬಹುದು ಗೊತ್ತಾ?

ಈಗಾಗಲೇ ವಿವಿಧ ಕಾರ್ಡುಗಳು ಬಂದು ಪರದೇಶಗಳಲ್ಲಿ ಅರ್ಧಕ್ಕರ್ಧ ದುಡ್ಡೆಂಬುದು ರದ್ದಾಗಿದೆ. ಇನ್ನು ಮುಂದೆ ದುಡ್ಡನ್ನೇ ಕ್ಯಾನ್ಸಲ್ ಮಾಡಿ ದುಡ್ಡಿನ ಅಕೌಂಟ್ಸ್ ಮಾತ್ರ ಇಡುವುದಂತೆ!

ಹಾಗಾದಾಗ ದುಡ್ಡು ಎಂಬುದು ಎಲ್ಲಿ ಬಂತು ನೋಡಿ? ಎಲ್ಲಿ ಹೋಯ್ತು ನೋಡಿ! ಹಾಗಿದ್ದರೆ ಇದೀಗ ದುಡ್ಡು ಅಂದರೆ ಏನು?

ಹೀಗೆ ವಿಚಾರ ಮಾಡುತ್ತಾ ಮಾಡುತ್ತಾ ಹೋದರೆ ದುಡ್ಡು ಎಂಬ ಪದಾರ್ಥವೇ ಸಿದ್ಧವಾಗುವುದಿಲ್ಲವಲ್ಲ?

ಹಾಗಿರುವಾಗ ದುಡ್ಡಿನಂತೆ ಪುಣ್ಯಾಪುಣ್ಯಗಳನ್ನು ಸಿದ್ಧಪಡಿಸುತ್ತೇವೆ ಎಂಬ ವಾದ ಎಲ್ಲಿಗೆ ಬಂತು?

ಆದ್ದರಿಂದಲೇ ನೋಡಿ ದುಡ್ಡು ಅಂದರೆ ಏನೆಂದು ತಲೆ ಕೆಡಿಸಿಕೊಳ್ಳಲು ಹೋಗಬಾರದು. ಅದು ಏನೆಂದು ಹೇಳಲು ಬರುವುದಿಲ್ಲ. ಅದು ಆಗುವುದಲ್ಲ. ಹೋಗುವುದಲ್ಲ. ಕೇವಲ ದುಡ್ಡು ಸಂಪಾದನೆ ಮಾತ್ರ ಮಾಡಬೇಕು.

ಅದರಂತೆ ಪುಣ್ಯ ಪಾಪ ಅಂದರೆ ಏನೆಂದು ಹೇಳಲು ಬರುವುದಿಲ್ಲ. ಅದು ವೇದೈಕ ಸಮಧಿಗಮ್ಯ. ಅದು ಏನೆಂದು ಕೆದಕಲು ಹೋಗಬಾರದು. ಅದು ಪ್ರಮಾಣಾಂತರ ಅಗೋಚರ. ವೇದದಿಂದ ಮಾತ್ರ ತಿಳಿಯತಕ್ಕದ್ದು.

ಪುಣ್ಯ ಸಂಪಾದನೆ ಮಾಡಬೇಕು ಹೊರತು, ಅದು ಏನೆಂದು ಕೆದಕಲು ಹೋದರೆ ಅದು ದುಷ್ಕರ. ಅದು ಹೇಗೆಂದರೆ ಧರ್ಮಸ್ಯ ಚರಣಂ ಶ್ರೇಯಃ ಧರ್ಮಜ್ಞಾನಂ ತು ದುಷ್ಕರಮ್

*With Best Compliments from* ✆ 2535075

ESTD : 1959

**SAADHANA DIGITAL COLOR LAB**

Kamakshi Complex, Opp. : Sanskrt College, Udupi-576 101

**SAADHANA DIGITAL STUDIO**

**Opp. : Sanskrit College UDUPI - 576 101**
**✆ : Studio : 2523775 Resi. : 2537776**

ಎಂದಂತೆ.

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ಎಂದಂತೆ. ಧನಸ್ಯ ಆರ್ಜನಂ ಶ್ರೇಯಃ ಧನಜ್ಞಾನಂತುದುಷ್ಕರಮ್ ಎಂದಂತೆ.

ಅದರಂತೆ ಪುಣ್ಯಸ್ಯ ಆರ್ಜನಂ ಶ್ರೇಯಃ ಪುಣ್ಯಜ್ಞಾನಂ ತು ದುಷ್ಕರಮ್.

ಇದೇ ರೀತಿ ಒಳ್ಳೇ ಕೆಲಸ ಮಾಡುವುದು ಒಳ್ಳೇದು. ಆದರೆ ಒಳ್ಳೇದು ಅಂದರೆ ಏನು ಎಂಬುದು ತಿಳಿದುಕೊಳ್ಳುವುದು ಕಷ್ಟ ಎಂಬುವುದನ್ನೂ ಮುಂದಿನ ಸಂಚಿಕೆಯಲ್ಲಿ ನೋಡೋಣವಂತೆ. ವಿಶ್ಲೇಷಿಸೋಣವಂತೆ.

ತನ್ಮೂಲಕ ಜಯಾರ್ಯರ ಪ್ರಮಾಣಾಂತರ ಅಗೋಚಾರತ್ವಾತ್ ಎಂಬ ಪದದ ಒಳ ಗುಟ್ಟನ್ನು ಇನ್ನಷ್ಟು ಬಿಡಿಸೋಣವಂತೆ.


**ಹಾರ್ದಿಕ ಶುಭಾಶಯಗಳೊಂದಿಗೆ :**

**ಕೆ. ವಿ. ಪೈ ಆ್ಯಂಡ್ ಸನ್ಸ್**

ರಥಬೀದಿ, ಉಡುಪಿ - 576 101.

**ದೂರವಾಣಿ : 2520818**


## ಅಭಿನಂದನೆ

**ಕರ್ನೂಲಿನ ಯುವ ವಿದ್ವಾಂಸರಾದ ಪಗಡಾಲ್ ಆನಂದತೀರ್ಥಾಚಾರ್ ಇವರು ತಿರುಪತಿ ತಿರುಮಲ ದೇವಸ್ಥಾನದ ದಾಸ ಸಾಹಿತ್ಯ ಪ್ರಾಜೆಕ್ಟ್‌ನ ಮುಖ್ಯ ಅಧಿಕಾರಿಗಳಾಗಿ ನಿಯುಕ್ತರಾಗಿದ್ದಾರೆ. ಶ್ರೀಯುತರು ಪ್ರಸಿದ್ಧ ವಿದ್ವಾಂಸರಾಗಿದ್ದು ವಾಲಿಕೊಂಡ ನರಸಿಂಹಾಚಾರ್ಯರಲ್ಲಿ 16 ವರ್ಷಗಳ ಕಾಲ ವೇದಾಂತ ವಿದ್ಯಾಭ್ಯಾಸವನ್ನು ಮಾಡಿ ಹೊರಗಿನ ಲೌಕಿಕ ವಿದ್ಯೆಯಲ್ಲಿಯು ಎಂ. ಎ., ಬಿ. ಎಡ್. ಪದವಿಯನ್ನು ಪ್ರಕಾಶನ ಸಂಸ್ಥೆಯಿಂದ ಶ್ರೀಮದ್ ಭಾಗವತ ಮೊದಲಾದ ಕೃತಿಯನ್ನು ತೆಲುಗು ಭಾಷೆಯಲ್ಲಿ ಪ್ರಕಟಿಸಿರುತ್ತಾರೆ. ಶ್ರೀಯುತರು ಆಂಧ್ರಪ್ರದೇಶ ಘಟಕದ ವಿಶ್ವಹಿಂದು ಪರಿಷತ್ತಿನ ಮುಖ್ಯ ಧರ್ಮಪ್ರಚಾರಕರಾಗಿಯೂ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರ ನೇತೃತ್ವದಲ್ಲಿ ದಾಸ ಸಾಹಿತ್ಯ ಪ್ರಾಜೆಕ್ಟ್ ಉತ್ತಮವಾದ ಸೇವೆಯನ್ನು ಸಲ್ಲಿಸಲಿ ಎಂದು ಈ ಸಂದರ್ಭದಲ್ಲಿ ಸುಗುಣ ಬಳಗವು ಅಭಿನಂದಿಸುತ್ತದೆ.**



# ಸೆಲ್‌ಫೋನ್ ಸಂದೇಶ

ಈ ಆತ್ಮ, ಈ ಸೋಲ್ ಸೆಲ್‌ಫೋನ್ ಇದ್ದಂತೆ.

ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ಎಂದು ಗೀತೆ ನಿರ್ದೇಶಿಸಿದಂತೆ ಪ್ರತಿನಿತ್ಯ ಮನಸ್ಸೆಂಬ ವಯರಿನ ಮುಖಾಂತರ ಆತ್ಮನೆಂಬ ಸೆಲ್‌ಫೋನ್ ಭಗವಂತನಲ್ಲಿ ಪ್ಲಗ್ ಆದಾಗ ಆತ್ಮ ಭಗವಂತನಲ್ಲಿ ಏಕಾಗ್ರನಾದಾಗ ಭಗವಚ್ಛಕ್ತಿ ಈ ಆತ್ಮನಲ್ಲಿ ಆವಾಹಿತವಾಗುತ್ತದೆ.

ಆತ್ಮ ರೀಚಾರ್ಜ್ ಆಗುತ್ತಾನೆ. ರೀಫ್ರೆಶ್ ಆಗುತ್ತಾನೆ.

ಸರ್ವದಾ ಭಗವಂತನ ಸಂದೇಶ ಈ ಆತ್ಮನಲ್ಲಿ ಪ್ರತಿಧ್ವನಿಸುತ್ತಿರುತ್ತದೆ. ಸೆಟ್ಲೈಟ್ ಸಂದೇಶ ಕೇಳುತ್ತಿರುತ್ತದೆ. ಎಸ್ಸೆಮ್ಮೆಸ್ ಮೂಡುತ್ತಿರುತ್ತದೆ.

ರೀಚಾರ್ಜ್ ಮಾಡದಿದ್ದರೆ ಸೆಟ್ಲೈಟ್‌ನಿಂದ ಡಿಸ್ಕನೆಕ್ಟ್ ಆದ ಕಾರಿನಂತೆ ಅಥವಾ ರೀಚಾರ್ಜಾಗದ ಸೆಲ್‌ಫೋನಿನಂತೆ ಕಿರಿಕಿರಿ ಆಗುತ್ತಿರುತ್ತಾನೆ. ಕಳವಳವಾಗುತ್ತಿರುತ್ತಾನೆ. ಕಕ್ಕಾಬಿಕ್ಕಿಯಾಗುತ್ತಾನೆ.

ಆವಾಗ ಈ ಆತ್ಮ ಮಕ್ಕಳ ಕೈಗೊಂಬೆ ಸೆಲ್‌ಫೋನಿನಂತಾಗುತ್ತಾನೆ. ಬರೇ ಸಪ್ಪಳ ಮಾತ್ರ ಕೇಳುತ್ತಿರುತ್ತಾನೆ.

ಚಾರ್ಜಾಗದ ನಿಸ್ತಂತು ದೂರವಾಣಿಯಲ್ಲಿ ಮಾತನಾಡುವಾಗ ಹೆಜ್ಜೆಹೆಜ್ಜೆಗೂ ತಾಳ್ಮೆ ತಪ್ಪುತ್ತಿರುವಂತೆ ಜೀವನದಲ್ಲಿ ಹೆಜ್ಜೆಹೆಜ್ಜೆಗೂ ತಾಳ್ಮೆ ತಪ್ಪುತ್ತಿರುತ್ತಾನೆ.

ಆದ್ದರಿಂದ ಪ್ರತಿಯೊಬ್ಬರೂ ಈ ಸೋಲ್, ಈ ಆತ್ಮನೆಂಬ ಸೆಲ್ಲನ್ನು ಪ್ರತಿನಿತ್ಯ ಚಾರ್ಜ್ ಮಾಡುತ್ತಿರಬೇಕು.

ಭಗವಂತನನ್ನು ಪ್ರತಿನಿತ್ಯ ಏಕಾಗ್ರವಾಗಿ ಧ್ಯಾನಿಸುತ್ತಿರಬೇಕು.

ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ಎಂಬ ಸಂದೇಶವನ್ನು ಆಚರಿಸುತ್ತಿರಬೇಕು.



ಇದುವೇ ಭಗವದ್ಗೀತೆಯ ಮುಖ್ಯ ಸಂದೇಶ. ಏಕಾಗ್ರತೆಯ ಸಂದೇಶ. ಸೆಲ್‌ಫೋನ್ ಸಂದೇಶ. ಮನಃಶಾಂತಿ ಸಂದೇಶ.

ನಮಗೆ ಗೊತ್ತು ಇಷ್ಟು ಹೇಳುತ್ತಿರಲು ಇದೀಗ ನೀವು ಪ್ರಶ್ನೆ ಕೇಳುತ್ತೀರಿ.

ಅದು ಹೇಗೆ ಏಕಾಗ್ರತೆ, ಮನಃಶಾಂತಿ ಎಂಬುದು ಸೆಲ್‌ಫೋನ್ ಸಂದೇಶ ಆಗಲಿಕ್ಕೆ ಸಾಧ್ಯ? ಎಂದು.

ಯಾಕೆಂದರೆ ಏಕಾಗ್ರತೆ, ಮನಃಶಾಂತಿ ಎಂಬುದನ್ನು ನಾಶಮಾಡಿದ್ದೇ ಫೋನ್. ತತ್ರಾಪಿ ಏಕಾಗ್ರತೆ ಎಂಬುದನ್ನು ಸರ್ವನಾಶ ಮಾಡುತ್ತಿರುವುದೇ, ಸಂಪೂರ್ಣ ನಾಶ ಮಾಡುತ್ತಿರುವುದೇ ಸೆಲ್‌ಫೋನ್.

ಸೆಲ್‌ಫೋನ್ ಏಕಾಗ್ರತೆಯನ್ನು ಎಷ್ಟು ನಾಶಮಾಡುತ್ತಿದೆಯೆಂದರೆ ಸೆಲ್‌ಫೋನ್‌ನನ್ನು ಮನೆಯಲ್ಲಿಟ್ಟು ಬಂದರೂ ಅದು ಟೆನ್‌ಷನ್ ಕೊಡುತ್ತದೆ. ಮನಸ್ಸನ್ನು ವ್ಯಗ್ರಗೊಳಿಸುತ್ತದೆ.

ಸೆಲ್‌ಫೋನಿನಿಂದಾಗಿ ಒಂದೈದು ನಿಮಿಷನೂ ಏಕಾಗ್ರಮನಸ್ಸಿನಿಂದ ಏನನ್ನೂ ಮಾಡಲಿಕ್ಕಾಗುವುದಿಲ್ಲ.

ಅಂತಹ ಸೆಲ್‌ಫೋನ್ ಏಕಾಗ್ರತೆಯ ಸಂದೇಶಕ್ಕೆ ದೃಷ್ಟಾಂತವಾಗಲು ಹೇಗೆ ಸಾಧ್ಯ? ಎಂದು.

ಹಾಗಿದ್ದರೆ ಉತ್ತರ - ಸಿ ಅಲ್ಲ. ಎಸ್ ಎಂದು. ಎಸೆಯಲು ಎಂದು.

ಈ ಮಟ್ಟಿಗೆ ಇದು ವ್ಯತಿರೇಕದೃಷ್ಟಾಂತ ಎಂದು ತಿಳಿಯೋಣವಂತೆ.

ಆದರೆ ಆತ್ಮನನ್ನು ರೀಚಾರ್ಜ್ ಮಾಡುವುದನ್ನು ಮಾತ್ರ ಮರೆಯದಿರೋಣವಂತೆ.

**ಅಮೇರಿಕಾದ ಫೀನಿಕ್ಸ್‌ನ ಶ್ರೀವೇಂಕಟಕೃಷ್ಣ ಕ್ಷೇತ್ರದಲ್ಲಿ ಗೀತಾಜಯಂತಿ ಮಹೋತ್ಸವದಲ್ಲಿ ಪ್ರವಚನ ನೀಡುತ್ತಾ**

**ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು**

**ನೀಡಿದ ಸಂದೇಶದ ಸಾರ.**

ಸ್ಥಾಪನೆ : 1977 ದೂರವಾಣಿ : 2521607

**ಜನತಾ ಕೋ - ಆಪರೇಟಿವ್ ಬ್ಯಾಂಕ್ ಲಿ. ಉಡುಪಿ**

★ ಸಂಜೆ ಮತ್ತು ಭಾನುವಾರ ಬ್ಯಾಂಕಿಂಗ್ ಸೇವೆ

★ ಠೇವಣಿಗಳಿಗೆ 1% ಅಧಿಕ ಬಡ್ಡಿ

**ಸ್ನೇಹಮಯ ಸೌಹಾರ್ದ ಸೇವೆಯೇ ಬ್ಯಾಂಕಿನ ಧ್ಯೇಯ**

# ಶವೋದ್ಯಮ?

ಹಿಂದೂ ಸನ್ಯಾಸಿಗಳಿಗೂ, ಕ್ರೈಸ್ತ, ಮುಸ್ಲಿಂ ಬಾಂಧವರಿಗೂ ತಲೆಬಿಸಿಯಾಗುವ ಸುದ್ದಿಯೊಂದು ಇತ್ತೀಚೆಗೆ ಸಿಡಿದಿದೆ. ಗೊತ್ತಾ?

ಅದೇನೆಂದರೆ ಇತ್ತೀಚೆಗೆ ಕಳ್ಳರು ಮಧ್ಯೆರಾತ್ರಿ ಸ್ಮಶಾನಗಳಿಗೆ ನುಗ್ಗಿ ಹೆಣ ಕದಿಯಲು ಶುರು ಮಾಡಿದ್ದಾರಂತೆ ನೋಡಿ!

ಕದ್ದು ಬೇರೆ ಬೇರೆ ಪಾರ್ಟುಗಳನ್ನು ಮಾರಿ ಹಣ ಮಾಡುವ ಧಂಧೆ ದಿನೇದಿನೇ ಬೆಳೆಯುತ್ತಿದೆಯಂತೆ ರೀ!

ಹೆಣಗಳನ್ನು ಮೆಲ್ಲನೆ ಸುಲಭವಾಗಿ ಹಣವಾಗಿ ಪರಿವರ್ತಿಸುವ ಉದ್ಯಮವಂತೆ ರೀ!

ಬ್ರೇಕಿಂಗ್ ನ್ಯೂಸ್!

ಕೂದಲು ಕದ್ದದ್ದಾಯ್ತು, ಕಿಡ್ನಿ ಕದ್ದದ್ದಾಯ್ತು, ಇದೀಗ ಹೆಣಗಳ ಮೂಳೆ ಮೂಳೆಗಳನ್ನು ಮಾರುವ, ಅಸ್ಥಿಯಿಂದ ಆಸ್ತಿಮಾಡುವ, ಹೆಣಗಳಿಂದ ಶವಗಳಿಂದ ಹಣವಶಮಾಡುವ ಬ್ಯುಸಿನೆಸ್ ಮೂಲೆ ಮೂಲೆಗಳಲ್ಲಿ ಮಗುಮ್ಮಾಗಿ ಹಬ್ಬುತ್ತಿದೆಯಂತೆ.

ಇದೀಗ ಹೆಣಗಳಿಗೆ ಭಾರೀ ಡಿಮ್ಯಾಂಡೋ ಡಿಮಾಂಡಂತೆ ರೀ.

ಬದುಕಿರುವ ಮನುಷ್ಯನಕ್ಕಿಂತಲೂ ಸತ್ತ ಮನುಷ್ಯನಿಗೆ ಡಿಮ್ಯಾಂಡ್ ಜಾಸ್ತಿಯಂತೆ ರೀ. ಹೆಣಕ್ಕೂ ಒಂದು ಕಾಲಾರೀ.

ಅಲ್ಲಾ ಇದೀಗ ಸತ್ತರೂ ಸೇಫ್ಟಿ ಇಲ್ಲಾಂತಾಯಿತಲ್ಲಾ? ಏನು ಮಾಡೋದು? ಸತ್ತರೂ ತಲೆ ಬಿಸಿ ತಪ್ಪಲಿಲ್ಲವಲ್ಲಾ?

ನೀನಾರಿಗಾದೆಯೋ ಎಲೆ ಮಾನವಾ ಎಂಬ ಕಾಲ ವಾಪಾಸು ಹೋತು. ಇನ್ನು ಹೆಣಕ್ಕಾಗಿ ಕೊಲ್ಲುವ ಕಾಲ ಬಂತೋ?

ಅದಕ್ಕೆಂದೇ ಹಿಂದಿನವರು ಚಿಕ್ಕಂದಿನಿಂದಲೇ ಭೂತಪ್ರೇತ ಭಯ ಹುಟ್ಟಿಸುತ್ತಿದ್ದದ್ದು ಕಾಣುತ್ತೆ.

ಏನೇ ಆಗಲಿ ಒಂದು ಲೆಕ್ಕದಲ್ಲಿ ಇದರಿಂದ ಇನ್ನೊಂದು ಬ್ಯುಸಿನೆಸ್ ಶುರುವಾಗಬಹುದು.

ಎಲ್ಲೆಲ್ಲಿ ಏನೇನು ಅನರ್ಥ ಆಗುತ್ತೋ ಅಲ್ಲಲ್ಲಿ ಮತ್ತೊಂದು ಹೊಸ ಬ್ಯುಸಿನೆಸ್ ಹುಟ್ಟಿಕೊಳ್ಳುತ್ತೆ. ಉದಾ - ಭಯೋತ್ಪಾದನಾ ಇನ್‌ಶೂರೆನ್ಸ್!

ಅಂದರೆ ಇದಕ್ಕೆ ಎರಡೂ ಅರ್ಥ ಆಗಬಹುದು. ಭಯೋತ್ಪಾದನೆ ಉದ್ಯಮದ ಬಗ್ಗೆ ಇನ್‌ಶೂರೆನ್ಸ್. ಅಥವಾ ಇನ್‌ಶೂರೆನ್ಸ್ ಎಂಬ ಭಯೋತ್ಪಾದನೆ! ಸಾರಿ, ಅಥವಾ ಅಭಯೋತ್ಪಾದನಾ ಉದ್ಯಮ.



ಅಂತೂ ಇನ್ನು ಲೈಫ್ ಇನ್‌ಶೂರೆನ್ಸ್ ಮಾತ್ರವಲ್ಲ. ಡೆತ್ ಇನ್‌ಶೂರೆನ್ಸ್ ಕೂಡ ಬಂದು ಬಿಡುತ್ತೇರೀ.

ಅಥವಾ ಕೆಲವು ಆಪಣದವರು ಒಬ್ಬ ಚಪ್ಪಲಿಗಳ್ಳನನ್ನು ತಾವೇ ನೇಮಕ ಮಾಡಿಕೊಂಡಿರುವಂತೆ ಯಾರೋ ವಿದೇಶೀ ಇನ್‌ಶೂರೆನ್ಸ್ ಕಂಪೆನಿಯವರು ಹೆಣ ಇನ್‌ಶೂರೆನ್ಸ್ ಸ್ಕೀಮ್‌ನ್ನು ಡೆವಲಪ್ ಮಾಡಲು ಈ ರೀತಿ ಹೆಣಗಳ್ಳರನ್ನು ನೇಮಿಸಿರಬಹುದಾ? ಹೇಗೆ ಗೊತ್ತು?

ಏನೇ ಆಗಲಿ ಹಿಂದಿನವರು ಮಾಡಿದಂತೆ ನಿತ್ಯ ಸತ್ತವರ ಸಮಾಧಿದರ್ಶನ ವೃಂದಾವನದರ್ಶನ ಮಾಡಿಬರುವುದು ಒಂದು ಲೆಕ್ಕದಲ್ಲಿ ಎಲ್ಲ ರೀತಿಯಲ್ಲೂ ಒಳ್ಳೇದುರೀ.

ಏನೇ ಆಗಲಿ. ದಿನೇ ದಿನೇ ಒಂದೊಂದು ಹೊಸ ಉದ್ಯಮ ಹುಟ್ಟಿಕೊಳ್ಳುತ್ತಿರುವುದು ಅಭಿವೃದ್ಧಿಯ ಲಕ್ಷಣ ರೀ! ಮನಿ ಸರ್ಕ್ಯುಲೇಷನ್ ಆಗುತ್ತದಲ್ಲರೀ.

ನೋಡಿ ಇತ್ತೀಚೆಗೆ ಬೆಳಕುಕಂಡ ಪ್ರಶ್ನೋದ್ಯಮ ಅದೆಷ್ಟು ಒಳ್ಳೇದು ರೀ!

ಸುಮ್ಮನೆ ಸಂಸತ್ತಿಗೆ ಹೋಗಿ ಗೊರಕೆ ಹೊಡೆದು ಸೀಟು ಬಿಸಿಮಾಡಿ ಬರುವುದಕ್ಕಿಂತ ನಾಕು ಪ್ರಶ್ನೆ ಕೇಳಿದರೆ ಸಾಕು. ನಾಕು ಕಾಸಾದರೂ ಆಗುತ್ತದಲ್ಲರೀ? ಇನ್‌ವೆಸ್ಟ್‌ಮೆಂಟೂ ಇಲ್ಲ. ಮ್ಯಾನೇಜ್‌ಮೆಂಟೂ ಇಲ್ಲ.

ಇದರಿಂದ ಇನ್ನೊಂದು ಉದ್ಯಮವನ್ನು ಶುರುಮಾಡಬಹುದು ರೀ.

ಅದೇನೆಂದರೆ ಉತ್ತರೋದ್ಯಮ.

ಈ ವರ್ಷ ಉದ್ಯಮ ವರ್ಷ ರೀ! ಹೊಸ ಹೊಸ ಉದ್ಯಮ ಪ್ರಾರಂಭವಾಗುತ್ತದೆ. ಹಳೇ ಉದ್ಯಮಗಳನ್ನು ಗಡಿಪಾರು ಮಾಡುತ್ತವೆ.

ಹೇಗೆ ಹೇಳೋದು? ಇದೀಗ ಶವೋದ್ಯಮ ಬೆಳೆಯಲು ಶುರುವಾದರೆ ನಕಲಿ ಹೆಣಗಳನ್ನು ಹೂತಿಡುವ ಉದ್ಯಮ ಬೆಳೆಯಬಹುದು. ಅಥವಾ ಕ್ಲೋನಿಂಗ್ ತರಹ ಕೃತಕ ಮೂಳೆಗಳನ್ನೂ ಡೆವಲಪ್ ಮಾಡುವ ಆರೆಂಡಿ ಉದ್ಯಮ ಬೆಳೆಯಬಹುದು. ಕಲಬೆರಕೆ ಉದ್ಯಮನೂ ಉದ್ಭವಿಸಬಹುದು.

ಇದು ಹೀಗೇ ಮುಂದುವರಿದರೆ ಇನ್ನು ಮುಂದೆ ಲೋಕದಲ್ಲಿ ಒರಿಜಿನಲ್ ಮನುಷ್ಯ ಸಿಗುವುದು ಬಹಳ ಕಷ್ಟ ರೀ. ಎಲ್ಲಾ ಕಡೆ ಅಸೆಂಬುಲ್ ಮಾಡಿದ ಮನುಷ್ಯನೇ ಆಗುತ್ತಾನೆ ನೋಡಿ. ಪ್ರತಿಯೊಬ್ಬರಿಗೂ ಯಾರದೋ ಯಾರದೋ ಕೂದಲು, ಯಾರದೋ ತಲೆ, ಯಾರದೋ ಉಗುರು, ಯಾರದೋ ಹಲ್ಲು, ಇನ್ಯಾರದೋ ನಗು. ರಕ್ತ ಒಬ್ಬರದ್ದು. ಮಾಂಸ ಒಬ್ಬರದ್ದು. ಮೂಳೆ ಒಬ್ಬರದ್ದು. ಕಸಿ ಯಾವುದು ಹುಸಿ ಯಾವುದು ಎಂದು ಪತ್ತೆ ಹಚ್ಚಲು ಕಸಿಬಿಸಿಯಾಗುತ್ತದೆ ರೀ. ಪಾರ್ಟುಗಳೆಲ್ಲಾ ಬಾಡಿಗೆ ಸಿಗುವ ಕಾಲಬಂದೀತು.

ಇಷ್ಟರ ತನಕ ಹೆಣಗಳಿಗೆ ಇಷ್ಟು ಡಿಮಾಂಡ್ ಇದೆಯೆಂದು ಯಾರಿಗೆ ಗೊತ್ತಿತ್ತುರೀ?

ಅದಕ್ಕೆನೇ ಭಾರೀ ಭಾರೀ ಯುದ್ಧ ಶುರುವಾಗುತ್ತಿರುವುದು ಕಾಣುತ್ತೆ. ಇದ್ದರೂ ಇರಬಹುದು.

ಡಿಮಾಂಡ್ ಕಂಡು ಹಿಡಿಯುವುದೇ ಎಲ್ಲಕ್ಕಿಂತ ದೊಡ್ಡ ಉದ್ಯಮ ರೀ.

ಹಾಗೇ ರೀಸರ್ಚ್ ಮಾಡಿದರೆ ಅದೆಷ್ಟು ಒಳ್ಳೆ ಒಳ್ಳೆ ಬ್ಯುಸಿನೆಸ್ ಸಿಗುತ್ತದೆ ರೀ.

ಯಾವನೋ ಒಬ್ಬ ಸತತವಾಗಿ ನಿರಂತರ ವರನಾಗುತ್ತಾ ಅಲ್ಲಲ್ಲಿ ಮದುವೆಯಾಗುತ್ತಾ ಬರುವ ಒಂದು ಹೊಸ ಬ್ಯುಸಿನೆಸ್ ಶುರುಮಾಡಿದ್ದಾನಂತೆ ರೀ. ಎಷ್ಟು ಒಳ್ಳೇ ಬ್ಯುಸಿನೆಸ್ ನೋಡಿ.

ಇದೀಗ ನೋಡಿ ಅಪರಾಧೀಕರಣ ಎಂಬ ಹೊಸ ಬ್ಯುಸಿನೆಸ್ ಎಷ್ಟು ಪಾಪ್ಯುಲರ್ ಆಗುತ್ತದೆ ರೀ. ಸುಮ್ಮನೆ ಇದ್ದಿದ್ದ ಹಾಗೆ ಒಬ್ಬನನ್ನು ಕಳ್ಳ ಸುಳ್ಳ ಎಂದು ಮಾಡಿ ಹಾಕುವುದು. ಕೇಸು ಹಾಕುವುದು. ಅಪ ಪ್ರಚಾರ ಮಾಡುವುದು. ಅದಕ್ಕೊಂದು ನೆಟ್‌ವರ್ಕ್ ರೀ.

ಅದೆಷ್ಟು ಸುಲಭರೀ. ದೊಡ್ಡ ದೊಡ್ಡವರನ್ನು ಹಾಗೆ ಮಾಡಿದರೆ ದುಡ್ಡು ಜಾಸ್ತಿ ಬರುತ್ತೇರೀ. ಪಾಪ್ಯುಲರೂ ಆಗುತ್ತೆ ರೀ.

ನೋಡಿ ಆ ಸ್ವಾಮಿಗಳ ಮೇಲೆ ಹೇಗೆ ಹೊಸ ಹೊಸ ಕೇಸು ಡೆವಲಪ್, ಬಿಲ್ಡಪ್ ಮಾಡುತ್ತಾರೆ ನೋಡಿ.

ಪುಣ್ಯಕ್ಕೆ ಅವ್ನೋರ ಮುನ್ನೂರರ್ವತ್ತಾರು ಚಪ್ಪಲಿಗಳಲ್ಲಿ ಜೋಡೊಂದನ್ನು ಕದ್ದಿದ್ದಾರೆಂದು ಕೇಸು ಮಾಡಲಿಲ್ಲವಲ್ಲ? ಅಷ್ಟರ ಮಟ್ಟಿಗೆ ಮರ್ಯಾದೆ ಉಳಿಸಿದರಲ್ಲಾ? ಅದುವೇ ದೊಡ್ಡ ಪುಣ್ಯಾರೀ.

ಮತ್ತೂ ಕೂಡಾ ದೇವರು ಕದ್ದಿದ್ದಾರೆ ಎಂದರೆ ದೇವರೇ ಒಲಿದು ಬಂದಿರಬೇಕು. ಎಂದು ಪ್ರಚಾರಮಾಡಲಿಕ್ಕೆ ಎಡೆ ಇದೆಯಲ್ಲವಾ? ಆವಾಗ ಅದು ಭೂಷಣಂ ನತು ಧೂಷಣಂ ಆಗುದಿಲ್ಲವಾ? ದೇವರುಗಳನ್ನು ವಶಮಾಡಿಕೊಳ್ಳಬೇಕೆಂಬುದೇ ಸಕಲ ಶಾಸ್ತ್ರಾರ್ಥ ಅಲ್ಲವಾ?

ಅದಕ್ಕಿಂತ ದೇವರನ್ನು ಮಾರಾಟ ಮಾಡಿದ್ದಾರೆ ಎಂದು ಆಪಾದನೆ ಮಾಡಿದರೆ ಕೇಸು ಇನ್ನಷ್ಟು ಸ್ಟ್ರಾಂಗ್ ಆಗುತ್ತಿತ್ತು. ಜಾಮೀನೇ ಸಿಗದಿರುವಂತೆ ಸುಲಭವಾಗಿ ಮಾಡಬಹುದಿತ್ತು.

ಏನು ಮಾಡುವುದು? ಹೇಳಿಕೊಡುವವರಿಗೂ ಸರಿಯಾಗಿ ಹೇಳಿಕೊಡುವವರು ಬೇಕಲ್ಲವಾ? ಎಲ್ಲರಿಗೂ ಬೇತಿ ಕೊಡದೇ ಇದ್ದರೆ ಹೀಗೇ ಆಗುವುದು.

ಅದಿರಲಿ, ಅಂದ ಹಾಗೆ, ಹೀಗೆ ಹೊಸ ಹೊಸ ಉದ್ಯಮಗಳು ಮುಂದೆ ಮುಂದೆ ಬಂದರೆ ಅವು ಧರ್ಮವನ್ನೂ ಬೀಟ್ ಮಾಡುವುದು ಖಂಡಿತಾರೀ.

ಹೀಗೆ ಜನ ರಿಚ್ ಆಗಲು ಹೊರಟರೆ ಹಣ ಮಾಡುವ ಹಣಾಹಣಿ ಶುರುವಾದರೆ ಮುಂದಿನದಿನ ಅರ್ಥೋऽತಿರಿಚ್ಯತೇ ಧರ್ಮಂ, ಅರ್ಥೋऽತಿರಿಚ್ಯತೇ ಸರ್ವಮ್ ಎಂಬುದೇ ಮಹಾವಾಕ್ಯವಾಗುವುದರಲ್ಲಿ ಸಂದೇಹವಿದೆಯಾ?

ಯಾರಿಗಾದರೂ?

**- ಸುಶ್ರೀ**


*With Best Compliments from :*



**LAXMIDAS JEWELLERS**

"Megha Building" Balmatta Road,
Mangalore - 575 001.

**Phone : 2426060, 2421760**



ದಿನಾಂಕ 4-12-2005ರಂದು ಶ್ರೀ ಪುತ್ತಿಗೆ ವಿದ್ಯಾಪೀಠದ ಆಶ್ರಯದಲ್ಲಿ ಜರಗಿದ ವೇದಗಣಿತ ವಿಚಾರಗೋಷ್ಠಿಯಲ್ಲಿ ವಿದ್ಯಾಪೀಠದ ಕುಲಸಚಿವರಾದ ಶ್ರೀ ಪ್ರಸನ್ನಾಚಾರ್ಯ, ಗೋಷ್ಠಿ ನಿರ್ವಾಹಕರಾದ ಕುಂದಾಪುರದ ವೇದಗಣಿತ ಅಧ್ಯಯನ ವೇದಿಕೆಯ ನಿರ್ದೇಶಕರಾದ ಡಾ। ಎಸ್. ಎನ್. ಶ್ರೀನಿವಾಸ ಪಡಿಯಾರ್ ಮತ್ತು ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಶ್ರೀ ಉಪ್ಪುಂದ ಚಂದ್ರಶೇಖರ ಹೊಳ್ಳರನ್ನು ಕಾಣಬಹುದು.



ದಿನಾಂಕ 11-12-2005ರಂದು ಉಡುಪಿ ಶ್ರೀ ಗೀತಾಮಂದಿರದಲ್ಲಿ ಗೀತಾಜಯಂತಿ ಕಾರ್ಯಕ್ರಮದ ಅಂಗವಾಗಿ ಉಡುಪಿ ಆಸುಪಾಸಿನ 33 ಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ಪರ್ಯಾಯ ಶ್ರೀ ಅದಮಾರು ಮಠದ ಶ್ರೀ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ನೀಡಿ ಆಶೀರ್ವದಿಸಿದರು. ವೇದಿಕೆಯಲ್ಲಿ ವಿದ್ಯಾವಾಚಸ್ಪತಿ ಶ್ರೀ ಬನ್ನಂಜೆ ಗೋವಿಂದಾಚಾರ್ಯ, ಸಂಸ್ಕೃತ ಪಾಠ ಶಾಲೆಯ ನಿವೃತ್ತ ಪ್ರಾಂಶುಪಾಲರಾದ ಹರಿದಾಸ ಉಪಾಧ್ಯಾಯ ಮುಂತಾದವರು ಉಪಸ್ಥಿತರಿದ್ದರು.

# ಶ್ರೀ ಕೃಷ್ಣಾಪುರ ಮಠದ ಗುರುಪರಂಪರೆ

1. ಶ್ರೀ ಶ್ರೀ ಜನಾರ್ದನ ತೀರ್ಥರು
2. ಶ್ರೀ ಶ್ರೀ ವತ್ಸಾಂಕಿತ ತೀರ್ಥರು
3. ಶ್ರೀ ಶ್ರೀ ವಾಗೀಶ ತೀರ್ಥರು
4. ಶ್ರೀ ಶ್ರೀ ಲೋಕೇಶ ತೀರ್ಥರು
5. ಶ್ರೀ ಶ್ರೀ ಲೋಕನಾಥ ತೀರ್ಥರು
6. ಶ್ರೀ ಶ್ರೀ ಲೋಕಪ್ರಿಯ ತೀರ್ಥರು
7. ಶ್ರೀ ಶ್ರೀ ವಿದ್ಯಾದಿರಾಜ ತೀರ್ಥರು
8. ಶ್ರೀ ಶ್ರೀ ವಿಶ್ವವಾದಿರಾಜ ತೀರ್ಥರು
9. ಶ್ರೀ ಶ್ರೀ ವಿಶ್ವದೀಶ ತೀರ್ಥರು
10. ಶ್ರೀ ಶ್ರೀ ವಿಶ್ವೇಶ ತೀರ್ಥರು
11. ಶ್ರೀ ಶ್ರೀ ವಿಶ್ವವಂದ್ಯ ತೀರ್ಥರು
12. ಶ್ರೀ ಶ್ರೀ ವಿಶ್ವರಾಜ ತೀರ್ಥರು
13. ಶ್ರೀ ಶ್ರೀ ಧರಣೀಧರ ತೀರ್ಥರು
14. ಶ್ರೀ ಶ್ರೀ ಧಾರಾಧರ ತೀರ್ಥರು
15. ಶ್ರೀ ಶ್ರೀ ಪ್ರಜ್ಞಾಮೂರ್ತಿ ತೀರ್ಥರು
16. ಶ್ರೀ ಶ್ರೀ ತಪೋಮೂರ್ತಿ ತೀರ್ಥರು
17. ಶ್ರೀ ಶ್ರೀ ಸುರೇಶ್ವರ ತೀರ್ಥರು
18. ಶ್ರೀ ಶ್ರೀ ಜಗನ್ನಾಥ ತೀರ್ಥರು
19. ಶ್ರೀ ಶ್ರೀ ಸುರೇಶ ತೀರ್ಥರು
20. ಶ್ರೀ ಶ್ರೀ ವಿಶ್ವಪುಂಗವ ತೀರ್ಥರು
21. ಶ್ರೀ ಶ್ರೀ ವಿಶ್ವವಲ್ಲಭ ತೀರ್ಥರು



22. ಶ್ರೀ ಶ್ರೀ ವಿಶ್ವಭೂಷಣ ತೀರ್ಥರು
23. ಶ್ರೀ ಶ್ರೀ ಯಾದವೇಂದ್ರ ತೀರ್ಥರು
24. ಶ್ರೀ ಶ್ರೀ ಪ್ರಜ್ಞಾಮೂರ್ತಿ ತೀರ್ಥರು
25. ಶ್ರೀ ಶ್ರೀ ವಿದ್ಯಾದಿರಾಜ ತೀರ್ಥರು
26. ಶ್ರೀ ಶ್ರೀ ವಿದ್ಯಾಮೂರ್ತಿ ತೀರ್ಥರು
27. ಶ್ರೀ ಶ್ರೀ ವಿದ್ಯಾವಲ್ಲಭ ತೀರ್ಥರು
28. ಶ್ರೀ ಶ್ರೀ ವಿದ್ಯೇಂದ್ರ ತೀರ್ಥರು
29. ಶ್ರೀ ಶ್ರೀ ವಿದ್ಯಾನಿಧಿ ತೀರ್ಥರು
30. ಶ್ರೀ ಶ್ರೀ ವಿದ್ಯಾಸಮುದ್ರ ತೀರ್ಥರು
31. ಶ್ರೀ ಶ್ರೀ ವಿದ್ಯಾಪತಿ ತೀರ್ಥರು
32. ಶ್ರೀ ಶ್ರೀ ವಿದ್ಯಾದೀಶ ತೀರ್ಥರು
33. ಶ್ರೀ ಶ್ರೀ ವಿದ್ಯಾಪುಮ ತೀರ್ಥರು
34. ಶ್ರೀ ಶ್ರೀ ವಿದ್ಯಾರತ್ನ ತೀರ್ಥರು

**35. ಶ್ರೀ ಶ್ರೀ ವಿದ್ಯಾಸಾಗರ ತೀರ್ಥರು**

**(18-1-2006ರಂದು ಪರ್ಯಾಯ ಪೀಠಾರೋಹಣ ಮಾಡಲಿರುವ ಪ್ರಸಕ್ತ ಪೂಜ್ಯ ಪೀಠಾದಿಪತಿಗಳು.**

## 2006 ಫೆಬ್ರವರಿ ತಿಂಗಳ ವಿಶೇಷಗಳು

4 ರಥಸಪ್ತಮೀ
5 ಭೀಷ್ಮಾಷ್ಟಮೀ
6 ಮಧ್ವನವಮಿ - ಎಲ್ಲೂರು ರಾಶಿ ಪೂಜೆ
8 ಸರ್ವೈಕಾದಶೀ
9 ದ್ವಾದಶೀ ಹರಿವಾಸರ 8-15 ವಾದಿರಾಜ ಜಯಂತಿ
12 ಕುಂಭ ಸಂಕ್ರಮಣ
13 ಪೂರ್ಣಿಮಾ ಕುಂಜಾರುಗಿರಿ ದುರ್ಗಾರಥ
15 ಕೆಮ್ಮೂರ್ತ್ ವಿಷ್ಣುಮೂರ್ತಿ ರಥ
16 ಸಂಕಷ್ಟ ಚತುರ್ಥಿ ಚಂ. ಉ. ಘಂ. 9-07 ಅಂಬಲಪಾಡಿ ರಥ
18 ಕಾಪು ಜನಾರ್ದನ ರಥ
24 ಸರ್ವೈಕಾದಶೀ
26 ಮಹಾಶಿವರಾತ್ರಿ
27 ಅಮವಾಸ್ಯೆ - ಕುಂಜಾರು ರಾಶಿಪೂಜೆ
28 ಕಾರಿಂಜೆ ರಥ

# ಸುಗುಣಾಂತರಂಗ

ಸಂಪುಟ : 21 ಮಕರ ಮಾಸ ಸಂಚಿಕೆ : 1 ಜನವರಿ 2006 ಬೆಲೆ ರೂ. 6.50/-



**ಪತ್ರಿಕೆಯು 21ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ಪತ್ರಿಕೆಯ ಓದುಗರಿಗೆ, ಜಾಹೀರಾತುದಾರರಿಗೆ, ಲೇಖಕರಿಗೆ, ಅಭಿಮಾನಿ, ಹಿತೈಷಿಗಳಿಗೆ ಸಪ್ರಣಾಮ ಶುಭಾಶಯಗಳು.**

**– ಸುಗುಣ ಬಳಗ**

**ಮುಖಪುಟ : ಕಾಳೀಯ ಮರ್ದನ**
(ಕೃಷ್ಣಾಪುರ ಮಠ)


**ಮರ್ಮಮೀಮಾಂಸೆ** 4
ಸುಶ್ರೀ

**ಕೃಷ್ಣಾಪುರ ಮಠ ಗುರುಪರಂಪರೆ** 7

**ಮುಖಪುಟ ಲೇಖನ** 12

**ಭಗವದ್ ಗೀತೆ** 9
ಬನ್ನಂಜೆ ಗೋವಿಂದಾಚಾರ್ಯ

**ಶ್ರೀ ಸುಧಾ ಸುವಚನ** ಲೇಖಾಂಕ - 46 49
ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು.

**ಶ್ರೀಕೃಷ್ಣನ ಸಂದೇಶಕ್ಕೆ ಭಾರತ ಸಂವಾದ** 17
ಸಗ್ರಿ ರಾಘವೇಂದ್ರ ಉಪಾಧ್ಯಾಯ

**ತತ್ತ್ವೋದ್ಯೋತ** 24
ಪ್ರೊ। ಎಸ್. ವೆಂಕಟೇಶ ಮೂರ್ತಿ

**ನಮಗಿಬ್ಬರು; ನಾವಿಬ್ಬರೇ** 29
ಎ. ಬಿ. ಕುಂಜಾರ್, ಬೆಂಗಳೂರು

**ಕನ್ನಡದ ಹುಟ್ಟು – ಬೆಳವಣಿಗೆ** 33
ಕೋಟೇಶ್ವರ ಸೂರ್ಯನಾರಾಯಣ ರಾವ್

**ಈಶಾವಾಸ್ಯೋಪನಿಷತ್** 45
ಬಿಂದುಮಾಧವಾಚಾರ್ಯ, ನಾಗಸಂಪಿಗೆ


**ಇನ್ನಿತರ ಲೇಖನಗಳು ಒಳಪುಟಗಳಲ್ಲಿ**


**ಸಂಸ್ಥಾಪಕರು :**
**ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು**

**ನಿರ್ದೇಶಕ** : ಬನ್ನಂಜೆ ಗೋವಿಂದಾಚಾರ್ಯ
**ಸಂಪಾದಕ** : ಎಂ. ರಾಧಾಕೃಷ್ಣರಾವ್
**ಪ್ರಕಾಶಕ** : ಪ್ರಸನ್ನಾಚಾರ್ಯ
**ಮುದ್ರಕ** : ಬಿ.ಜಿ. ಸುಬ್ಬರಾವ್

**ಸಲಹಾ ಮಂಡಳಿ**
ಬನ್ನಂಜೆ ರಾಮಾಚಾರ್ಯ
ಮಳಗಿ ಜಯತೀರ್ಥಾಚಾರ್ಯ
ಡಾ। ಯು. ಪಿ. ಉಪಾಧ್ಯಾಯ
ಬಿಂದು ಮಾಧವಾಚಾರ್ಯ ನಾಗಸಂಪಿಗೆ
ಸಗ್ರಿ ರಾಘವೇಂದ್ರ ಉಪಾಧ್ಯಾಯ
ಡಾ। ಎನ್. ವೆಂಕಟೇಶ ರಾವ್
ಚಿಪ್ಪಗಿರಿ ನಾಗೇಂದ್ರಾಚಾರ್ಯ
ಗಂಜೀಫಾ ರಘುಪತಿ ಭಟ್
ಕಡೆಕಾರು ಶ್ರೀಶ ಭಟ್
ಉಡುಪಿ ರಾಮನಾಥಾಚಾರ್ಯ
ಬಿ.ಜಿ. ರವಿಕುಮಾರ್



**ಸಂಪರ್ಕವಿಳಾಸ :**
ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ
ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ
ದೂರವಾಣಿ : **(0820) 2522222**
Tel Fax : 0820-2521272
E-Mail:mprasannaacharya@yahoo.com
Website:http://WWW.shreeputhige.org


**ಚಂದಾವಿವರ**
**ವಾರ್ಷಿಕ: ರೂ. 80/- 15 ವರ್ಷ ರೂ. 1000/-**
**ಜಾಹೀರಾತು ವಿವರ :**
ಅರ್ಧ ಪುಟಕ್ಕೆ ರೂ. **750/-** ಒಂದು ಪುಟಕ್ಕೆ ರೂ. **1500/-**